ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 31 ಗುರುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 136 | ಪುಟಗಳು: 12+IV

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಒಂದೇ ಕುಟುಂಬದ ನಾಲ್ವರ ಆತ್ಮಹತ್ಯೆ ಪ್ರಕರಣ

ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಆರು ಮಂದಿ ವಿರುದ್ಧ ಪ್ರಕರಣ ದಾಖಲು

- ನಾಲ್ವರ ಬಂಧನ
- ಉಳಿದಿಬ್ಬರು ನಾಪತ್ತೆ

ಮೈಸೂರು,ಆ.30–ಮೈಸೂರಿನ ಚಾಮುಂಡಿಪುರಂನಲ್ಲಿ ಸಂಭವಿಸಿದ ಒಂದೇ ಕುಟುಂಬದ ನಾಲ್ವರ ನಿಗೂಢ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ದಂಪತಿ ಸೇರಿ 6 ಮಂದಿ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಾಗಿದ್ದು, ಅವರಲ್ಲಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಡೀಪಾಳ್ಯದ ದಲ್ಲಾಳಿ ಎನ್.ಪಿ. ಮಂಜುನಾಥ್, ಅವರ ಪತ್ನಿ, ಕೋಟೆಹುಂಡಿ ಮಹದೇವು, ಬನ್ನೂರು ರವಿ, ಕ್ಯಾಸೆಟ್ ರಮೇಶ ಮತ್ತು ಸಿ.ಹೆಚ್. ಕ್ರೇಟ್ ಮಹದೇವಣ್ಣ ಆರೋಪಕ್ಕೆ ಗುರಿಯಾದವರಾಗಿದ್ದು, ಇವರಲ್ಲಿ ಕೋಟೆಹುಂಡಿ ಮಹದೇವು ಮತ್ತು ಎನ್.ಪಿ.ಮಂಜುನಾಥ್ ಪತ್ನಿ ಹೊರತುಪಡಿಸಿ ಉಳಿದ ನಾಲ್ವರನ್ನು ಕೆ.ಆರ್. ಠಾಣೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ವಿವರ: ಚಾಮುಂಡಿಪುರಂನ 3ನೇ ಕ್ರಾಸ್‌ನಲ್ಲಿ ವಾಸವಿದ್ದು, ಬಂಡೀಪಾಳ್ಯ ಎಪಿಎಂಸಿಯಲ್ಲಿ ಗೋಡೌನ್ ಹೊಂದಿರುವ ತರಕಾರಿ ಮಾರುಕಟ್ಟೆ ದಲ್ಲಾಳಿ ಮಹದೇವಸ್ವಾಮಿ, ಅವರ ಪತ್ನಿ ಅನಿತಾ, ಪುತ್ರಿಯರಾದ ಚಂದ್ರಕಲಾ ಮತ್ತು ಧನಲಕ್ಷ್ಮಿಯವರ ಶವಗಳು ಭಾನುವಾರ ಅವರ ಮನೆಯಲ್ಲೇ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದವು. ಮನೆಯನ್ನು ಪೊಲೀಸರು ಹಾಗೂ ಎಫ್‌ಎಸ್‌ಎಲ್ ಸಿಬ್ಬಂದಿ ಪರಿಶೀಲನೆ ನಡೆಸಿದಾಗ ಡೆತ್‌ನೋಟ್ ಪತ್ತೆಯಾಗಿದ್ದು ಅದರಲ್ಲಿ ತಮ್ಮ ಸಾವಿಗೆ ಮೇಲಿನ ಆರು ಆರೋಪಿಗಳು ಕಾರಣ ಎಂದು ನಮೂದಿಸಲಾಗಿತ್ತು. ಈ ಡೆತ್ ನೋಟ್ ಆಧರಿಸಿ ಅನಿತಾ ಅವರ ತಾಯಿ ಪ್ರೇಮಕುಮಾರಿ ನೀಡಿದ ದೂರಿನನ್ವಯ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿಕೊಂಡ ಕೆ.ಆರ್.ಠಾಣೆ ಪೊಲೀಸರು ನಾಲ್ವರನ್ನು ಬಂಧಿಸಿ, ಕೋಟೆಹುಂಡಿ ಮಹದೇವ ಮತ್ತು ಮಂಜುನಾಥ್ ಪತ್ನಿಗಾಗಿ ಹುಡುಕಾಟ ನಡೆಸಿದ್ದಾರೆ.

ಎಟಿಎಂ ಕಾರ್ಡ್ ಬದಲಿಸಿ 40 ಸಾವಿರ ಡ್ರಾ ಮಾಡಿ ವಂಚನೆ

ಮೈಸೂರು,ಆ.30–ಎಟಿಎಂ ಕಾರ್ಡ್ ಸಕ್ರಿಯಗೊಳಿಸಲು ನೆರವಾಗುವ ನೆಪದಲ್ಲಿ ಕಾರ್ಡ್ ಬದಲಿಸಿ ಭಾರತೀಯ ಭಾಷಾ ಸಂಸ್ಥಾನದ ಲೆಕ್ಕಪತ್ರ ಸಲಹೆಗಾರರೊಬ್ಬರ ಖಾತೆಯಿಂದ ಅಕ್ರಮವಾಗಿ 40 ಸಾವಿರ ರೂ. ಡ್ರಾ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಲಕ್ಷ್ಮೀಪುರಂ ನಿವಾಸಿಯಾಗಿರುವ ಅಂಚೆ ಇಲಾಖೆ ನಿವೃತ್ತ ಸೀನಿಯರ್ ಪೋಸ್ಟ್ ಆಫೀಸರ್ ಹಾಗೂ ಹಾಲಿ ಭಾರತೀಯ ಭಾಷಾ ಸಂಸ್ಥಾನದಲ್ಲಿ ಒಪ್ಪಂದದ ಮೇರೆಗೆ ಲೆಕ್ಕಪತ್ರ ಸಲಹೆಗಾರರಾಗಿರುವ ನರಸಿಂಹಮೂರ್ತಿ(78) ವಂಚನೆಗೊಳಗಾದವರಾಗಿದ್ದು, ಇವರ ಎಟಿಎಂ ಕಾರ್ಡ್ ಅವಧಿ ಮುಗಿದ ಕಾರಣ ಬ್ಯಾಂಕ್‌ನಿಂದ ಅವರಿಗೆ ಹೊಸ ಎಟಿಎಂ ಕಾರ್ಡ್ ನೀಡಲಾಗಿತ್ತು. ಈ ಕಾರ್ಡ್ ಅನ್ನು ಸಕ್ರಿಯಗೊಳಿಸಲು ಅವರು ಜಯಲಕ್ಷ್ಮಿಪುರಂ ಟೆಂಪಲ್ ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ಎಟಿಎಂಗೆ ಆಗಸ್ಟ್ 27ರಂದು ಬೆಳಗ್ಗೆ 11 ಗಂಟೆಗೆ ಹೋಗಿದ್ದು, ಅವರಿಗೆ ಕಾರ್ಡ್ ಸಕ್ರಿಯಗೊಳಿಸಲು ತೊಂದರೆಯಾದಾಗ ಎಟಿಎಂ ಹೊರಗೆ ನಿಂತಿದ್ದ ವ್ಯಕ್ತಿ ಬಂದು ಇವರ ಕಾರ್ಡ್ ಅನ್ನು ಸಕ್ರಿಯಗೊಳಿಸಿ, 24 ಗಂಟೆ ಕಾಲ ಹಣ ಡ್ರಾ ಮಾಡಬೇಡಿ ಎಂದು ಹೇಳಿ ಹೋಗಿದ್ದಾನೆ. ನಂತರ ಅದೇ ದಿನ ಮಧ್ಯಾಹ್ನ 3.30ರಲ್ಲಿ ತಲಾ 10 ಸಾವಿರ ರೂ.ನಂತೆ ನಾಲ್ಕು ಬಾರಿ ಒಟ್ಟು 40 ಸಾವಿರ ರೂ. ಡ್ರಾ ಮಾಡಿರುವ ಬಗ್ಗೆ ಇವರ ಮೊಬೈಲ್‌ಗೆ ಮೆಸೇಜ್ ಬಂದಿದೆ.

ವಂಚಕ ಸಹಾಯ ಮಾಡುವ ನೆಪದಲ್ಲಿ ನರಸಿಂಹಮೂರ್ತಿಯವರ ಕಾರ್ಡ್ ಅನ್ನು ಆತ ತೆಗೆದುಕೊಂಡು ಬೇರೆ ಕಾರ್ಡ್ ಅವರಿಗೆ ಕೊಟ್ಟು ನಂತರ ಅವರ ಕಾರ್ಡ್‌ನಿಂದ ಹಣ ಡ್ರಾ ಮಾಡಿದ್ದಾನೆ ಎಂಬುದು ಗೊತ್ತಾಗಿದೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಚಾಮರಾಜನಗರ ಜಿಲ್ಲೆಯ ಕೊಟ್ಟಕೆರೆ ಗ್ರಾಮದ ಸರ್ಕಾರಿ ಶಾಲೆಯಲ್ಲಿನ 150 ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಸೇವಿಸಲು ಅನುಕೂಲವಾಗಲು ಸ್ಟೀಲ್ ತಟ್ಟೆಗಳನ್ನು ಮೈಸೂರಿನ ದಕ್ಷ ಕಾಲೇಜು ವತಿಯಿಂದ ಕಾಲೇಜಿನ ಸಂಸ್ಥಾಪಕ ಜಯಚಂದ್ರರಾಜು ಇತ್ತೀಚೆಗೆ ವಿತರಣೆ ಮಾಡಿದರು. ಈ ವೇಳೆ ಮಕ್ಕಳು ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

ಬಂಡೀಪುರದ ಹುಲಿ ಸಂರಕ್ಷಿತ ಪ್ರದೇಶದ ನೂತನ ನಿರ್ದೇಶಕರಾಗಿ ಪ್ರಭಾಕರನ್ ಅಧಿಕಾರ ಸ್ವೀಕಾರ

ಮೈಸೂರು,ಆ.30(ಎಂಟಿವೈ)–ಬಂಡೀಪುರದ ಹುಲಿ ಸಂರಕ್ಷಿತ ಪ್ರದೇಶದ ನೂತನ ನಿರ್ದೇಶಕರಾಗಿ ಡಿಸಿಎಫ್ ಎಸ್. ಪ್ರಭಾಕರನ್ ಅಧಿಕಾರ ಸ್ವೀಕರಿಸಿದರು.



ಈ ಹಿಂದೆ ಬಂಡೀಪುರದ ನಿರ್ದೇಶಕರಾಗಿದ್ದ ಡಾ.ಪಿ.ರಮೇಶ್ ಕುಮಾರ್ ಅವರು 2 ದಿನಗಳ ಹಿಂದಷ್ಟೇ ಮೈಸೂರು ವಿಭಾಗದ ಪ್ಲಾನಿಂಗ್ ವಿಭಾಗಕ್ಕೆ ಸಿಎಫ್ ಆಗಿ ವರ್ಗಾವಣೆಗೊಂಡಿದ್ದರು. ಇದರಿಂದ ತೆರವಾದ ಸ್ಥಳಕ್ಕೆ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಎಸ್.ಪ್ರಭಾಕರನ್ ಅವರನ್ನು ನಿಯೋಜಿಸಿ ಸರ್ಕಾರ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನ ಬಂಡೀಪುರದ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

ಸಂವಿಧಾನವೇ ಭಾರತೀಯರ ಪಾಲಿನ ಮಹಾನ್ ಗ್ರಂಥ



ಮೈಸೂರಿನ ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಉದ್ಘಾಟಿಸಿದರು.

ಮೈಸೂರು, ಆ.30(ಸಿಎನ್)–ಎಲ್ಲಾ ಭಾರತೀಯರಿಗೆ ಮಹಾಗ್ರಂಥ ಸಂವಿಧಾನ. ಅಧಿಕಾರ ಆಸೆಯಿಲ್ಲದೆ, ಎಲ್ಲರನ್ನೂ ಸಮಾನರಾಗಿ ಕಂಡ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಕೇವಲ ಭಾರತದ ನಾಯಕರಲ್ಲ. ಇಡೀ ವಿಶ್ವಕ್ಕೆ ನಾಯಕರು ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಹೆಚ್.ಎನ್.ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು.

ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಸ್‌ಐಆರ್) ಹಾಗೂ ಸಿಎಫ್‌ಟಿಆರ್‌ಐ ಎಸ್ಸಿ–ಎಸ್ಟಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬುಧವಾರ ಆಯೋಜಿಸಿದ್ದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅವರಿಗೆ ಭಾರತದಲ್ಲಿ ಸರಿಯಾದ ಮನ್ನಣೆ ಸಿಗಲಿಲ್ಲ. ಆದರೆ ವಿವಿಧ ದೇಶಗಳಲ್ಲಿ ಅವರ ನೆನಪಿಗಾಗಿ ಪ್ರತಿಮೆಗಳನ್ನು ನಿರ್ಮಿಸಿದ್ದಾರೆ. ಕೊಲಂಬೊದಲ್ಲಿ ಅಂಬೇಡ್ಕರ್ ಅವರು ಓದಿದ ಕಾಲೇಜಿನಲ್ಲಿ ಪ್ರತಿಮೆ ನಿರ್ಮಾಣ ಮಾಡುವ ಮೂಲಕ ಗೌರವ ಸಮರ್ಪಿಸಿದ್ದಾರೆ. ಆದರೆ ಭಾರತದಲ್ಲಿ ಅಂಬೇಡ್ಕರ್ ಅಂದರೆ ದಲಿತರು, ದಲಿತರು ಅಂದರೆ ಅಂಬೇಡ್ಕರ್ ಅನ್ನೋ ರೀತಿ ಬಿಂಬಿಸಿದ್ದಾರೆ. ಜಾಗತಿಕ ಮನ್ನಣೆ ಪಡೆದ ನಾಯಕನಿಗೆ ದಲಿತರಿಗೆ ಮಾತ್ರ ಸೀಮಿತ ಮಾಡಿರುವುದು ಬೇಸರದ ಸಂಗತಿ ಎಂದರು.

ದಲಿತರ ಪರವಾಗಿ ಮಾತ್ರ ಅಂಬೇಡ್ಕರ್ ಇರಲಿಲ್ಲ. ವೈಸ್‌ರಾಯ್ ಜೊತೆ ಮಂತ್ರಿ ಸ್ಥಾನ ಅಲಂಕರಿಸಿದ್ದರು. ಮಹಿಳೆಯರಿಗಾಗಿ ವಿಶೇಷ ಸ್ಥಾನಮಾನಕ್ಕಾಗಿ ಹೋರಾಡಿದವರು. ಅಂದು ಅವರು ಮಂಡಿಸಿದ ಬಿಲ್ ಪಾಸ್ ಆಗದೇ ಇದ್ದಾಗ, ತಕ್ಷಣ ಮಂತ್ರಿಗಿರಿಗೆ ರಾಜೀನಾಮೆ ನೀಡಿ ಹೊರಬಂದರು. ಅಂಬೇಡ್ಕರ್ ಅವರ ಕಾಲಾನಂತರ ಆ ಬಿಲ್ ಪಾಸ್ ಆಯಿತು. ಹಿಂದೂ ಮಹಿಳೆಯರು ಪುರುಷರಿಗೆ ಸಮಾನವಾಗಿ ಜೀವಿಸುತ್ತಿದ್ದಾರೆ ಎಂದರೆ ಅದು ಬಾಬಾ ಸಾಹೇಬ್ ಅಂಬೇಡ್ಕರ್ ಕೊಡುಗೆ ಎಂದರು.

> ಮುಂದಿನ ದಿನಗಳಲ್ಲಿ ಭಾರತವು ಚಂದ್ರ ಅಂಗಳಕ್ಕೆ ಮಾನವ ಸಹಿತ ನೌಕೆ ಕಳುಹಿಸಲು ಮುಂದಾದರೆ, ಗಗನಯಾತ್ರಿಗಳಿಗೆ ಬುತ್ತಿ ಕಟ್ಟಿಕೊಡುವ ಕೆಲಸ ಸಿಎಫ್‌ಟಿಆರ್‌ಐ ಮಾಡಲಿ.
> **–ಹೆಚ್.ಎನ್.ನಾಗಮೋಹನ್ ದಾಸ್, ನಿವೃತ್ತ ನ್ಯಾಯಮೂರ್ತಿ**

ಬೀದಿಗಳಿಗೆ, ರಸ್ತೆಗಳಿಗೆ ಅಂಬೇಡ್ಕರ್ ಅವರ ಹೆಸರು ಇಟ್ಟರೆ ಸಾಲದು. ಅವರ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಜೊತೆಗೆ ಸಂವಿಧಾನವನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕಿದೆ. ಮಹಿಳೆಯರು, ಬುಡಕಟ್ಟು, ಗ್ರಾಮೀಣ ಮಂದಿ ಅಕ್ಷರ ಪಡೆಯುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ಸಂವಿಧಾನ ಎಂದರು.

ಮಹಾನ್ ಗ್ರಂಥ ಸಂವಿಧಾನವನ್ನು ಯಾರೂ ಓದಲಿಲ್ಲ. ಭಾರತ ದೇಶವನ್ನ ಅರ್ಥ ಮಾಡಿಕೊಳ್ಳದೇ ಭಾರತದ ಸಂವಿಧಾನ ಅರ್ಥವಾಗಲ್ಲ. ದೇಶವೆಂದರೆ ಕೇವಲ ಮಣ್ಣಲ್ಲ, ದೇಶವೆಂದರೆ ಮನುಷ್ಯರು ಎಂಬ ತೆಲುಗು ಗಾದೆಯನ್ನು ಸ್ಮರಿಸಿದರು. ಭಾರತದಲ್ಲಿ ಇಂದು 4635 ಜಾತಿಗಳು, ಉಪಜಾತಿಗಳಿವೆ. ಅಂತಹ ಸಹಿಷ್ಣು ದೇಶ ಭಾರತ. ಆದರೆ ಮೂಲ ನಿವಾಸಿಗರು ಮಾತ್ರ ಜಾತಿ, ಧರ್ಮ ಎಂದು ಕಿತ್ತಾಡುತ್ತಾ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಸಮಸ್ಯೆಗಳಿಗೆ ಸಂವಿಧಾನ ಕಾರಣವಲ್ಲ. ನಾವು ಸಂವಿಧಾನವನ್ನು ಸರಿಯಾಗಿ ಓದದೇ, ಅರ್ಥ ಮಾಡಿಕೊಳ್ಳದೇ ದೂಷಿಸುವುದು ಸರಿಯಿಲ್ಲ ಎಲ್ಲರೂ ಸಂವಿಧಾನವನ್ನು ಓದಿ, ಅರ್ಥ ಮಾಡಿಕೊಳ್ಳಿ, ಸಮಸ್ಯೆಗಳನ್ನು, ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಶಕ್ತಿ ಬರುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಸ್‌ಐಆರ್, ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ರಂಗಾಯಣ ನಿವೃತ್ತ ನಿರ್ದೇಶಕ ಸಿ.ಬಸವಲಿಂಗಯ್ಯ, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ಸಿಎಫ್‌ಟಿಆರ್‌ಐ ಎಸ್–ಎಸ್ಟಿ ಕಾರ್ಮಿಕ ಅಸೋಸಿಯೇಷನ್ ಅಧ್ಯಕ್ಷ ಶಿವಸ್ವಾಮಿ, ಪ್ರಧಾನ ಕಾರ್ಯದರ್ಶಿ ಜಿ.ಸುರೇಶ್‌ಕುಮಾರ್, ಉಪಾಧ್ಯಕ್ಷ ಎಸ್.ಜಿ. ವಾಲ್ಡೆ, ಖಜಾಂಚಿ ಎಸ್.ರಮೇಶ್, ಜಂಟಿ ಕಾರ್ಯದರ್ಶಿ ಸಂತೋಷ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೇಜ್ರಿವಾಲ್ ಪ್ರಧಾನಿ ಹುದ್ದೆಯ ರೇಸ್‌ನಲ್ಲಿಲ್ಲ



ನವದೆಹಲಿ: ಇಂಡಿಯಾ ಬಣದ ಪ್ರಧಾನಿ ಹುದ್ದೆಯ ಆಕಾಂಕ್ಷಿಗಳಲ್ಲಿ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಕೂಡ ಇದ್ದಾರೆ ಎಂಬ ಆಪ್ ನಾಯಕರ ಹೇಳಿಕೆ ಬೆನ್ನಲ್ಲೇ ಕೇಜ್ರಿವಾಲ್ ಪ್ರಧಾನಿ ಹುದ್ದೆಯ ರೇಸ್‌ನಲ್ಲಿಲ್ಲ ಎಂದು ದೆಹಲಿ ಸಚಿವೆ ಆತಿಷಿ ಹೇಳಿದ್ದಾರೆ.

ಕೇಜ್ರಿವಾಲ್ ಪ್ರಧಾನಿ ಹುದ್ದೆಯ ರೇಸ್‌ನಲ್ಲಿ ಇಲ್ಲ ಎಂದು ಆತಿಷಿ ಹೇಳಿದ್ದು, ಪಕ್ಷದ ರಾಷ್ಟ್ರೀಯ ವಕ್ತಾರೆ ಪ್ರಿಯಾಂಕಾ ಕಕ್ಕರ್ ಹೇಳಿಕೆಗಳ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ದೆಹಲಿ ಕ್ಯಾಬಿನೆಟ್ ಸಚಿವೆ ಆತಿಷಿ, ಅರವಿಂದ್ ಕೇಜ್ರಿವಾಲ್ ದೇಶದ ಪ್ರಧಾನಿಯಾಗುವ ರೇಸ್‌ನಲ್ಲಿ ಇಲ್ಲ ಎಂದು ನಾನು ಅಧಿಕೃತಗೊಳಿಸುತ್ತಿದ್ದೇನೆ. ಸಂವಿಧಾನ, ಪ್ರಜಾಪ್ರಭುತ್ವ ಮತ್ತು ದೇಶವನ್ನು ಉಳಿಸಲು ಅವರು ಇಂಡಿಯಾ ಮೈತ್ರಿಕೂಟಕ್ಕೆ ಸೇರಿದ್ದಾರೆ, ಕಕ್ಕರ್ ಅವರ ಅಭಿಪ್ರಾಯಗಳು ವೈಯಕ್ತಿಕವಾಗಿದೆ ಎಂದರು. ಆಮ್ ಆದ್ಮಿ ಪಕ್ಷದ ಮುಖ್ಯ ರಾಷ್ಟ್ರೀಯ ವಕ್ತಾರ ಪ್ರಿಯಾಂಕಾ ಕಕ್ಕರ್ ಅವರು ಬುಧವಾರ ಅರವಿಂದ್ ಕೇಜ್ರಿವಾಲ್ ಅವರನ್ನು ವಿರೋಧ ಪಕ್ಷಗಳ ಮೈತ್ರಿಕೂಟ ಇಂಡಿಯಾದ ಪ್ರಧಾನಿ ಹುದ್ದೆಯ ಆಕಾಂಕ್ಷಿ ಎಂದು ಹೇಳಿದ್ದರು.

ಕೇಜ್ರಿವಾಲ್ ಅವರು ದೆಹಲಿಯ ಮುಖ್ಯಮಂತ್ರಿಯಾಗಿ ಇಡೀ ದೇಶಕ್ಕೆ ಪ್ರಯೋಜನವಾಗುವಂತಹ ಮಾದರಿಯನ್ನು ನೀಡಿದ್ದಾರೆ ಎಂದು ಕಕ್ಕರ್ ಹೇಳಿದ್ದರು. ಅವರ ಈ ಹೇಳಿಕೆ ವ್ಯಾಪಕ ಚರ್ಚೆಗೀಡಾದ ಬೆನ್ನಲ್ಲೇ ಈ ಬಗ್ಗೆ ಸ್ಪಷ್ಟನೆ ನೀಡಿರುವ ದೆಹಲಿ ಸಚಿವೆ ಆತಿಷಿ, ಅರವಿಂದ್ ಕೇಜ್ರಿವಾಲ್ ಪ್ರಧಾನಿ ಹುದ್ದೆಯ ರೇಸ್‌ನಲ್ಲಿಲ್ಲ. ನಮ್ಮ ಮುಖ್ಯಮಂತ್ರಿಗಳಿಗೆ ಅಂತಹ ಆಕಾಂಕ್ಷೆಗಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅನಾಹುತದಲ್ಲಿ ಮೃತಪಟ್ಟ ಹಾವು ಸಂರಕ್ಷಕರ ಕುಟುಂಬಕ್ಕೆ ಪರಿಹಾರ ನೀಡಿ

ಸಿಎಂಗೆ ಸ್ನೇಕ್ ಶ್ಯಾಮ್ ಮನವಿ



ಮೈಸೂರು,ಆ.30–ಹಾವು ರಕ್ಷಕರು ಹಾವುಗಳ ರಕ್ಷಣೆಗೆ ಮುಂದಾದಾಗ ಅನಾಹುತ ಸಂಭವಿಸಿ ಸಾವನ್ನಪ್ಪಿದರೆ ಅವರ ಕುಟುಂಬದವರಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡಬೇಕೆಂದು ಉರಗ ತಜ್ಞ ಸ್ನೇಕ್ ಶ್ಯಾಮ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ತಾವು ಕಳೆದ 46 ವರ್ಷಗಳಿಂದ ಮೈಸೂರಿನಲ್ಲಿ ಹಾವುಗಳ ಸಂರಕ್ಷಣೆಯಲ್ಲಿ ತೊಡಗಿದ್ದು ಈವರೆಗೆ ಸುಮಾರು 86,440 ಹಾವುಗಳನ್ನು ರಕ್ಷಣೆ ಮಾಡಿರುವುದಾಗಿ ಮನವಿಯಲ್ಲಿ ತಿಳಿಸಿರುವ ಅವರು, ಇದೀಗ ತಮ್ಮ ಪುತ್ರ ಸೂರ್ಯಕೀರ್ತಿ ಕೂಡ ಹಾವುಗಳ ಸಂರಕ್ಷಣೆಯಲ್ಲಿ ತೊಡಗಿದ್ದಾನೆ ಎಂದು ತಿಳಿಸಿದ್ದಾರೆ.

ರಾಜ್ಯಾದ್ಯಂತ ಹಾವುಗಳ ಸಂರಕ್ಷಕರು ಅವರವರ ಪ್ರದೇಶದಲ್ಲಿ ಹಾವುಗಳ ರಕ್ಷಣೆ ಮಾಡುತ್ತಿದ್ದಾರೆ. ಅನೇಕರು ಈ ಸಂದರ್ಭದಲ್ಲಿ ಹಾವಿನ ಕಡಿತಕ್ಕೆ ಒಳಗಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಇತ್ತೀಚೆಗೆ ನೆಲಮಂಗಲದಲ್ಲಿ ಲೋಕೇಶ್, ಚಿಕ್ಕಮಗಳೂರಿನಲ್ಲಿ ನರೇಶ್, ಕನಕಪುರದಲ್ಲಿ ದೀಪು ಎಂಬುವರು ಹಾವುಗಳ ರಕ್ಷಣೆ ವೇಳೆ ಪ್ರಾಣ ಕಳೆದುಕೊಂಡಿದ್ದು, ಅವರ ಕುಟುಂಬಗಳು ತೀವ್ರ ಕಷ್ಟಕ್ಕೊಳಗಾಗಿವೆ. ಆದ್ದರಿಂದ ಅವರ ಕುಟುಂಬದವರಿಗೆ ಸರ್ಕಾರದಿಂದ ಪರಿಹಾರ ನೀಡಬೇಕು ಎಂದು ಅವರು ಕೋರಿದ್ದಾರೆ. ರಾಜ್ಯಾದ್ಯಂತ ದಿನಕ್ಕೆ ಸುಮಾರು 50ರಿಂದ 60 ಮಂದಿ ಹಾವಿನ ಕಡಿತಕ್ಕೆ ಒಳಗಾಗುತ್ತಿದ್ದಾರೆ. ಇವರಲ್ಲಿ ಬಡ ಕೂಲಿ ಕಾರ್ಮಿಕರು ಹಾಗೂ ರೈತರೇ ಹೆಚ್ಚಾಗಿರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವಿನ ಕಡಿತಕ್ಕೆ ಒಳಗಾದವರಿಗಾಗಿ ಪ್ರತ್ಯೇಕವಾಗಿ 10 ಹಾಸಿಗೆಗಳನ್ನು ಮೀಸಲಿಡಬೇಕು ಎಂದು ಸ್ನೇಕ್ ಶ್ಯಾಮ್ ತಮ್ಮ ಮನವಿಯಲ್ಲಿ ಕೋರಿದ್ದಾರೆ.


ಟಿ.ನರಸೀಪುರದ ಕೆ.ಡಿ.ಪಿ ಸದಸ್ಯರಾದ
ಸುನೀಲ್ ಬೋಸ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ಇವರಿಗೆ ಆಯಸ್ಸು ಆರೋಗ್ಯ, ಐಶ್ವರ್ಯ ಮತ್ತು ಇವರಿಗೆ ಉನ್ನತ ಸ್ಥಾನಮಾನ ದೊರಕಲಿ.
ಲಕ್ಷ್ಮಿನಾರಾಯಣ
ಪುಟ್ಟಿ ರಂಗಸ್ವಾಮಿ
ಗ್ರಾ.ಪಂ. ಅಧ್ಯಕ್ಷರು
ನಾಗೇಂದ್ರ
ಗ್ರಾ.ಪಂ. ಸದಸ್ಯರು
ಮರಿಗೌಡ
ರಂಗಸ್ವಾಮಿ
ಆರ್.ಸಿದ್ದೇಗೌಡ
ಪಿಡಬ್ಲ್ಯೂ ಕಂಟ್ರ್ಯಾಕ್ಟರ್, ಕಾಂಗ್ರೆಸ್ ಮುಖಂಡರು, ಮೇಗಳಕೊಪ್ಪಲು
ಹಾಗೂ ಖಜಾಂಚಿ, ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್


ಹುಟ್ಟು ಹಬ್ಬದ ಶುಭಾಶಯಗಳು
ಸುನಿಲ್ ಬೋಸ್
ಶುಭ ಕೋರುವವರು: ನಾಗರಾಜ್ ಆರ್ (ನಿರ್ದೇಶಕ) ಕರ್ನಾಟಕ ಪ್ರದೇಶ ಕುರುಬರ ಸಂಘ
ಸ್ವಾಮಿ ವೈ.ಎನ್ (ಮ್ಯಾನೇಜರ್) LOST & FOUND MYSORE
ಕಳೆದ ೮ ವರ್ಷಗಳಿಂದ ಒಂದೇ ರಜೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ.


ಸ್ನೇಹಜೀವಿ, ಸಮಾಜ ಸೇವಕ, ಯುವ ನೇತಾರ
ಶ್ರೀ ಸುನೀಲ್ ಬೋಸ್‌ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ಇವರಿಗೆ ಆಯಸ್ಸು, ಆರೋಗ್ಯ, ಯಶಸ್ಸು ಕರುಣಿಸಲೆಂದು ಹಾರೈಸುತ್ತೇವೆ
ಶುಭಕೋರುವವರು :
ಮಹಾನಾಯಕ ಸೇವಾ ಸಮಿತಿ
ಅಶೋಕಪುರಂ, ಮೈಸೂರು

ನಕ್ಕರೆ ಅದೇ ಸ್ವರ್ಗ

ರಾಮು : ಡಾಕ್ಟ್ರೆ, ನನ್ನ ಹಲ್ಲು ಹುಳ ತಿಂತಿದ್ದು ಮೇಲಿನ ಹಲ್ಲನ್ನು, ನೀವ್ಯಾಕೆ ಕೆಳಗಿನ ಹಲ್ಲು ಕಿತ್ರಿ.

ಡಾಕ್ಟರ್ : ಹುಳ ಕೆಳಗಿನ ಹಲ್ಲಿನ ಮೇಲೆ ಕುಳಿತು ಮೇಲಿನ ಹಲ್ಲು ತಿನ್ನುತ್ತಿತ್ತು... ಡಾಕ್ಟರ್ ನಾನಾ, ನೀನಾ?

ಮೈಸೂರು ಮಿತ್ರ

ಗುರುವಾರ, 31 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಿಜವಾದ ನಂಬಿಕೆ, ನಿಜವಾದ ಜ್ಞಾನ, ನಿಜವಾದ ಆಚರಣೆಯೇ ನಿಜವಾದ ಮುಕ್ತಿ ಮಾರ್ಗ –ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅನ್ನ ಹಾಕಿದ ಮನೆ ಹಾಳಲ್ಲ, ಗೊಬ್ಬರ ಹಾಕಿದ ಹೊಲ ಹಾಳಲ್ಲ

ನಿಮ್ಮ ಪತ್ರಗಳು

ಫ್ಲೆಕ್ಸ್ ಮುಕ್ತ ಮೈಸೂರು ನಗರ ಘೋಷಣೆಗಷ್ಟೇ ಸೀಮಿತ

ಮಾನ್ಯರೆ,

ಮೈಸೂರು ನಗರವನ್ನು ಫ್ಲೆಕ್ಸ್ ಮುಕ್ತ ಎಂದು ಘೋಷಣೆ ಮಾಡಲಾಗಿದೆ. ಆದರೆ ಇದು ಕೇವಲ ಘೋಷಣೆಗೆ ಮಾತ್ರ ಸೀಮಿತವಾಗಿದೆ. ನಗರದಲ್ಲಿ ಯಾವುದೇ ದೊಡ್ಡ ಸಮಾರಂಭ, ಸಮಾವೇಶಗಳು ನಡೆದ ಸಂದರ್ಭ ಇದರ ಉಲ್ಲಂಘನೆ ಆಗುತ್ತಲೇ ಇರುತ್ತದೆ. ಈ ಬಗ್ಗೆ ನಗರಪಾಲಿಕೆ ಸೂಕ್ತ ಕ್ರಮ ಕೈಗೊಳ್ಳುವ ಮನಸ್ಸು ಮಾಡುತ್ತಿಲ್ಲ. ನಗರದಲ್ಲಿ ಎಲ್ಲೆಂದರಲ್ಲಿ ಅನಧಿಕೃತ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ದೇಶದ ಸ್ವಚ್ಛ ನಗರಿಯಾಗಿರುವ ಮೈಸೂರಿನ ಅಂದವನ್ನು ಈ ಫ್ಲೆಕ್ಸ್‌ಗಳು ಕೆಡಿಸುತ್ತಿವೆ. ನಗರದಲ್ಲಿ ಯಾವುದೇ ರಾಜಕೀಯ ಪಕ್ಷ, ಸಮಾವೇಶ ಹಮ್ಮಿಕೊಂಡ ಸಂದರ್ಭ ಹಾಗೂ ವಿವಿಧ ಕಾರ್ಯಕ್ರಮಗಳ ಸಂದರ್ಭದಲ್ಲೂ ಫ್ಲೆಕ್ಸ್ ಬಳಕೆಯಾಗುತ್ತಿದೆ. ನಗರಪಾಲಿಕೆ ಇನ್ನಾದರೂ ಯಾವುದೇ ಒತ್ತಡಕ್ಕೆ ಮಣಿಯದೆ ಫ್ಲೆಕ್ಸ್ ಬಳಕೆ ಮಾಡುವವರ ವಿರುದ್ಧ ಕ್ರಮಕ್ಕೆ ಮುಂದಾಗಬೇಕು.

ಇತ್ತೀಚಿನ ದಿನಗಳಂತೂ ಸರ್ಕಾರಿ ಗುದ್ದಲಿ ಪೂಜೆ ಕಾರ್ಯಕ್ರಮ ಹಾಗೂ ಕೆಲವು ರಾಜಕಾರಣಿಗಳ ಬೆಂಬಲಿಗರ ಜನುಮದಿನ ಸೇರಿದಂತೆ ಪ್ರತಿಯೊಂದಕ್ಕೂ ಫ್ಲೆಕ್ಸ್ ಇಲ್ಲದೆ ಕಾರ್ಯಕ್ರಮ ನಡೆಯುವುದೇ ಇಲ್ಲ. ಇದನ್ನು ತಡೆಗಟ್ಟಲು ನಗರಪಾಲಿಕೆ ಅಧಿಕಾರಿಗಳು ಮುಂದಾಗಬೇಕು. ಇಲ್ಲವಾದಲ್ಲಿ ಮೈಸೂರಿನ ನಾಗರಿಕರ ಜೊತೆ ಸೇರಿ ಮೈಸೂರು ನಗರಪಾಲಿಕೆ ಮುಂಭಾಗ ಅಧಿಕಾರಿಗಳ ವಿರುದ್ಧ ಹೋರಾಟ ನಡೆಸುವುದು ಅನಿವಾರ್ಯವಾಗಬಹುದು.

– ವಿಕ್ರಮ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ, ಮೈಸೂರು.

ದಸರಾ ಲೈಟಿಂಗ್ ಸಮಯದಲ್ಲಿ ಮೂಕ ಪ್ರಾಣಿ, ಪಕ್ಷಿಗಳ ಬಗ್ಗೆ ಗಮನವಿರಲಿ

ಮಾನ್ಯರೆ,

ದಸರಾ ಸಂಭ್ರಮದ ಹೆಸರಿನಲ್ಲಿ ನೂರಾರು ಕಿಲೋಮೀಟರ್ ವಿದ್ಯುತ್ ದೀಪಾಲಂಕಾರ ನಡೆಸಲು ಸರ್ಕಾರ ಈಗಾಗಲೇ ತೀರ್ಮಾನಿಸಿದೆ. ಆ ಸಮಯದಲ್ಲಿ ನಗರದ ದೊಡ್ಡ ಮರಗಳ ಮೇಲೆ ವಾಸಿಸುವ ಪ್ರಾಣಿ–ಪಕ್ಷಿಗಳಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವುದು ಬಹಳ ಅಗತ್ಯವಾಗಿದೆ. ಮರಗಳಿಗೆ ಅಳವಡಿಸುವ ಬದಲು ಕೇವಲ ಕಟ್ಟಡಗಳಿಗೆ, ಕಟ್ಟಡಗಳು ಇಲ್ಲದ ಭಾಗದಲ್ಲಿ ಬೇರೆ ಫೈಬರ್ ಅಥವಾ ಇತರೆ ಪದಾರ್ಥಗಳಿಂದ ವ್ಯವಸ್ಥೆ ಮಾಡಿ, ವಿನಾಕಾರಣ ಮರಗಳ ಮೇಲೆ ದೀಪಗಳನ್ನು ಅಳವಡಿಸಿ ಮರಗಳಲ್ಲಿ ವಾಸಿಸುವ ಪ್ರಾಣಿ, ಪಕ್ಷಿಗಳಿಗೆ ತೊಂದರೆ ನೀಡಬೇಡಿ. ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ದೀಪಾಲಂಕಾರಗಳನ್ನು 6 ಅಡಿ ಎತ್ತರಕ್ಕಿಂತ ಮೇಲೆ ಅಳವಡಿಸುವುದು ಒಳ್ಳೆಯದು. ಏಕೆಂದರೆ ಸೆಲ್ಫಿ ಹುಚ್ಚಿನಿಂದ ಜನ ಎಲೆಕ್ಟ್ರಿಕ್ ದೀಪಗಳನ್ನು ಮುಟ್ಟುವ ಸಾಧ್ಯತೆ ಇರುತ್ತದೆ. ಆಗ ಯಾವುದಾದರೂ ಅವಘಡವಾದರೆ ದಸರಾ ಆಚರಣೆಗೆ ಕಳಂಕವಾಗಲಿದೆ. ಆದ ಕಾರಣ ಈ ಎರಡು ವಿಚಾರಗಳ ಬಗ್ಗೆ ದಸರಾ ದೀಪಾಲಂಕಾರ ಸಮಿತಿ ಗಮನವಹಿಸಬೇಕಾಗಿ ವಿನಂತಿ.

–ಎಸ್.ರವಿ, ವಕೀಲರು, ಮೈಸೂರು.

ಫ್ಯಾಕ್ಟ್ ಚೆಕ್ ಘಟಕ ಸ್ಥಾಪನೆ ಸ್ವಾಗತಾರ್ಹ

ಮಾನ್ಯರೆ,

ಸಾಮಾಜಿಕ ತಾಣಗಳಾದ ಫೇಸ್‌ಬುಕ್, ವಾಟ್ಸಾಪ್, ಇನ್ಸ್ಟಾಗ್ರಾಂ ಮುಂತಾದ ಸಾಮಾಜಿಕ ಜಾಲತಾಣಗಳಿಂದ ಹಲವಾರು ರೀತಿಯ ಪ್ರಯೋಜನಗಳಿವೆ. ಆದರೆ ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಸಮಾಜ ವಿರೋಧಿ ಕೃತ್ಯಗಳು ಮತ್ತು ಸಮಾಜದಲ್ಲಿ ಅಶಾಂತಿಯ ವಾತಾವರಣ ನಿರ್ಮಾಣ ಮಾಡಲು ಬಳಸುತ್ತಿರುವುದು ದುರದೃಷ್ಟಕರವಾಗಿದೆ.ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹರಡುವ ಪ್ರವೃತ್ತಿ ಬೆಳೆಯುತ್ತಿದ್ದು, ಇದನ್ನು ತಡೆಯಲು ರಾಜ್ಯ ಸರ್ಕಾರ ಫ್ಯಾಕ್ಟ್ ಚೆಕ್ (ಸತ್ಯ ತಪಾಸಣಾ) ಘಟಕ ಸ್ಥಾಪನೆ ಮಾಡಿದ್ದು, ಯಾವುದೇ ರೀತಿಯ ಸುಳ್ಳು ಸುದ್ದಿಗಳಿಗೆ ಕಠಿಣ ಶಿಕ್ಷೆ ವಿಧಿಸುವುದಕ್ಕೆ ಕಾನೂನು ರೂಪಿಸಲು ಮುಖ್ಯಮಂತ್ರಿಗಳು ಸೂಚನೆ ನೀಡಿರುವುದು ಉತ್ತಮ ಬೆಳವಣಿಗೆಯಾಗಿದೆ. –ರಾಸುಮ ಭಟ್, ಚಿಕ್ಕಮಗಳೂರು.

ಇತಿಹಾಸ ಸೃಷ್ಟಿಸಿದ ಇಸ್ರೋದಲ್ಲೂ ಕನ್ನಡಿಗರ ಕಮಾಲ್..!



ಮಾನ್ಯರೆ,

ಚಂದ್ರಯಾನ–3 ಯೋಜನೆಯನ್ನು ಅಭೂತಪೂರ್ವ ಯಶಸ್ವಿಗೊಳಿಸಿ ಇತಿಹಾಸ ಸೃಷ್ಟಿಸಿದ ನಮ್ಮ ಹೆಮ್ಮೆಯ ಇಸ್ರೋ ವಿಜ್ಞಾನಿಗಳ ಸಾಧನೆಗೆ ಅಭಿನಂದನೆಗಳು.

ಚಂದ್ರನ ದಕ್ಷಿಣ ಧ್ರುವದಲ್ಲಿ "ವಿಕ್ರಂ" ಉಡಾವಣೆ ನೌಕೆಯನ್ನು ಯಶಸ್ವಿಯಾಗಿ ಇಳಿಸುವ ಮೂಲಕ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿ ಇಡೀ ವಿಶ್ವವೇ ತಿರುಗಿ ನೋಡುವಂತೆ ಆಗಿದೆ. ಈ ಮೂಲಕ ಚಂದ್ರನ ಅನ್ವೇಷಣೆಗೆ ಹೊರಟ ವಿಶ್ವದ ನಾಲ್ಕನೇ ದೇಶವಾಗಿ ಬಲಿಷ್ಠ ಭಾರತವಾಗಿ ಸುವರ್ಣ ಅಕ್ಷರಗಳಲ್ಲಿ ಬರೆಸಿಕೊಂಡಿದೆ. ಇದೇ ಹೊತ್ತಿನಲ್ಲಿ ಕನ್ನಡಿಗರು ಹೆಮ್ಮೆ ಪಡುವ ಸಾರ್ಥಕ ಕ್ಷಣಗಳು ಬಂದೊದಗಿದೆ.

ಕನ್ನಡಿಗರಾಗಿ ನಾವು ಸ್ವಾಭಿಮಾನದಿಂದ ಹೆಮ್ಮೆ ಪಡುವ ಸಂಗತಿ "ಚಂದ್ರಯಾನ–3" ಈ ಯಶಸ್ವಿ ಯೋಜನೆಯಲ್ಲಿ ಪಾಲ್ಗೊಂಡ ಇಸ್ರೋ ವಿಜ್ಞಾನಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕನ್ನಡಿಗ ವಿಜ್ಞಾನಿಗಳಿದ್ದಾರೆ. ಅವರಲ್ಲಿ ಹಲವರು ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಹಂತದ ಶಿಕ್ಷಣ ಪೂರೈಸಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಗ್ರಾಮಾಂತರ ಪ್ರದೇಶಗಳ ಹಿನ್ನೆಲೆಗಳು ಹೆಚ್ಚಾಗಿ ಕಾಣಸಿಗುತ್ತವೆ. ಆ ಮುಗಿಲೆತ್ತರದ ಚಂದ್ರನನ್ನು ಮುಟ್ಟುವ ವಿಜ್ಞಾನ ದೀವಿಗೆಗೆ ಅಕ್ಷರ ಕಲಿತ ಕನ್ನಡ ಮಾಧ್ಯಮ ಎಳ್ಳಷ್ಟೂ ತೊಡಕಾಗಿಲ್ಲ. ಮಾತೃಭಾಷೆಗಳಲ್ಲಿ ವಿದ್ಯಾಭ್ಯಾಸ ಪಡೆದವರು ವಿಷಯ ಗ್ರಹಿಕೆಗೆ ಹೆಚ್ಚು ಅನುಕೂಲ. ವಿಜ್ಞಾನ ತಂತ್ರಜ್ಞಾನ ಸುಲಲಿತವಾಗಿ ಅರ್ಥವಾಗಬೇಕಾದರೆ ಮಾತೃಭಾಷೆಯಲ್ಲಿ ಕಲಿತರೆ ಪ್ರಯೋಜನಕಾರಿ. ಇವರು ಯಾರಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವುದು ಸಾಬೀತಾಗಿದೆ, ಆಗುತ್ತಲೇ ಇದೆ. ಕನ್ನಡ ಮಾಧ್ಯಮ, ಸರ್ಕಾರಿ ಶಾಲೆಗಳೆಂದರೆ ಅಸಡ್ಡೆ ತೋರುತ್ತಾ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳ ಅತ್ಯಾಕರ್ಷಣೆಗೆ ಒಳಗಾಗಿ ಸಾಕಷ್ಟು ಹಣ ತೆತ್ತು ಓದಿಸುವ ಪೋಷಕರು ಹಾಗೂ ಆಂಗ್ಲ ಮಾಧ್ಯಮಗಳ ವ್ಯಾಮೋಹಕ್ಕೆ ಒಳಗಾಗಿರುವ ಯುವ ಸಮೂಹ ಹಾಗೂ ಇಂದಿನ ಪೀಳಿಗೆ ವಾಸ್ತವವನ್ನು ಅರಿತು ಇಂತಹ ವಿಶಿಷ್ಟ ಸಾಧನೆಗಳ ಸ್ಫೂರ್ತಿ ಪಡೆದು ಸಾಧಿಸಲು ಮುಂದಾಗಲಿ. ಸರ್ಕಾರವು ಕೂಡ ಆದ್ಯತೆ ಮೇರೆಗೆ ಇನ್ನಷ್ಟು ಕನ್ನಡ ವಿಷಯ ಸಂಬಂಧ ಪ್ರತಿಯೊಂದು ರಂಗದಲ್ಲು ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚು ಪ್ರಾತಿನಿಧ್ಯತೆ ಕೊಡಲು ಉತ್ಸಾಹ ತೋರಲಿ.

– ಅನಿಲ್ ಕುಮಾರ್, ನಂಜನಗೂಡು.

ಕಲಿಯುಗ ಕಲ್ಪತರು ಶ್ರೀ ಗುರುರಾಯರು

ದಿನಾಂಕ ಆಗಸ್ಟ್ 31, ಸೆ.1 ಮತ್ತು 2ರಂದು ಶ್ರೀ ಗುರುರಾಘವೇಂದ್ರ ಸ್ವಾಮಿಗಳವರ 352ನೇ ಆರಾಧನಾ ಮಹೋತ್ಸವ ಪ್ರಯುಕ್ತ ಲೇಖನ



ನಂ. ಶ್ರೀಕಂಠ ಕುಮಾರ್
ಮೊ: 9481067333




ಶ್ರೀ ಸುಮತೀಂದ್ರ ತೀರ್ಥರು

ಕಲಿಯುಗ ಕಲ್ಪತರು ಎಂದೇ ಪ್ರಖ್ಯಾತರಾದ ಶ್ರೀ ಗುರುರಾಯರು ಕಳೆದ 352 ವರ್ಷಗಳಿಂದ ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಯೋಗಿಗಳಾಗಿ ವಿರಾಜಮಾನರಾಗಿ ಸಶರೀರ ಬೃಂದಾವನಸ್ಥರಾಗಿ ಬಂದು ಬೇಡುವ ಎಲ್ಲಾ ಆಸ್ತಿಕರ ಇಷ್ಟಾರ್ಥಗಳನ್ನು ಅನುಗ್ರಹಿಸುತ್ತಿದ್ದಾರೆ. ಇವರ ಭವ್ಯ ಪರಂಪರೆಯಲ್ಲಿ ಶ್ರೇಷ್ಠ ಸಂತರಾಗಿ ಇದುವರೆವಿಗೆ ಇಪ್ಪತ್ತೆರಡು ಯತಿಗಳು ಕಾಲಕಾಲಕ್ಕೆ ಅನುಗ್ರಹ ಮಾಡಿರುತ್ತಾರೆ. ಶ್ರೀ ಗುರುರಾಯರ ಆಣತಿಯಂತೆ ಪರಂಪರೆಯ ಯತಿ ಶ್ರೇಷ್ಠರು ಧರ್ಮ ಪ್ರಸಾರ ಮಾಡುತ್ತಾ ಎಲ್ಲೆಡೆ ಸಂಚಾರ ಮಾಡಿ ತಮ್ಮ ಅಂತಿಮ ಸಮಯದಲ್ಲಿ ವಿವಿಧ ಪುಣ್ಯಕ್ಷೇತ್ರಗಳಲ್ಲಿ ಬೃಂದಾವನಸ್ಥರಾಗಿ ಪೂಜಿತಗೊಳ್ಳುತ್ತಿದ್ದಾರೆ. ಅದರಂತೆ ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಏಳು ಯತಿಗಳ ಬೃಂದಾವನವಿದ್ದು, ಶ್ರೀ ಪರಶುರಾಮ ಕ್ಷೇತ್ರವೆಂದೇ ಪ್ರಸಿದ್ಧಿಯಾದ ನಂಜನಗೂಡಿನಲ್ಲಿ ಐದು ಯತಿಗಳ ಬೃಂದಾವನವಿದ್ದು, ಶ್ರೀಕ್ಷೇತ್ರ ಶ್ರೀರಂಗಂನಲ್ಲಿ ಮೂವರು ಯತಿಗಳ ಬೃಂದಾವನವು, ಹೊಸರಿತ್ತಿಯಲ್ಲಿ ಇಬ್ಬರು ಯತಿಗಳ ಬೃಂದಾವನವು ಹಾಗೂ ಪೂನಾ, ರಾಜವಳ್ಳಿ, ಮಧುರೈ, ಕೆಂಚನಗುಡ್ಡ ಮತ್ತು ಚಿತ್ತೂರು ಪುಣ್ಯಕ್ಷೇತ್ರಗಳಲ್ಲೂ ಯತಿಗಳು ಬೃಂದಾವನಸ್ಥರಾಗಿ ಭಕ್ತರನ್ನು ಅನುಗ್ರಹಿಸುತಿದ್ದಾರೆ. ಅಲ್ಲದೇ ಶ್ರೀ ರಾಘವೇಂದ್ರ ಸ್ವಾಮಿಗಳವರ ಪೂರ್ವಾಶ್ರಮದ ವಂಶಿಕರು ಇಂದಿಗೂ ನಂಜನಗೂಡಿನಲ್ಲಿ ವಾಸವಾಗಿದ್ದು, ದೊಡ್ಡ ಮನೆ ವಂಶಿಕರಾಗಿ ಇಂದಿನವರೆವಿಗೂ ಸುಮಾರು ಹತ್ತಕ್ಕೂ ಹೆಚ್ಚಿನ ಸಂತರು ಮಂತ್ರಾಲಯ ಶ್ರೀಮಠಕ್ಕೆ ಪೀಠಾಧಿಪತಿಗಳಾಗಿ ವಿರಾಜಿಸಿದ್ದಾರೆ. ಹಿಂದಿನ ಆರಾಧನಾ ಮಹೋತ್ಸವದಲ್ಲಿ ಶ್ರೀಕ್ಷೇತ್ರ ಮಂತ್ರಾಲಯ ಹಾಗೂ ನಂಜನಗೂಡು ಶ್ರೀಮಠದಲ್ಲಿರುವ ಬೃಂದಾವನದ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲಾಗಿದ್ದು ಪ್ರಸ್ತುತ ಆರಾಧನಾ ಮಹೋತ್ಸವದ ಶುಭ ಸಂದರ್ಭದಲ್ಲಿ ಇನ್ನಿತರ ಬೃಂದಾವನಸ್ಥರಾದ ಯತಿ ಶ್ರೇಷ್ಠರನ್ನು ಸ್ಮರಿಸೋಣ.

ಪುಣ್ಯಕ್ಷೇತ್ರ ಶ್ರೀರಂಗಂ: ಶ್ರೀ ಯೋಗೀಂದ್ರ ತೀರ್ಥರು(1671–1688)

ಗುರುಸಾರ್ವಭೌಮ ಶ್ರೀ ರಾಘವೇಂದ್ರ ಸ್ವಾಮಿಗಳು ಉದ್ದಾಮ ಪಂಡಿತ ವೆಂಕಣ್ಣಾಚಾರ್ಯರಿಗೆ 1671ನೇ ವಿರೋಧಿನಾಮ ಸಂವತ್ಸರದಲ್ಲಿ ಸನ್ಯಾಸ ದೀಕ್ಷೆಯನ್ನು ನೀಡಿ ತಮ್ಮ ಉತ್ತರಾಧಿಕಾರಿಯನ್ನಾಗಿ ಮಂತ್ರಾಲಯ ಶ್ರೀಕ್ಷೇತ್ರದ ಪೀಠಾಧಿಪತಿಗಳನ್ನಾಗಿ ಅನುಗ್ರಹಿಸಿದರು. ಸುಮಾರು ಹದಿನೇಳು ವರ್ಷಗಳ ಕಾಲ ಪೀಠಾಧಿಪತಿಗಳಾಗಿದ್ದ ಶ್ರೀ ಯೋಗೀಂದ್ರ ತೀರ್ಥರು ಎಲ್ಲೆಡೆ ಸಂಚಾರ ಮಾಡಿ ಧರ್ಮ ಪ್ರಸಾರ ಮಾಡುತ್ತಾ ಅಂತಿಮವಾಗಿ 1688ರ ವಿಭವ ಸಂವತ್ಸರದ ಮಾಘ ಶುದ್ಧ ದಶಮಿಯಂದು ಮಹಾಕ್ಷೇತ್ರ ಶ್ರೀರಂಗದಲ್ಲಿ ಬೃಂದಾವನಸ್ಥರಾದರು.



ಶ್ರೀ ಸೂರೀಂದ್ರ ತೀರ್ಥರು

ಶ್ರೀ ಸುಮತೀಂದ್ರ ತೀರ್ಥರು (1692–1725):

ಶ್ರೀಮನ್ಮಧ್ವಾಚಾರ್ಯರ ಪರಂಪರೆಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳವರ ಪರಂಪರೆಯ ನಂತರ ಮೂರನೇ ಯತಿಗಳು ಶ್ರೀ ಸುಮತೀಂದ್ರ ತೀರ್ಥ ಶ್ರೀಪಾದಂಗಳವರು. ಶ್ರೀಗಳವರ ಪೂರ್ವಾಶ್ರಮದ ನಾಮ ಮುದ್ದುಕೃಷ್ಣಾಚಾರ್ಯರು. ಶ್ರೀ ಗುರುರಾಯರ ಪೂರ್ವಾಶ್ರಮದ ಅಣ್ಣಂದಿರಾದ ಶ್ರೀ ಗುರುರಾಜಾಚಾರ್ಯರ ಮೊಮ್ಮಕ್ಕಳು. ವೆಂಕಟ ನಾರಾಯಣಾಚಾರ್ಯರ ಮಕ್ಕಳು. ಶ್ರೀ ಗುರುರಾಯರಿಂದಲೇ ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಪಡೆದ ಉದ್ದಾಮ ಪಂಡಿತರು. ಅಲ್ಲದೆ ಶ್ರೀ ಗುರುರಾಯರ ನೇರ ಆಣತಿಯಂತೆ ಇವರಿಗೆ ಯತಿ ಪೀಠವನ್ನು ಶ್ರೀ ಯೋಗೀಂದ್ರ ತೀರ್ಥರು ಅನುಗ್ರಹಿಸಿ ಶ್ರೀ ಸುಮತೀಂದ್ರ ತೀರ್ಥರೆಂದು ನಾಮಕರಣ ಮಾಡಿದರು. ಶ್ರೀಗಳವರು ಹಲವಾರು ಗ್ರಂಥಗಳನ್ನು ರಚಿಸಿ ಪ್ರೌಢಿಮೆಯನ್ನು ಮೆರೆದಿದ್ದಾರೆ. ಇವರ ಅದ್ವಿತೀಯ ಪಾಂಡಿತ್ಯವನ್ನು ಗಮನಿಸಿದ ಉತ್ತರಾದಿ ಮಠದ ಶ್ರೀ ಸತ್ಯಪೂರ್ಣ ತೀರ್ಥರು ತಾವು ಹಾಸಿಕೊಳ್ಳುತ್ತಿದ್ದ



ಶ್ರೀ ವರದೇಂದ್ರ ತೀರ್ಥರು

ಗದ್ದುಗೆಯನ್ನು ನೀಡಿ ಗೌರವಿಸಿದ್ದಾರೆ. ಹಿಂದೂ ಸಾಮ್ರಾಜ್ಯ ಸಂಸ್ಥಾಪಕನಾದ ಶಿವಾಜಿ ಮಹಾರಾಜನ ಮೊಮ್ಮಗ ಶಹಜಿಯು ಶ್ರೀಗಳವರನ್ನು ವಿಶೇಷ ಆದರಗಳಿಂದ ಗೌರವಿಸಿರುವುದು ಉಲ್ಲೇಖಾರ್ಹ. ಇವರು ತಮ್ಮ ಕೊನೆಯ ಕಾಲವನ್ನು ಶ್ರೀಕ್ಷೇತ್ರ ಶ್ರೀರಂಗದಲ್ಲಿ ಕಳೆದು ಅಲ್ಲೇ ತಮ್ಮ ಅತ್ಯಂತ ಪ್ರಿಯರು, ತಮ್ಮ ಪರಮ ಗುರುಗಳೂ ಆದ ಶ್ರೀ ಯೋಗೀಂದ್ರ ತೀರ್ಥ ಶ್ರೀಪಾದಂಗಳವರ ಸನ್ನಿಧಾನದಲ್ಲೇ ಬೃಂದಾವನಸ್ಥರಾದರು.

ಶ್ರೀ ಉಪೇಂದ್ರ ತೀರ್ಥರು (1725–1728):



ಶ್ರೀ ಸುಗುಣೇಂದ್ರ ತೀರ್ಥರು

ಇವರ ಪೂರ್ವಾಶ್ರಮದ ನಾಮ ವಿಜಯೀಂದ್ರಾಚಾರ್ಯರು. ಇವರು ಉತ್ತಮ ಪಂಡಿತರಾದ್ದರಿಂದ ಹಿರಿಯ ಪೀಠಾಧಿಪತಿಗಳಾದ ಶ್ರೀ ಸುಮತೀಂದ್ರ ತೀರ್ಥರು ಸನ್ಯಾಸ ದೀಕ್ಷೆ ನೀಡಿ ಉಪೇಂದ್ರ ತೀರ್ಥರೆಂದು ಹೆಸರಿಸಿದರು. ಇವರು ಪ್ರಖ್ಯಾತ ಪಂಡಿತರೆಂದು, ಪ್ರವಚನಾಚಾರ್ಯರೆಂದು ತಿಳಿದು ಬರುತ್ತದೆ. ಆದರೆ ಕೇವಲ ಮೂರು ವರ್ಷಗಳ ಕಾಲ ಮಂತ್ರಾಲಯ ಶ್ರೀ ಮಠದ ಪೀಠಾಧಿಪತಿಗಳಾಗಿದ್ದರಿಂದ ಇವರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿರುವುದಿಲ್ಲ. ಇವರು ಸಂಚಾರ ಮಾಡುತ್ತಾ ಶ್ರೀಕ್ಷೇತ್ರ ಶ್ರೀರಂಗಕ್ಕೆ ಆಗಮಿಸಿ ಅಲ್ಲೇ ಬೃಂದಾವನಸ್ಥರಾಗಿ ಪೂಜಿಸಲ್ಪಡುತ್ತಿದ್ದಾರೆ.

ಹೊಸರಿತ್ತಿ: ಶ್ರೀ ಧೀರೇಂದ್ರ ತೀರ್ಥರು (1785):

ಪಂಡಿತ ಜಯರಾಮಾಚಾರ್ಯರು ಎಲ್ಲಾ ಶಾಸ್ತ್ರಗಳಲ್ಲೂ ಅಸದೃಶ ಪ್ರಾವೀಣ್ಯವನ್ನು ಪಡೆದಿದ್ದರು. ಮೇಲಾಗಿ ಶ್ರೀ ವಾದೀಂದ್ರ ತೀರ್ಥರ ಪೂರ್ವಾಶ್ರಮದ ಪುತ್ರರು. ಇವರು ವಾದಿ ದಿಗ್ವಿಜಯ, ಗ್ರಂಥರಚನ, ಪಾಠ ಪ್ರವಚನಗಳಲ್ಲಿ ಹೆಚ್ಚಿನ ಆಸಕ್ತರಾಗಿದ್ದರು. ಶ್ರೀ ವಾದೀಂದ್ರ ತೀರ್ಥರು ಬೃಂದಾವನಸ್ಥರಾದ ಮೇಲೆ ಅವರ ಆಶಯದಂತೆ ಹಾಗೂ ಶ್ರೀ ವಿಜಯೀಂದ್ರ ತೀರ್ಥರ ಸೂಚನೆಯಂತೆ ಗುರುಗಳ ಬೃಂದಾವನದ ಮುಂದೆ ಸನ್ಯಾಸ ಸ್ವೀಕರಿಸಿದರು. ಅಂದಿನಿಂದ ಶ್ರೀ ಧೀರೇಂದ್ರ ತೀರ್ಥರೆಂದು ಮಂತ್ರಾಲಯ ಶ್ರೀಮಠದ ಎಂಟನೇ ಪೀಠಾಧಿಪತಿಗಳಾಗಿ ಶ್ರೀ ಭುವನೇಂದ್ರ ತೀರ್ಥರಿಂದ ನೇಮಕಗೊಂಡರು. ಶ್ರೀ ಧೀರೇಂದ್ರ ತೀರ್ಥರು ಸಂಚಾರ ಮಾಡುತ್ತಾ ಹಾವೇರಿ ತಾಲೂಕಿನ ಹೊಸರಿತ್ತಿ ಗ್ರಾಮಕ್ಕೆ ಆಗಮಿಸ ಅಲ್ಲಿ ಬಹಳ ಪೂಜಿತರಾದರು. ವರದಾ ತೀರದ ಆಶ್ರಮವು



ಶ್ರೀ ಯೋಗೀಂದ್ರ ತೀರ್ಥರು

ತಮ್ಮ ವಾಸಕ್ಕೆ ಅನುಕೂಲವಾದ್ದರಿಂದ ಅಲ್ಲೇ ಅವರು ನೆಲೆಸಿದರು. ಅಲ್ಲಿ ಶ್ರೀಗಳವರು ದಾಸ ಶ್ರೇಷ್ಠ ಜಗನ್ನಾಥ ದಾಸರು ಹಾಗೂ ಉತ್ತರಾದಿ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಸತ್ಯಬೋಧ ಸ್ವಾಮಿಗಳವರು ಭೇಟಿಯಾಗಿ ಜ್ಞಾನಿಗಳ ವಿದ್ವತ್ ಸಭೆಯು ನಡೆಯಿತು. ಇಂದಿಗೂ ಮಂತ್ರಾಲಯ ಸಂಸ್ಥಾನದ ಇತಿಹಾಸದಲ್ಲಿ ಶ್ರೀ ಧೀರೇಂದ್ರ ತೀರ್ಥ ಶ್ರೀಪಾದರ ಖ್ಯಾತಿಯು ಆಚಂದ್ರಾರ್ಕಸ್ಥಾಯಿ ಸ್ಥಾನವನ್ನು ಅಲಂಕರಿಸಿದೆ. ತಮ್ಮ ಆಶಯದಂತೆ ಹೊಸರಿತ್ತಿ ಗ್ರಾಮದಲ್ಲಿ ಫಾಲ್ಗುಣ ಶುದ್ಧ ತ್ರಯೋದಶಿಯಂದು ಬೃಂದಾವನಸ್ಥರಾದರು.

ಶ್ರೀ ಸುಶೀಲೇಂದ್ರ ತೀರ್ಥರು (1912–1926):

ಮಂತ್ರಾಲಯ ಶ್ರೀಮಠದ ಹದಿನಾರನೇ ಪೀಠಾಧಿಪತಿಗಳಾದ ಶ್ರೀ ಸುಕೃತೀಂದ್ರ ತೀರ್ಥರ ಪೂರ್ವಾಶ್ರಮದ ತಮ್ಮಂದಿರಾದ ಪಂಡಿತ ಕೃಷ್ಣಾಚಾರ್ಯರ ವ್ಯಕ್ತಿತ್ವ ಅದ್ಭುತವಾದದ್ದು. ಇವರ ಅದ್ಭುತ ಶಕ್ತಿಯನ್ನು ತಿಳಿದ ಶ್ರೀ ಸುಕೃತೇಂದ್ರ ತೀರ್ಥರು ಮಹಾಸಂಸ್ಥಾನದ ಪರಂಪರೆಯ ಉತ್ತರಾಧಿಕಾರಿ, ಹದಿನೇಳನೇ ಪೀಠಾಧಿಪತಿಗಳನ್ನಾಗಿ ನೇಮಿಸಿ ಸುಶೀಲೇಂದ್ರ ತೀರ್ಥರೆಂದು ನಾಮಕರಣ ಮಾಡಿದರು. ಉಡುಪಿ ಶ್ರೀಕ್ಷೇತ್ರದಲ್ಲಿ ಶ್ರೀ ಗುರುರಾಯರ ಪರಮಗುರುಗಳಾದ ಶ್ರೀ ವಿಜಯೀಂದ್ರ ತೀರ್ಥರಿಗೆ ಸಮಕಾಲೀನರಾದ ಸೋದೆ ಮಠದ ಯತಿಗಳಾದ ಶ್ರೀ ವಾದಿರಾಜರು ಸ್ನೇಹಪೂರ್ವಕವಾಗಿ ಕೊಟ್ಟ ಶ್ರೀಕೃಷ್ಣನ ಮಠದ ಎದುರಿನ ಭೂಮಿಯನ್ನು ಶ್ರೀ ಗುರುರಾಯರ ಮೃತ್ತಿಕಾ ಬೃಂದಾವನವನ್ನು ಪ್ರತಿಷ್ಠಾಪಿಸಿದರು. ನಂತರ ಶ್ರೀಗಳವರು ಯಾತ್ರೆಯನ್ನು ಮುಂದುವರೆಸಿ ಹುಬ್ಬಳ್ಳಿ ಪ್ರಾಂತ್ಯಕ್ಕೆ ಆಗಮಿಸಿದಾಗ ಅವರಿಗೆ ಸ್ವಲ್ಪ ದೇಹಾಲಸ್ಯವಾಯಿತು. ಕೂಡಲೇ ಹೊಸರಿತ್ತಿ ಗ್ರಾಮಕ್ಕೆ ಆಗಮಿಸಿ ತಮ್ಮ ಆಪ್ತರಾದ ಶ್ರೀಮಠದ ದಿವಾನರಾದ ಹುಲಿಕೃಷ್ಣಾಚಾರ್ಯರೆಂಬುವರನ್ನು ಕರೆಸಿಕೊಂಡು ಅವರಿಗೆ ಆಶ್ರಮ ಕೊಟ್ಟು ತಾವು ಅಕ್ಷಯ ಸಂವತ್ಸರದ ಆಷಾಢ ಶುದ್ಧ ತದಿಗೆಯ ದಿನ ಶ್ರೀಕೃಷ್ಣ ಪಾದಾರವಿಂದವನ್ನು ಸೇರಿದರು.



ಶ್ರೀ ಸುಶೀಲೇಂದ್ರ ತೀರ್ಥರು

ಪೂನಾ: ಶ್ರೀ ವರದೇಂದ್ರ ತೀರ್ಥರು (1761–1785)

ಶ್ರೀ ಮಠದ ಪರಂಪರೆಯಲ್ಲಿ ಏಳನೇ ಪೀಠಾಧಿಪತಿಗಳಾದ ಶ್ರೀ ವರದೇಂದ್ರ ತೀರ್ಥರ ಹೆಸರು ಬಹಳ ಪ್ರಖ್ಯಾತವಾದದ್ದು. ಇವರು ಪ್ರಸಿದ್ಧ ಪಂಡಿತರು ಹಾಗೂ ವಾದಿದಿಗ್ವಿಜಯಿಗಳು. ಶ್ರೀಗಳವರು 1774ರಲ್ಲಿ ದಕ್ಷಿಣ ದೇಶದಲ್ಲೆಲ್ಲಾ ಸಂಚಾರ ಮಾಡಿ ಆಸ್ತಿಕರನ್ನು ಅನುಗ್ರಹಿಸಿದರು. ಚತುಶ್ಶಾಸ್ತ್ರ ಪಂಡಿತರಾಗಿ ದಾಸಾಗ್ರಣಿಗಳೆಂದು ಪ್ರಖ್ಯಾತರಾದ ಜಗನ್ನಾಥ ದಾಸರು ಶ್ರೀಗಳವರಲ್ಲಿ ವ್ಯಾಸಂಗ ಮಾಡಿದವರು. ವಿಜಯದಾಸರು, ಗೋಪಾಲದಾಸರು ಹಾಗೂ ಜಗನ್ನಾಥ ದಾಸರುಗಳಂತಹ ಅಪರೋಕ್ಷ ಜ್ಞಾನಿಗಳು




ಶ್ರೀ ಧೀರೇಂದ್ರ ತೀರ್ಥರು

ಒಟ್ಟಾಗಿ ಸೇರಿದ್ದು ಶ್ರೀ ವರದೇಂದ್ರ ತೀರ್ಥ ಶ್ರೀಪಾದರ ಕಾಲದಲ್ಲಿ. ಪುಣೆಯಲ್ಲಿ ಪೇಶ್ವೆಗಳ ಆಡಳಿತ ನಡೆಯುತ್ತಿದ್ದ ಸಮಯದಲ್ಲಿ ಶ್ರೀಗಳವರು ಎಲ್ಲೆಡೆ ಸಂಚಾರ ಮಾಡಲಾಗಿ ಇವರ ಪಾಂಡಿತ್ಯವು ಹೆಚ್ಚಿನ ಪ್ರಸಿದ್ಧಿಯಾಯಿತು. ಶ್ರೀಗಳವರು ಪುಣೆಯಲ್ಲೇ ತಮ್ಮ ಅಂತಿಮ ಕಾಲವನ್ನು ಕಳೆದು ವಿಶ್ವಾವಸು ಸಂವತ್ಸರದ ಆಷಾಢ ಶುದ್ಧ ಷಷ್ಠಿಯ ದಿನ ಪುಣೆಯಲ್ಲಿ ಬೃಂದಾವನಸ್ಥರಾದರು.

ರಾಜವಳ್ಳಿ: ಶ್ರೀ ಭುವನೇಂದ್ರ ತೀರ್ಥರು (1785–1799)

ಮಂತ್ರಾಲಯ ಶ್ರೀಮಠದ ಒಂಭತ್ತನೇ



ಶ್ರೀ ಭುವನೇಂದ್ರ ತೀರ್ಥರು

ಪೀಠಾಧಿಪತಿಗಳಾದ ಶ್ರೀ ಭುವನೇಂದ್ರ ತೀರ್ಥರು ಅತ್ಯಂತ ಪ್ರತಿಭಾ ಸಂಪನ್ನರು ಹಾಗೂ ಲೌಕಿಕ ಕಾರ್ಯ ದಕ್ಷತೆಯನ್ನು ಹೊಂದಿದ್ದರು. ಶ್ರೀಗಳವರು ಮೂಲ ರಾಮನ ಆರಾಧನೆಯಲ್ಲಿ ಅತ್ಯಂತ ಆಸಕ್ತರು. ಪುಣೆಯ ಪೇಶ್ವೆಗಳಿಂದ ಗೌರವಿಸಲ್ಪಟ್ಟವರು. ಶ್ರೀಗಳವರಲ್ಲಿ ಆಶ್ರಮವನ್ನು ಪಡೆದ ವ್ಯಾಸತತ್ತ್ವಜ್ಞರೆಂಬ ಮಹಾಜ್ಞಾನಿಗಳು ಗದ್ವಾಲ ಭೂಪ್ರದೇಶದ ಅರಸರಾಗಿದ್ದ ಸೀತಾರಾಮ ಭೂಪನ ರಾಜಗುರುಗಳಾದರು. ರಾಜನ ಆಹ್ವಾನದ ಮೇರೆಗೆ ಸಂಚಾರ ಮಾಡಿ ಹಲವಾರು ಗ್ರಾಮಗಳನ್ನು ದಾನವಾಗಿ ಸ್ವೀಕರಿಸಿದರು. ಶ್ರೀಗಳವರಿಗೆ ಗದ್ವಾಲ ಸಂಸ್ಥಾನದ ರಾಜಾಶ್ರಯವು ದೊರೆತು ಗದ್ವಾಲ ಸಂಸ್ಥಾನದ ತುಂಗಭದ್ರಾ ತೀರದ ರಾಜವಳ್ಳಿ ಎಂಬ ಗ್ರಾಮದಲ್ಲಿ ವಾಸ್ತವ್ಯ ಮಾಡಿ ತಮ್ಮ ಅಂತಿಮ ಕಾಲವನ್ನು ಕಳೆದು ವೈಶಾಖ ಬಹುಳ ಸಪ್ತಮಿಯ ದಿನ ಬೃಂದಾವನಸ್ಥರಾದರು.

ಮಧುರೈ: ಶ್ರೀ ಸೂರೀಂದ್ರ ತೀರ್ಥರು (1688–1692)

ಶ್ರೀ ಗುರುಸಾರ್ವಭೌಮರ ನೇರ ಶಿಷ್ಯರಾದ ಶ್ರೀ ಯೋಗೀಂದ್ರ ತೀರ್ಥರ ತರುವಾಯ ಅವರ ಪೂರ್ವಾಶ್ರಮದ ಅಣ್ಣಂದಿರಾದ ವಾಸುದೇವಾಚಾರ್ಯರಿಗೆ ಆಶ್ರಮ ದೀಕ್ಷೆಯಾಯಿತು. ಇವರೂ ಸಹ ಶ್ರೀ ಗುರುರಾಯರ ಸಾಕ್ಷಾತ್ ಶಿಷ್ಯರು ಹಾಗೂ ಏಕಾಂತ ಭಕ್ತರು. ಇವರು ಆಶ್ರಮವಾಸಿಗಳಾಗಿ ಕೇವಲ ನಾಲ್ಕು ವರ್ಷ ಮಾತ್ರವಿದ್ದು ಅಂತಿಮ ಕಾಲದಲ್ಲಿ ಮಧುರೈಯಲ್ಲಿ ನೆಲೆಸಿ ಅಂಗೀರಸ ಸಂವತ್ಸರದ ಜೇಷ್ಠ ಶುದ್ಧ ಬಿದಿಗೆಯ ದಿವಸ ಬೃಂದಾವನಸ್ಥರಾದರು.



ಶ್ರೀ ಉಪೇಂದ್ರ ತೀರ್ಥರು


ಕೆಂಚನಗುಡ್ಡ: ಶ್ರೀ ವಸುದೇಂದ್ರ ತೀರ್ಥರು (1750–1761)

ಶ್ರೀಕ್ಷೇತ್ರ ಪರಂಪರೆಯ ಐದನೇ ಯತಿಗಳಾದ ಶ್ರೀ ವಾದೀಂದ್ರ ತೀರ್ಥರು ಪಂಡಿತರಾದ ಬಲರಾಮಾಚಾರ್ಯರಿಗೆ ಸನ್ಯಾಸ ದೀಕ್ಷೆಯನ್ನು ನೀಡಿ ವಸುದೇಂದ್ರ ತೀರ್ಥರು ಎಂದು ಹೆಸರಿಸಿದರು. ಶ್ರೀ ವಸುದೇಂದ್ರ ತೀರ್ಥರು ಮಹಾ ತಪಸ್ವಿಗಳು. ಇವರು ಬಹು ವರ್ಷಗಳ ಕಾಲ ಮಂತ್ರಾಲಯದಲ್ಲಿ ಶ್ರೀ ಗುರುರಾಯರ ಸೇವೆ ಹಾಗೂ ಪಾಠ ಪ್ರವಚನ ಮಾಡುತ್ತಾ ನೆಲೆಸಿದರು. ಇವರ ಕಾಲದಲ್ಲಿ ಮಂತ್ರಾಲಯ ಜಹಗೀರಿಯ ಬಗ್ಗೆ ಶ್ರೀಮಠದ ಹೆಸರಿನಲ್ಲಿ ದಾಖಲೆಗಳನ್ನು ಮಾಡಲಾಯಿತು. ನಂತರ ಧರ್ಮ ಪ್ರಸಾರವಾಗಿ ಸಂಚಾರಕ್ಕೆ ಹೊರಟು ಅಂತಿಮ ಕಾಲದಲ್ಲಿ ಶಿರಗುಪ್ಪೆಯ ಹತ್ತಿರದ ಕೆಂಚನಗುಡ್ಡ ತುಂಗಭದ್ರಾ ನದೀತೀರದ ಗ್ರಾಮದಲ್ಲಿ ಬೃಂದಾವನಸ್ಥರಾದರು.

ಚಿತ್ತೂರು: ಶ್ರೀ ಸುಗುಣೇಂದ್ರ ತೀರ್ಥರು (1872–1884)

ಮಂತ್ರಾಲಯ ಶ್ರೀಕ್ಷೇತ್ರದ ಹನ್ನೆರಡನೇ ಯತಿಗಳಾಗಿದ್ದ ಶ್ರೀ ಸುಜ್ಞಾನೇಂದ್ರ ತೀರ್ಥರವರ ಪೂರ್ವಾಶ್ರಮದ ಮಕ್ಕಳಾದ ವೆಂಕಟರಾಮಾಚಾರ್ಯರು ಶ್ರೀಮಠದ ಹದಿಮೂರನೇ ಯತಿಗಳಾದ ಶ್ರೀ ಸುಧರ್ಮೇಂದ್ರ ಸ್ವಾಮಿಗಳವರಿಂದ ಆಶ್ರಮ ಹೊಂದಿ ಸುಗುಣೇಂದ್ರ ತೀರ್ಥರೆಂದು ಹೆಸರು ಪಡೆದು ಶ್ರೀಮಠದ ಹದಿನಾಲ್ಕನೇ ಯತಿಗಳಾಗಿ ವಿರಾಜಮಾನರಾದರು. ಆಗಿನ ಕಾಲದಲ್ಲಿ ಎಲ್ಲೆಡೆ ತೀವ್ರ ಬರಗಾಲ ಉಂಟಾಗಿ ಜನರು ಬಹಳ ಕಂಗೆಟ್ಟರು. ಆಗ ಶ್ರೀಗಳವರು ಮಠದ ವತಿಯಿಂದ ಜನರಿಗೆ ಮೃಷ್ಟಾನ್ನದಾನ ಮಾಡಿ ಪ್ರಾಣ ಉಳಿಸಿ ಕಾಪಾಡಿದರು. ಇವರ ಕಾಲದಲ್ಲಿ ಹಲವು ಗ್ರಾಮಗಳನ್ನು ದತ್ತಿ ಸ್ವೀಕರಿಸಿದರು. ಅಲ್ಲದೆ ಉತ್ತರಾದಿ ಮಠಕ್ಕೆ ಬಂದ ವಿಪತ್ತನ್ನು ಅಧಿಕಾರಿಗೆ ಹೇಳಿ ಪರಿಹರಿಸಿದರು ಎನ್ನಲಾಗಿದೆ ಇಮರು ಸಂಚಾರ ಮಾಡುತ್ತಾ ಚಿತ್ತೂರಿಗೆ ಆಗಮಿಸಿ ಅಲ್ಲೇ ನೆಲೆಸಿ ಬೃಂದಾವನಸ್ಥರಾದರು.

ಪ್ರಸ್ತುತ ಶ್ರೀಮಠದ 23ನೇ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಶ್ರೀಕ್ಷೇತ್ರದ ಸರ್ವತೋಭಿವೃದ್ಧಿಗೆ ಕಾರಣರಾಗಿದ್ದು, ಶ್ರೀಕ್ಷೇತ್ರ ಮಂತ್ರಾಲಯಕ್ಕೆ ಭೇಟಿ ನೀಡಿದ ಭಕ್ತರಿಗೆ ಗುರುಸಾರ್ವಭೌಮ ಶ್ರೀ ರಾಘವೇಂದ್ರ ಸ್ವಾಮಿಗಳವರ ಮೂಲ ಬೃಂದಾವನದ ದರ್ಶನ, ಶ್ರೀ ಮೂಲರಾಮದೇವರ ವಿಶೇಷ ಪೂಜೆಯ ದರ್ಶನ ಮಾಡಿಸುತ್ತಿದ್ದಾರೆ.



ಶ್ರೀ ವಸುದೇಂದ್ರ ತೀರ್ಥರು

ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಹಿರಿಯ ನಾಗರಿಕರಿಗೆ ಸನ್ಮಾನ; ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ಆ.30–ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 2022–2023ನೇ ಸಾಲಿನ 28ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಸೊಸೈಟಿಯ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೈಸೂರು ಮಹಾನಗರಪಾಲಿಕೆ ಆಡಳಿತ ಪಕ್ಷದ ನಾಯಕ ಮಾ.ವಿ. ರಾಮಪ್ರಸಾದ್ ಅವರಿಗೆ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಆನಂತರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡ



60 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಇದೇ ವೇಳೆ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಸಿ.ವಿ.ಪಾರ್ಥಸಾರಥಿ, ಉಪಾಧ್ಯಕ್ಷ ಎಚ್.ಎಸ್.ಪ್ರಶಾಂತಾ ತಾತಾಚಾರ್, ಖಜಾಂಚಿ ಎಂ.ಡಿ.ಗೋಪಿನಾಥ್, ನಿರ್ದೇಶಕರಾದ ಕೆ.ನಾಗರಾಜ್, ಎಂ.ಆರ್.ಪ್ರೀತಮ್, ಫಣಿರಾಜ್, ಎಸ್.ನಾಗೇಂದ್ರ, ಕೆ.ಎನ್.ಅರುಣ್, ಎಸ್.ಎನ್.ನಾಗಶಂಕರ್, ಎಸ್.ರಂಗನಾಥ್, ಜಿ.ಎನ್.ಸತೀಶ್, ಎಂ.ಎನ್.ಸೌಮ್ಯ, ರೇಖಾ, ಪ್ರಭಾರ ಕಾರ್ಯದರ್ಶಿ ವೀಣಾ, ಕಾನೂನು ಸಲಹೆಗಾರರಾದ ಶಶಿಧರ್, ಕೆ.ಟಿ.ಸ್ವಾಮಿ, ಶ್ರೀನಿವಾಸ್, ಮಧುರಾಜ್ ಹಾಗೂ ಇನ್ನಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 31 ಗುರುವಾರ 2023

ಸಂಪುಟ: 44 | ಸಂಚಿಕೆ: 136 | ಪುಟಗಳು: 12+IV

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮನೆ ಯಜಮಾನಿ ಈಗ 'ಗೃಹಲಕ್ಷ್ಮಿ'

ಮೈಸೂರಲ್ಲಿ ಯೋಜನೆಗೆ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ವಿಧ್ಯುಕ್ತ ಚಾಲನೆ

ಕುಟುಂಬದ ಯಜಮಾನಿ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು 2,000 ರೂ. ಜಮಾ

ಮೈಸೂರು, ಆ. 30(ಆರ್‌ಕೆ)– ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳಲ್ಲಿ ನಾಲ್ಕನೆಯದಾದ, ಮನೆ ಯಜಮಾನಿಗೆ ಪ್ರತೀ ತಿಂಗಳು 2000 ರೂ. ಸಂದಾಯ ಮಾಡುವ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮ್ಮುಖದಲ್ಲಿ ಕಾಂಗ್ರೆಸ್ ಅಧಿನಾಯಕರೂ ಆದ ಸಂಸದ ರಾಹುಲ್ ಗಾಂಧಿ, ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಬುಧವಾರ ವಿಧ್ಯುಕ್ತ ಚಾಲನೆ ನೀಡಿದರು.

ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತದಿಂದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಬೃಹತ್ ಐತಿಹಾಸಿಕ ಕಾರ್ಯಕ್ರಮದಲ್ಲಿ ಮಧ್ಯಾಹ್ನ 1.30 ಗಂಟೆಗೆ 2000 ರೂ. ಬ್ಯಾಂಕ್ ಚೆಕ್‌ಗೆ ಪುಷ್ಪಾರ್ಚನೆ ಮಾಡುವ ಮೂಲಕ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡಿದ ರಾಹುಲ್‌ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ, ಬಳಿಕ ಬಟನ್ ಒತ್ತುವ ಮೂಲಕ ನೋಂದಾಯಿತ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಡಿಬಿಟಿ (ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್) ಯಡಿ 2000 ರೂ. ನಗದು ಜಮಾ ಪ್ರಕ್ರಿಯೆಗೂ ಶುಭಾರಂಭ ಮಾಡಿದರು.

ಕಾಂಗ್ರೆಸ್ ಸರ್ಕಾರ ಯಶಸ್ವಿ 100 ದಿನಗಳ ಆಡಳಿತದ ಹಿನ್ನೆಲೆಯಲ್ಲಿ "ಸ್ತ್ರೀ ಸ್ವಾವಲಂಬನೆ ಯತ್ತ ಒಂದು ದಿಟ್ಟ ಹೆಜ್ಜೆ" ಪರಿಕಲ್ಪನೆಯೊಂದಿಗೆ ರಾಜ್ಯದ ಪ್ರತೀ ಕುಟುಂಬದ ಯಜಮಾನಿಗೆ ಪ್ರತೀ ತಿಂಗಳೂ 2000 ರೂ. ಹಣ ನೀಡುವ 'ಗೃಹಲಕ್ಷ್ಮಿ' ಯೋಜನೆಯ ಅನುಷ್ಠಾನ ಕಾರ್ಯಕ್ರಮಕ್ಕೆ ಸಹಸ್ರಾರು ಮಹಿಳಾ ಫಲಾನುಭವಿಗಳು ಸಾಕ್ಷಿಯಾದರು.

ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸರ್ಕಾರ 100 ದಿನದಲ್ಲಿ ಮಾಡಿದ ಮಹತ್ತರ ಕೆಲಸಗಳನ್ನು ಬಿಂಬಿಸುವ ಮಾಹಿತಿಯ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದ ಗಣ್ಯರು, 10 ಮಂದಿ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಯೋಜನೆಯ ಕ್ಯೂಆರ್ ಕೋಡ್ ಹೊಂದಿರುವ ಡಿಜಿಟಲ್ ಕಾರ್ಡ್ ವಿತರಿಸಿದರು. ಸಮಾರಂಭದ ಸುವಿಶಾಲ ಪೆಂಡಾಲ್‌ನಲ್ಲಿ ವ್ಯವಸ್ಥೆ ಮಾಡಲಾಗಿದ್ದ ಆಸನಗಳಲ್ಲಿ ಕುಳಿತಿದ್ದ ಲಕ್ಷಾಂತರ ಮಂದಿ ಫಲಾನುಭವಿಗಳು, ಆಸನ ಲಭ್ಯವಾಗದೇ ಹೊರಗೂ ಸಾವಿರಾರು ಸಂಖ್ಯೆಯಲ್ಲಿ ಗೃಹಲಕ್ಷ್ಮಿಯರು ನಿಂತಿದ್ದರು. ಮಧ್ಯಾಹ್ನ 12 ಗಂಟೆ ವೇಳೆಗೆ ● 6ನೇ ಪುಟಕ್ಕೆ



ಬಹು ನಿರೀಕ್ಷಿತ ಗೃಹಲಕ್ಷ್ಮಿ ಯೋಜನೆಗೆ ಬುಧವಾರ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಚಾಲನೆ ನೀಡಿದರು.

ಕ್ಷಣಮಾತ್ರದಲ್ಲಿ ರಾಜ್ಯದ ಮಹಿಳೆಯರ ಮೊಬೈಲ್‌ಗೆ ರವಾನೆಯಾಯ್ತು ಸಂದೇಶ

'ಅಭಿನಂದನೆಗಳು, ನಿಮ್ಮ ಗೃಹಲಕ್ಷ್ಮಿ ಯೋಜನೆಯ ಅರ್ಜಿ ಸಂಖ್ಯೆಯನ್ನು ಅನುಮೋದಿಸಲಾಗಿದೆ'

ಮೈಸೂರು, ಆ.30(ಬಿಎಲ್‌ಯು)– ಡಿಜಿಟಲ್ ನೋಟ್ ಪ್ಯಾಡ್‌ನಲ್ಲಿದ್ದ ಸರ್ಕಾರದ ಇ–ಗವರ್ನೆನ್ಸ್ ಮೂಲಕ ಗೃಹಲಕ್ಷ್ಮಿ ಯೋಜನೆಗೆ ರಾಹುಲ್ ಗಾಂಧಿ ಚಾಲನೆ ನೀಡಿದರು. ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುತ್ತಿದ್ದಂತೆ ಮಹಿಳೆಯರ ಮೊಬೈಲ್ ಫೋನ್‌ಗೆ ಸಂದೇಶ ಕ್ಷಣ ಮಾತ್ರದಲ್ಲಿ ರವಾನೆಯಾಯಿತು. "ಅಭಿನಂದನೆಗಳು, ನಿಮ್ಮ ಗೃಹಲಕ್ಷ್ಮಿ ಯೋಜನೆಯ ಅರ್ಜಿ ಸಂಖ್ಯೆಯನ್ನು ಅನುಮೋದಿಸಲಾಗಿದೆ. ಆಗಸ್ಟ್ 2023 ರಿಂದ 2 ಸಾವಿರ ರೂಪಾಯಿ ಮೊತ್ತವನ್ನು ನೋಂದಾಯಿಸಿಕೊಂಡಿದ್ದ ● 8ನೇ ಪುಟಕ್ಕೆ

ಮೈಸೂರಲ್ಲಿ ಬೆಂಗಳೂರಿನ 'ಟಿಕ್‌ಟಾಕ್ ಸ್ಟಾರ್' ಸ್ಟೈಲ್ ನವೀನ್ ಬರ್ಬರ ಹತ್ಯೆ: 8 ಮಂದಿ ಬಂಧನ ■ ಪುಟ–6



ಗ್ಯಾರಂಟಿ ಯೋಜನೆಗಳು ಮಹಾ ಚಿಂತಕರು ಇಲ್ಲವೇ ಬಂಡವಾಳಶಾಹಿಗಳು ರೂಪಿಸಿದ್ದಲ್ಲ

ಮೈಸೂರು, ಆ.30(ಬಿಎಲ್ ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ರೂಪಿಸಿರುವ ಐದು ಗ್ಯಾರಂಟಿ ಯೋಜನೆಗಳನ್ನು ಯಾವುದೇ ಮಹಾ ಚಿಂತಕರು (ಥಿಂಕ್ ಟ್ಯಾಂಕರ್ಸ್) ಇಲ್ಲವೇ ಬಂಡವಾಳಶಾಹಿಗಳು ರೂಪಿಸಿರುವ ಯೋಜನೆಯಾಗಿರದೆ ಜನರಿಂದ, ಜನರಿಗಾಗಿ ರೂಪಿಸಿರುವ ಯೋಜನೆಯಾಗಿದೆ.



ಇದನ್ನೇ ಮಾದರಿಯಾಗಿಟ್ಟುಕೊಂಡು ಇಡೀ ದೇಶದಲ್ಲಿ ಗ್ಯಾರಂಟಿ ಯೋಜನೆಯನ್ನು ಅನುಷ್ಠಾನ ಮಾಡುತ್ತೇವೆ ಎಂದು ಸಂಸದರೂ ಆದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭರವಸೆ ನೀಡಿದರು. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ಕುಟುಂಬದ ಕಣ್ಣು, ಬುನಾದಿ ಎಂದು ಹೇಳುವ ಮೂಲಕ ದೇಶದ ಬೆಳವಣಿಗೆಯಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ರಾಜ್ಯ ಕಾಂಗ್ರೆಸ್ ಸರ್ಕಾರ ರೂಪಿಸಿರುವ ಐದು ಗ್ಯಾರಂಟಿ ಸ್ಕೀಂಗಳಲ್ಲಿ ನಾಲ್ಕು ಯೋಜನೆಗಳು ಮಹಿಳೆಯರಿಗೆ ಹಾಗೂ ● 6ನೇ ಪುಟಕ್ಕೆ

ಸಂವಿಧಾನ, ಪ್ರಜಾಪ್ರಭುತ್ವ ಉಳಿಸುವುದು ನಮ್ಮೆಲ್ಲರ ಗುರುತರ ಜವಾಬ್ದಾರಿ: ಮಲ್ಲಿಕಾರ್ಜುನ ಖರ್ಗೆ ಸಲಹೆ

ಮೈಸೂರು, ಆ.30(ಆರ್‌ಕೆ)–ಡಾ.ಅಂಬೇಡ್ಕರ್ ಕೊಟ್ಟ ಸಂವಿಧಾನವನ್ನು ಉಳಿಸುವ ಗುರುತರ ಜವಾಬ್ದಾರಿ ನಮ್ಮದಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇಂದಿಲ್ಲಿ ತಿಳಿಸಿದ್ದಾರೆ. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಸಂವಿಧಾನ ಹಾಳಾದರೆ ನಾವು ಸತ್ತಂತೆಯೇ ಸರಿ. ಬಡವರು, ಹಿಂದುಳಿದವರು, ದಲಿತ ಸಮುದಾಯ ಸೇರಿದಂತೆ ಸಮಾಜದ ಎಲ್ಲ ವರ್ಗದ ಜನರಿಗೆ ಸಮಾನತೆ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವದ ಆಶಯಗಳನ್ನು ರಕ್ಷಿಸುವ ಸಂವಿಧಾನವನ್ನು ಉಳಿಸಿ ಗಟ್ಟಿಗೊಳಿಸಬೇಕಿದೆ ಎಂದರು. 53 ವರ್ಷ ದೇಶವನ್ನಾಳಿದ ಕಾಂಗ್ರೆಸ್ ಏನೂ ಮಾಡಿಲ್ಲ ಎಂದು ಟೀಕಿಸುವ ನರೇಂದ್ರ ಮೋದಿ, ಅಮಿತ್ ಶಾ ಒಳಗೊಂಡಂತೆ ಹಲವು ಬಿಜೆಪಿ ನಾಯಕರಿಗೆ ನಾವು ಕೊಟ್ಟ ಹಲವು ಅಭಿವೃದ್ಧಿ ಯೋಜನೆಗಳು ಕಾಣುತ್ತಿಲ್ಲ. ಕಾಂಗ್ರೆಸ್ ಆರ್ಥಿಕ ಪರಿಸ್ಥಿತಿಯನ್ನು ಹಾಳು ಮಾಡಿ ದೇಶವನ್ನು ● 8ನೇ ಪುಟಕ್ಕೆ



ನೂರೇ ದಿನದಲ್ಲಿ ನಮ್ಮ ಸರ್ಕಾರ ಕೊಟ್ಟ ಮಾತು ಈಡೇರಿಸಿದೆ: ಸಿಎಂ ಸಿದ್ದರಾಮಯ್ಯ ದಿಟ್ಟ ನುಡಿ

ಮೈಸೂರು,ಆ.30(ಎಂಟಿವೈ)– ದೇಶ ಮತ್ತು ರಾಜ್ಯದ ಇತಿಹಾಸದಲ್ಲಿ ಅಧಿಕಾರಕ್ಕೆ ಬಂದ ನೂರೇ ದಿನದಲ್ಲಿ ಕೊಟ್ಟ ಭರವಸೆ ಈಡೇರಿಸಿದ ಯಾವುದಾದರೂ ಸರ್ಕಾರವಿದ್ದರೆ, ಅದು ರಾಜ್ಯ ಕಾಂಗ್ರೆಸ್ ಸರ್ಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದ್ದಾರೆ.



ರಾಜ್ಯದಲ್ಲಿ ನುಡಿದಂತೆ ನಮ್ಮ ಸರ್ಕಾರ ನಡೆಯುತ್ತಿದೆ. ಈ ಹಿಂದೆ 2013ರಿಂದ 2018ರವರೆಗೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ನಮ್ಮ ಸರ್ಕಾರ ನೀಡಿದ್ದ 165 ಭರವಸೆಗಳಲ್ಲಿ 158 ಭರವಸೆ ಈಡೇರಿಸಲಾಗಿತ್ತು. ಇದೀಗ ಅಧಿಕಾರಕ್ಕೆ ಬಂದ 100 ದಿನದಲ್ಲಿ ಪ್ರಮುಖ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ದೇಶ ಹಾಗೂ ರಾಜ್ಯದ ರಾಜಕೀಯ ಇತಿಹಾಸದಲ್ಲಿ ನೂರೇ ದಿನದಲ್ಲಿ ಭರವಸೆ ಈಡೇರಿಸಿದ ಸರ್ಕಾರ ಎಂಬ ಹೆಗ್ಗಳಿಕೆ ನಮ್ಮ ಕಾಂಗ್ರೆಸ್ ಸರ್ಕಾರಕ್ಕೆ ದಕ್ಕಿದೆ. 5ನೇ ಗ್ಯಾರಂಟಿ ಯೋಜನೆಯಾದ ನಿರುದ್ಯೋಗಿಗಳಿಗೆ ಭತ್ಯೆ ನೀಡುವ ಕಾರ್ಯಕ್ರಮವನ್ನು ಡಿಸೆಂಬರ್ ಅಂತ್ಯ ಅಥವಾ ಜನವರಿ ಮೊದಲ ವಾರದಲ್ಲಿ ಜಾರಿಗೊಳಿಸುತ್ತೇವೆ ● 8ನೇ ಪುಟಕ್ಕೆ

ಇಂದಿರಾ ಗಾಂಧಿ ಕಾಲದ ವೈಭವ ಮರುಕಳಿಸುತ್ತಿದೆ: ಡಿಸಿಎಂ ಡಿ.ಕೆ.ಶಿವಕುಮಾರ್ ಸಂತಸ

ಮೈಸೂರು, ಆ.30(ಬಿಎಲ್‌ಯು)–ದಿವಂಗತ ಪ್ರಧಾನಮಂತ್ರಿ ಇಂದಿರಾಗಾಂಧಿ ಅವರ ಕಾಲದ ವೈಭವ ದೇಶದಲ್ಲಿ ಈಗ ಮರುಕಳಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂತಸ ವ್ಯಕ್ತಪಡಿಸಿದರು. ದೇಶದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಇಂದಿರಾಗಾಂಧಿ ಅವರು ಪ್ರಧಾನಿ ಆಗಿದ್ದ ವೇಳೆ ಅನುಷ್ಠಾನಗೊಂಡ ಹಲವು ಜನಪರ ಯೋಜನೆಗಳ ಮಾದರಿಯಲ್ಲಿ ಈಗ ಕೆಲವು ಯೋಜನೆಗಳು ಜಾರಿಯಾಗುತ್ತಿವೆ. ಈ ಮೂಲಕ ಇಂದಿರಾಗಾಂಧಿ ಅವರ ಕಾಲದ ವೈಭವ ದೇಶದಲ್ಲಿ ಮರುಕಳಿಸುತ್ತಿದೆ ಎಂದರು. ರಾಹುಲ್ ಗಾಂಧಿ ಅವರು ಕರ್ನಾಟಕದಲ್ಲಿ 510 ಕಿಲೋ ಮೀಟರ್ ಪಾದಯಾತ್ರೆ ಮಾಡಿದರು. ಹಸಿವು, ಬಡತನ, ಬೆಲೆ ಏರಿಕೆ ಸೇರಿದಂತೆ ಸರ್ಕಾರದ ಜನ ವಿರೋಧಿ ನೀತಿಗಳು ರಾಹುಲ್‌ಗಾಂಧಿಗೆ ಆ ವೇಳೆ ಮನವರಿಕೆಯಾದವು. ಜನರ ಈ ಸಮಸ್ಯೆಗಳನ್ನು ಪರಿಹಾರ ಮಾಡಲು ಗ್ಯಾರಂಟಿ ಯೋಜನೆಗಳನ್ನು ರೂಪಿಸುವಂತೆ ರಾಹುಲ್ ಗಾಂಧಿ ನಮಗೆ ಮಾರ್ಗದರ್ಶನ ● 8ನೇ ಪುಟಕ್ಕೆ



ಶೇ.80ರಷ್ಟು ಭಾರತೀಯರಿಗೆ ಮೋದಿಯೇ ಅಚ್ಚುಮೆಚ್ಚು; ಮೂರನೇ ಬಾರಿಗೆ ಪ್ರಧಾನಿಯಾಗಲು ಭಾರೀ ಬೆಂಬಲ

ನವದೆಹಲಿ: ಲೋಕಸಭಾ ಚುನಾವಣೆಗೆ ಕೆಲ ತಿಂಗಳು ಮಾತ್ರ ಬಾಕಿ ಇದೆ. ಇದರ ಬೆನ್ನಲ್ಲೇ ಹಲವು ಸಂಸ್ಥೆಗಳು ಸಮೀಕ್ಷಾ ವರದಿಗಳನ್ನು ಬಿಡುಗಡೆ ಮಾಡುತ್ತಿವೆ. ಇದೀಗ Pew ಸಂಶೋಧನಾ ಸಂಸ್ಥೆ ಪ್ರಕಟಿಸಿದ ಅಧ್ಯಯನ ವರದಿಯಲ್ಲಿ ಶೇ.80ರಷ್ಟು ಭಾರತೀಯರು ಪ್ರಧಾನಿ ಮೋದಿಯೇ ಅಚ್ಚುಮೆಚ್ಚು ಎಂದಿದ್ದಾರೆ. 3ನೇ ಬಾರಿ ಪ್ರಧಾನಿ ಪಟ್ಟ ಅಲಂಕರಿಸಲು ಮೋದಿ ಅವರನ್ನೇ ಬೆಂಬಲಿಸಿದ್ದಾರೆ.

Pew ಸರ್ವೇ ತಂಡ ಭಾರತ ಹಾಗೂ 23 ದೇಶಗಳಲ್ಲಿ ಒಟ್ಟು 30,800 ವಯಸ್ಕರ ಅಭಿಪ್ರಾಯ ಕೇಳಿ ಸಮೀಕ್ಷಾ ವರದಿ ಸಂಗ್ರಹಿಸಿದೆ. ಈ ಪೈಕಿ ಶೇ.80ರಷ್ಟು ಮಂದಿ ಜಾಗತಿಕ ಮಟ್ಟದಲ್ಲಿ ಭಾರತದ ಚರಿಷ್ಮಾ ಬದಲಿಸಿದ ಮೋದಿ ಪರ ಒಲವಿದ್ದು, ಪ್ರಮುಖವಾಗಿ ಜಾಗತಿಕ ಮಟ್ಟದಲ್ಲಿ ಭಾರತವನ್ನು ವಿಶ್ವಗುರು ಸ್ಥಾನಕ್ಕೆ ಕೊಂಡೊಯ್ದಿದ್ದಾರೆ ಎಂದಿದ್ದಾರೆ. ಶೇ.55ರಷ್ಟು ಮಂದಿ 2014ರಿಂದ ಭಾರತ ಹೊಸ ದಿಕ್ಕಿನಲ್ಲಿ ಸಾಗುತ್ತಿದೆ ಎಂದಿದ್ದಾರೆ. ಮೋದಿ ಆಡಳಿತದಲ್ಲಿ ನವಭಾರತವಾಗಿ ರೂಪುಗೊಂಡಿದೆ. ಮೋದಿ ಆಡಳಿತ ಉತ್ತಮ ಎಂದಿದ್ದಾರೆ.

ಶೇ.55ರಷ್ಟು ಮಂದಿ 2024ರ ಲೋಕಸಭಾ ಚುನಾವಣೆಯಲ್ಲಿ ಮೋದಿ 3ನೇ ಬಾರಿಗೆ ಪ್ರಧಾನಿಯಾಗಲು ಒಲವು ವ್ಯಕ್ತಪಡಿಸಿ ದ್ದಾರೆ. ಮೋದಿಯೇ ಸೂಕ್ತ ಪ್ರಧಾನಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೆಹಲಿಯಲ್ಲಿ ಸೆಪ್ಟೆಂಬರ್ 9 ಹಾಗೂ 10ರಂದು ನಡೆಯಲಿರುವ ಜಿ20 ಶೃಂಗಸಭೆಗೂ ಒಂದು ವಾರ ಮುನ್ನ ಈ ಅಂಕಿ ಅಂಶ ಬಹಿರಂಗಗೊಂಡಿದೆ. ಇದರೊಂದಿಗೆ ಮೋದಿ ಜನಪ್ರಿಯತೆ ಮತ್ತಷ್ಟು ಹೆಚ್ಚಾಗಿದೆ. ಈ ಸಮೀಕ್ಷೆಯಲ್ಲಿ ಕೇವಲ ಭಾರತ ಮಾತ್ರವಲ್ಲ, ಇತರ 23 ದೇಶಗಳ ಜನರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಪ್ರಧಾನಿ ಮೋದಿ ಕಡೆಗಿರುವ ಒಲವಿನ ಪ್ರಮಾಣ ದುಪ್ಪಟ್ಟಾಗಿದೆ. ಚಂದ್ರಯಾನ–3 ಯಶಸ್ವಿ ಲ್ಯಾಂಡಿಂಗ್ ಬಳಿಕ ಭಾರತ ಜಾಗತಿಕ ಮಟ್ಟದಲ್ಲಿ ವಿಶ್ವಗುರು ಅನ್ನೋ ಮಾತುಗಳು ಕೇಳಿಬರುತ್ತಿದೆ. ಇದರ ಜೊತೆಗೆ ಸಮೀಕ್ಷಾ ವರದಿಯೂ ಬಿಡುಗಡೆಯಾಗಿದೆ.



ಐದನೇ ಪುಟದಿಂದ

ಮನೆ ಯಜಮಾನಿಗೆ ಈಗ 'ಗೃಹಲಕ್ಷ್ಮಿ'

ಕಾರ್ಯಕ್ರಮಕ್ಕೆ ಭಾರೀ ಸಂಖ್ಯೆಯಲ್ಲಿ ಜನರು ಆಗಮಿಸಲಾರಂಭಿಸಿದರೂ, ಒಂದೂವರೆ ಗಂಟೆ ತಡವಾಗಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಮಧ್ಯಾಹ್ನ 12.55 ಗಂಟೆಗೆ ವೇದಿಕೆಗೆ ಆಗಮಿಸಿದಾಗ ನೆರೆದಿದ್ದ ಅಪಾರ ಸಂಖ್ಯೆಯ ಗೃಹ ಲಕ್ಷ್ಮಿಯರು ಭಾರೀ ಕರತಾಡನದ ಮೂಲಕ ಭವ್ಯ ಸ್ವಾಗತ ಕೋರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ರಾಜ್ಯಸಭಾ ಸದಸ್ಯರಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಸಚಿವರಾದ ಕೆ.ಹೆಚ್. ಮುನಿಯಪ್ಪ, ಕೆ.ವೆಂಕಟೇಶ್, ಎನ್. ಚಲುವರಾಯಸ್ವಾಮಿ, ಕೆ.ಎನ್.ರಾಜಣ್ಣ, ಎಸ್.ಎಸ್. ಬೋಸರಾಜು, ಡಾ. ಜಿ. ಪರಮೇಶ್ವರ, ಸತೀಶ್ ಜಾರಕಿಹೊಳಿ ಪಾಲ್ಗೊಂಡಿದ್ದರು.

ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಕೆ. ಹರೀಶ್‌ಗೌಡ, ದರ್ಶನ್ ಪುಟ್ಟಣ್ಣಯ್ಯ, ಹೆಚ್. ವಿಶ್ವನಾಥ್, ಮಧು ಜಿ. ಮಾದೇಗೌಡ, ದರ್ಶನ್ ಧ್ರುವನಾರಾಯಣ, ರಮೇಶ್ ಬಂಡಿಸಿದ್ದೇಗೌಡ, ಡಾ. ತಿಮ್ಮಯ್ಯ, ಡಿ. ರವಿಶಂಕರ್, ದಿನೇಶ್ ಗೂಳಿಗೌಡ, ಪಿ.ಎಂ. ನರೇಂದ್ರಸ್ವಾಮಿ ಸೇರಿದಂತೆ ಹಲವರು ಭಾಗವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಜಿ.ಸಿ. ಪ್ರಕಾಶ್, ನಿರ್ದೇಶಕಿ ಎಂ.ಎಸ್. ಅರ್ಚನಾ, ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಎಸ್ಪಿ ಸೀಮಾ ಲಾಟ್ಕರ್, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ಇನ್ನಿತರ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜನಸಾಗರ: ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಮೈಸೂರಿನ ಕಾರ್ಯಕ್ರಮಕ್ಕೆ ಜನಸಾಗರವೇ ಹರಿದುಬಂದಿತು. ಸುಮಾರು 2000 ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ತುಮಕೂರು, ರಾಮನಗರ, ಚಿಕ್ಕಮಗಳೂರು, ಚಿತ್ರದುರ್ಗ, ಕೋಲಾರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳನ್ನು ಕರೆತರಲಾಗಿತ್ತು.

12,500 ಕೇಂದ್ರಗಳಲ್ಲಿ: ಮೈಸೂರಿನಲ್ಲಿ ಚಾಲನೆಗೊಂಡ ಗೃಹಲಕ್ಷ್ಮಿ ಯೋಜನೆ ಕಾರ್ಯಕ್ರಮವು ರಾಜ್ಯಾದ್ಯಂತ 12,500 ಕೇಂದ್ರಗಳಲ್ಲಿ ನೇರ ಪ್ರಸಾರವಾಯಿತಲ್ಲದೆ, ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮೆ ಆಗಿ ಮೊಬೈಲ್‌ಗಳಿಗೆ ಸಂದೇಶವೂ ರವಾನೆಯಾಯಿತು.

ಸಂಗೀತ ರಸದೌತಣ: ಗೃಹಲಕ್ಷ್ಮಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಹಸ್ರಾರು ಮಂದಿಗೆ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಚಿತ್ರನಟ ಸಾಧು ಕೋಕಿಲ ತಂಡ ಪ್ರಸ್ತುತಪಡಿಸಿದ ಸಂಗೀತ ಕಾರ್ಯಕ್ರಮ ಮುದ ನೀಡಿತು. ಗಣ್ಯರು ಆಗಮಿಸುವುದು ತಡವಾದರೂ ಕಲಾವಿದರ ಮಧುರ ಗೀತೆಗಳು ನೆರೆದಿದ್ದವರಿಗೆ ಸಂಗೀತ ರಸದೌತಣ ನೀಡಿತು.

ರಾರಾಜಿಸಿದ ಕಟೌಟ್‌ಗಳು: ಕಾರ್ಯಕ್ರಮಕ್ಕಾಗಿ ನಿರ್ಮಿಸಿದ್ದ ಭವ್ಯ ಮಂಟಪದ ಮಹಾದ್ವಾರವನ್ನು ಮೈಸೂರು ಅರಮನೆ ಮಾದರಿ ವಿನ್ಯಾಸಗೊಳಿಸಿದ್ದರಿಂದ ಎಲ್ಲರ ಕಣ್ಣನ ಸೆಳೆಯಿತು. ಹಾಗೆಯೇ ವಿಶಾಲ ವೇದಿಕೆಗೆ ಎಲ್‌ಇಡಿ ಅಳವಡಿಸಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಸಾಧನೆ, ಕಾರ್ಯಕ್ರಮಗಳನ್ನು ಹಿನ್ನೆಲೆಯಲ್ಲಿ (ಬ್ಯಾಕ್‌ಡ್ರಾಪ್) ಪ್ರಸ್ತುತಪಡಿಸಲಾಗಿತ್ತು.

ಮೈಸೂರು ಇತಿಹಾಸದಲ್ಲೇ ಅತೀ ದೊಡ್ಡ ಪೆಂಡಾಲ್, ವೇದಿಕೆಯನ್ನು ಹೈಟೆಕ್ ಆಗಿ ನಿರ್ಮಿಸಿದ್ದುದು ಇದೇ ಮೊದಲು ಹಾಗೂ ಮಹಾರಾಜ ಕಾಲೇಜು ಮೈದಾನದಲ್ಲಿ ಅತೀ ಹೆಚ್ಚು ಮಂದಿಗೆ ಸ್ಥಳಾವಕಾಶ ಒದಗಿಸಿದ್ದು ಸಹ ಪ್ರಥಮ ಬಾರಿಯಾಗಿತ್ತು. ಎಲ್ಲಿ ನೋಡಿದರಲ್ಲಿ ಕಾಂಗ್ರೆಸ್ ನಾಯಕರ ಭಾವಚಿತ್ರವಿರುವ ಕಟೌಟ್‌ಗಳು, ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು.

ಅಚ್ಚುಕಟ್ಟಾದ ವ್ಯವಸ್ಥೆ: ಅತೀ ದೊಡ್ಡ ಕಾರ್ಯಕ್ರಮದಲ್ಲಿ ಜನರಿಗೆ ಕುಳಿತುಕೊಳ್ಳಲು ಆಸನ, ಪ್ರತ್ಯೇಕ ಪ್ರವೇಶ, ಎನ್‌ಕ್ಲೋಸರ್, ಕುಡಿಯುವ ನೀರು, ಮೊಬೈಲ್ ಶೌಚಾಲಯ ಸೇರಿದಂತೆ ಜಿಲ್ಲಾಡಳಿತವು ಸರ್ವ ರೀತಿಯಲ್ಲಿ ಸೌಲಭ್ಯ ಕಲ್ಪಿಸಲಾಗಿತ್ತಾದರೂ, ಸ್ಥಳಾವಕಾಶವಿಲ್ಲದೆ ಸಾವಿರಾರು ಮಂದಿ ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಮಹಾರಾಜ ಕಾಲೇಜು, ಡಿಸಿ ಕಚೇರಿ ಸುತ್ತುವರಿದು ನಿಂತು ಡ್ರೋನ್ ಪರದೆಗಳ ಮೂಲಕ ಕಾರ್ಯಕ್ರಮವನ್ನು ವೀಕ್ಷಿಸಬೇಕಾಯಿತು.

ಅಷ್ಟಲಕ್ಷ್ಮಿಯರು ಪ್ರತ್ಯಕ್ಷ: ಕಾರ್ಯಕ್ರಮದಲ್ಲಿ ಗಣ್ಯರು 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡುವ ಸಂದರ್ಭ ಚೆಕ್ ವಿತರಿಸುವಾಗ ಉದಯವಾಯಿತಲ್ಲದೇ, 8 ಮಂದಿ ಲಕ್ಷ್ಮಿ ವೇಷಧಾರಿಗಳು ವೇದಿಕೆಯಲ್ಲಿ ಪ್ರತ್ಯಕ್ಷರಾಗಿದ್ದು, ನೆರೆದಿದ್ದವರನ್ನು ಆಶ್ಚರ್ಯಗೊಳಿಸಿತು. ಅದೇ ವೇಳೆ ಭಾರತ ಧ್ವಜ ಪ್ರದರ್ಶನಗೊಂಡು ದೇಶಪ್ರೇಮ ಮೆರೆದಿದ್ದು ವಿಶೇಷವಾಗಿತ್ತು.

ಮಧ್ಯಾಹ್ನ 1 ಗಂಟೆಗೆ ಆರಂಭವಾದ ಕಾರ್ಯಕ್ರಮವು ಕೇವಲ ಒಂದುಮುಕ್ಕಾಲು ತಾಸಿನಲ್ಲಿ ಮಧ್ಯಾಹ್ನ 2.40 ಗಂಟೆಗೆ ಮುಕ್ತಾಯಗೊಂಡಿತು. ವಂದನಾರ್ಪಣೆ ವೇಳೆಗೆ ಅಲ್ಲಿದ್ದವರ ಪೈಕಿ ಶೇ. 30ರಷ್ಟು ಮಂದಿ ಪೆಂಡಾಲ್‌ನಿಂದ ಹೊರ ಹೋಗಿದ್ದರು. ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನೇತೃತ್ವದಲ್ಲಿ ಭಾರೀ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಬಂಡವಾಳಶಾಹಿಗಳು ರೂಪಿಸಿದ್ದಲ್ಲ

ಮಹಿಳಾ ಸಬಲೀಕರಣಕ್ಕೆ ಮೀಸಲಾದ ಯೋಜನೆಗಳಾಗಿವೆ. ಈ ದೇಶದ ಬುನಾದಿ ಮಹಿಳೆಯರೇ ಆಗಿದ್ದಾರೆ. ಅವರು ಸದೃಢರಾಗದ ಹೊರತು ರಾಜ್ಯ ಸದೃಢವಾಗದು. ಮರದ ಕಾಂಡ ಹೇಗೆ ಕಣ್ಣಿಗೆ ಕಾಣಿಸುವುದಿಲ್ಲವೋ ಹಾಗೆ ನಾರಿ ಶಕ್ತಿಯೂ ಕಣ್ಣಿಗೆ ಗೋಚರಿಸದು. ಎಷ್ಟೇ ಬೃಹತ್ ಕಟ್ಟಡ ಕಟ್ಟಿದರೂ ಅಡಿಪಾಯ ಸರಿ ಇಲ್ಲ ಅಂದರೆ ಆ ಕಟ್ಟಡದಲ್ಲಿ ಸತ್ವ ಇರುವುದಿಲ್ಲ. ಹಾಗೆಯೇ ಮಹಿಳೆಯರು ಕುಟುಂಬದ ಅಡಿಪಾಯವಾಗಿರುತ್ತಾರೆ ಎಂದು ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು.

ಭಾರತ್ ಜೋಡೋ ಯಾತ್ರೆ ವೇಳೆ ಬಹಳಷ್ಟು ಮಹಿಳೆಯರ ಜೊತೆ ಮುಕ್ತವಾಗಿ ಸಂವಾದಿಸಿದೆ. ಸುಮಾರು 600 ಕಿಲೋಮೀಟರ್ ಪಾದಯಾತ್ರೆಯ ಸಮಯದಲ್ಲಿ ತಮ್ಮ ಸಮಸ್ಯೆಯನ್ನು ಮಹಿಳೆಯರು ನನ್ನ ಮುಂದಿಟ್ಟರು. ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಇತರೆ ಬೆಲೆ ಏರಿಕೆಯಿಂದ ನಾವು ತತ್ತರಿಸಿದ್ದೇವೆ ಎಂದು ಮಹಿಳೆಯರು ಹೇಳಿದರು. ಕುಟುಂಬ ನಿರ್ವಹಣೆ ಮಾಡಲು ಮಹಿಳೆಯರು ಪಡುತ್ತಿರುವ ಪಾಡು ಏನು ಎಂದು ನನಗೆ ಮನವರಿಕೆಯಾಯಿತು. ಜೊತೆಗೆ ನಾರಿ ಶಕ್ತಿಯ ಮಹತ್ವ ಏನೆಂದು ಖಚಿತವಾಯಿತು. ಈ ಹಿನ್ನೆಲೆಯಲ್ಲಿ ಮಹಿಳಾ ಪರವಾದ ಗ್ಯಾರಂಟಿ ಸ್ಕೀಂಗಳನ್ನು ಚುನಾವಣಾ ಪೂರ್ವದಲ್ಲಿ ಘೋಷಣೆ ಮಾಡಿದ್ದೆವು. ಈಗ ಅದನ್ನು ಅನುಷ್ಠಾನಕ್ಕೆ ತಂದಿದ್ದೇವೆ ಎಂದು ರಾಹುಲ್ ಗಾಂಧಿ ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಬದ್ಧತೆ ಇದ್ದ ಕಾರಣ ಚುನಾವಣೆ ಮುನ್ನ ಕೊಟ್ಟ ಮಾತಿನಂತೆ ಈಗ ನಡೆದಿದ್ದೇವೆ. ಈ ಮೂಲಕ ನುಡಿದಂತೆ ನಡೆಯುವ ಪಕ್ಷ ಎಂಬುದನ್ನು ಕಾಂಗ್ರೆಸ್ ಸಾಬೀತು ಮಾಡಿದೆ. ಇವತ್ತು ಕೋಟ್ಯಾಂತರ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ವರ್ಗಾವಣೆಯಾಗುತ್ತದೆ. ಈ ತಿಂಗಳು ಮಾತ್ರವಲ್ಲದೆ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಪ್ರತಿಯೊಬ್ಬ ಮಹಿಳೆಗೂ ದೊರೆಯುತ್ತದೆ ಎಂದು ರಾಹುಲ್ ಗಾಂಧಿ ತಿಳಿಸಿದರು. ಕುಟುಂಬದ ಅವಿಭಾಜ್ಯ ಅಂಗವಾದ ಮಹಿಳೆಯರು ಕರ್ನಾಟಕದ ಯಾವುದೇ ಮೂಲೆಗಾದರೂ ನಯಾ ಪೈಸೆ ಖರ್ಚಿಲ್ಲದೆ ಪ್ರಯಾಣ ಮಾಡಬಹುದು. ಅನ್ನಭಾಗ್ಯ ಯೋಜನೆಯಲ್ಲಿ 10 ಕೆ.ಜಿ. ಅಕ್ಕಿ ದೊರೆಯಲಿದೆ. ಮನೆ ಬೆಳಗಲು 200 ಯೂನಿಟ್ ಉಚಿತ ವಿದ್ಯುತ್ ದೊರೆಯುತ್ತದೆ. ಈಗ ಕುಟುಂಬದ ನಿರ್ವಹಣೆ ಮಾಡಲು 2 ಸಾವಿರ ಹಣ ದೊರೆಯುತ್ತಿದೆ. ಈ ಮೂಲಕ ನಾರಿಶಕ್ತಿಯನ್ನು ಮತ್ತಷ್ಟು ಬಲಿಷ್ಠಗೊಳಿಸಿದ್ದೇವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಅರ್ಪಿಸಿದ್ದೇವೆ ಎಂದರು.

'ಯುವ ನಿಧಿ' ಮತ್ತೊಂದು ಗ್ಯಾರಂಟಿ ಸ್ಕೀಂ ಅನುಷ್ಠಾನಗೊಳ್ಳಬೇಕಿದೆ. ಈ ಯೋಜನೆಯಲ್ಲಿ ಪದವಿ ಪಡೆದ ನಿರುದ್ಯೋಗಿಗೆ 3 ಸಾವಿರ ಹಾಗೂ ಡಿಪ್ಲೊಮಾ ಮುಗಿಸಿದವರಿಗೆ 1,500 ರೂಪಾಯಿ ದೊರೆಯುತ್ತದೆ. ಕಾಂಗ್ರೆಸ್ ಸರ್ಕಾರ ನೂರು ದಿನ ಪೂರೈಸಿರುವ ಹಿನ್ನೆಲೆ ನಡೆಯುತ್ತಿರುವ ಈ ಕಾರ್ಯಕ್ರಮದಂತೆ ರಾಜ್ಯದ 12 ಸಾವಿರ ಕಡೆ ಮಹಿಳೆಯರು ಸಮಾಗಮಗೊಂಡು ಸಂಭ್ರಮಾಚರಿಸಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಯನ್ನು ಇಡೀ ದೇಶದಲ್ಲಿ ಅನುಷ್ಠಾನ ಮಾಡುತ್ತೇವೆ. ದೇಶದ ಅಭಿವೃದ್ಧಿಗೆ ಗ್ಯಾರಂಟಿ ಸ್ಕೀಂಗಳು ದಾರಿದೀಪವಾಗಿವೆ ಎಂದು ತಿಳಿಸಿದರು.

ಕೇಂದ್ರ ಬಿಜೆಪಿ ಸರ್ಕಾರ ಕೋಟ್ಯಾಧಿಪತಿಗಳಿಗಾಗಿ ಕೆಲಸ ಮಾಡುತ್ತದೆ. ಕೇವಲ ಇಬ್ಬರು ಮೂವರಿಗಾಗಿ ದೇಶದ ಎಲ್ಲಾ ಪ್ರಗತಿಯನ್ನು ಮೀಸಲಿಡುತ್ತಿದೆ. ಆದರೆ ಕಾಂಗ್ರೆಸ್ ಸರ್ಕಾರ ಬಡವರು ಹಾಗೂ ದೀನ ದಲಿತರ ಉದ್ಧಾರಕ್ಕಾಗಿ ಮೀಸಲಾದ ಸರ್ಕಾರವಾಗಿದೆ. ಯಾವುದೇ ಜಾತಿ, ಧರ್ಮ, ಭಾಷೆಯ ಭೇದ-ಭಾವವಿಲ್ಲದೆ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತಿದೆ.

ಕಾಂಗ್ರೆಸ್ ಪಕ್ಷ ಗ್ಯಾರಂಟಿ ಯೋಜನೆಯನ್ನು ಘೋಷಣೆ ಮಾಡಿದಾಗ ಇದರ ಅನುಷ್ಠಾನ ಸಾಧ್ಯವಿಲ್ಲ ಎಂದು ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರು ವ್ಯಂಗ್ಯವಾಡಿದರು. ಆದರೆ ಕೇವಲ ನೂರು ದಿನದ ಅವಧಿಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಈಗ ನಮ್ಮ ಮಾತು ನಿಜವಾಗಿದೆ. ಅದೇ ಬಿಜೆಪಿಯವರ ಟೀಕೆ ಅವರಿಗೆ ಉಲ್ಟಾ ಆಗಿದೆ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು. ಭಾರತ ಮಾತ್ರವಲ್ಲದೆ ಇಡೀ ವಿಶ್ವದಲ್ಲಿ ದೊಡ್ಡ ಮೊತ್ತವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ನೀಡುವ ಐತಿಹಾಸಿಕ ಕಾರ್ಯಕ್ರಮ ಇದಾಗಿದೆ. ಇದರಿಂದ ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ಮಕ್ಕಳ ಇತರೆ ಖರ್ಚಿಗೆ ಈ ಹಣ ಬಳಕೆಯಾಗುತ್ತದೆ. ಈ ಯೋಜನೆ ಸಾಕಾರಗೊಳ್ಳಲು ಮಹಿಳೆಯರೇ ಕಾರಣಕರ್ತರು. ಕಾಂಗ್ರೆಸ್ ಪಕ್ಷಕ್ಕೆ ಬೆನ್ನೆಲುಬಾಗಿ ನಿಂತ ಕಾರಣ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆ ಜಾರಿ ಗೊಳಿಸಿತು. ಇದರಿಂದ ಇದರ ಪೂರ್ಣ ಕ್ರೆಡಿಟ್ ಮಹಿಳೆಯರಿಗೆ ಹೋಗಬೇಕು ಎಂದು ರಾಹುಲ್ ಗಾಂಧಿ ತಮ್ಮ ಭಾಷಣ ದುದ್ದಕ್ಕೂ ವನಿತೆಯರ ಬಗ್ಗೆ ಗುಣಗಾನ ಮಾಡಿದರು. ಕಾಂಗ್ರೆಸ್ ಪಕ್ಷ ಯಾವತ್ತೂ ಸುಳ್ಳು ಭರವಸೆ ನೀಡುವುದಿಲ್ಲ. ಯಾವುದಾದರೊಂದು ಕೆಲಸ ನಮ್ಮಿಂದ ಆಗುವುದಿಲ್ಲ ಎಂದು ತಿಳಿದರೆ ಮುಚ್ಚುಮರೆ ಇಲ್ಲದೆ ಹೇಳುತ್ತೇವೆ. ಅದೇ ಆ ಕೆಲಸ ಸಾಧ್ಯವಾಗುತ್ತದೆ ಎಂದಾದರೆ ಅದೆಷ್ಟೇ ಕಷ್ಟವಾದರೂ ಅದನ್ನು ಜಾರಿಗೊಳಿಸುತ್ತೇವೆ. ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ನಮ್ಮ ಬಳಿ ಹೇಳಿ, ಅದನ್ನು ಪರಿಹಾರ ಮಾಡಲು ಪ್ರಯತ್ನ ಮಾಡುತ್ತೇವೆ ಎಂದು ರಾಹುಲ್ ಗಾಂಧಿ ಆಶ್ವಾಸನೆ ನೀಡಿದರು.

ಮೈಸೂರಲ್ಲಿ ಬೆಂಗಳೂರಿನ 'ಟಿಕ್‌ಟಾಕ್ ಸ್ಟಾರ್' ಸ್ಮೈಲ್ ನವೀನ್ ಬರ್ಬರ ಹತ್ಯೆ: 8 ಮಂದಿ ಬಂಧನ

ಬಿಬಿಎಂಪಿ ಬಿಜೆಪಿ ಕಾರ್ಪೊರೇಟರ್ ಸೋಮಣ್ಣರ ಅಣ್ಣನ ಮಗನ ಹತ್ಯೆಗೆ ರಿವೇಂಜ್ ಶಂಕೆ

ಮೈಸೂರು, ಆ. 30– ಟಿಕ್‌ಟಾಕ್ ಸ್ಟಾರ್ ಸ್ಮೈಲ್ ನವೀನ್ ಮೈಸೂರಿನಲ್ಲಿ ಬರ್ಬರವಾಗಿ ಹತ್ಯೆಯಾಗಿದ್ದಾನೆ. ಈತನನ್ನು ಮೈಸೂರು ಅರಮನೆ ವರಹಾ ಗೇಟ್ ಮುಂಭಾಗದಿಂದ ಅಪಹರಿಸಿದ ದುಷ್ಕರ್ಮಿಗಳು ಕಾರಿನಲ್ಲೇ ಹತ್ಯೆಗೈದು ಶವವನ್ನು ನಂಜನಗೂಡು ತಾಲೂಕು ಗೋಳೂರು ಗ್ರಾಮದ ಹುಲ್ಲಹಳ್ಳಿ ನಾಲೆ ಬಳಿ ಪೊದೆಯಲ್ಲಿ ಬಿಸಾಕಿ ಹೋಗಿದ್ದಾರೆ. ನಂಜನಗೂಡು ಡಿವೈಎಸ್ಪಿ ಗೋವಿಂದರಾಜು ಮಾರ್ಗದರ್ಶನದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದಾರೆ.

ರಾಮನಗರ ಜಿಲ್ಲೆ ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 3 ವರ್ಷದ ಹಿಂದೆ ನಡೆದಿದ್ದ ಬಿಬಿಎಂಪಿ ಅಂಜನಾಪುರ ವಾರ್ಡ್ ಬಿಜೆಪಿ ಕಾರ್ಪೊರೇಟರ್ ಸೋಮಣ್ಣ ಅವರ ಅಣ್ಣನ ಮಗ ವಿನೋದ್ ಹತ್ಯೆಗೆ ಪ್ರತೀಕಾರವಾಗಿ ಸ್ಮೈಲ್ ನವೀನ್‌ನನ್ನು ಹತ್ಯೆ ಮಾಡಿರಬಹುದು ಎಂದು ಹೇಳಲಾಗಿದೆ.

ವಿವರ: ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದ ವಿನೋದ್ ಅವರನ್ನು 2020ರ ಜುಲೈ ತಿಂಗಳಿನಲ್ಲಿ ಸ್ಮೈಲ್ ನವೀನ್ ಸೇರಿದಂತೆ 13 ಮಂದಿಯ ತಂಡ ಕಗ್ಗಲಿಪುರ ಠಾಣಾ ವ್ಯಾಪ್ತಿಯಲ್ಲಿ ಬರ್ಬರವಾಗಿ ಹತ್ಯೆಗೈದಿತ್ತು. ಈ ಪ್ರಕರಣದಲ್ಲಿ ತನ್ನ ನಾಲ್ವರು ಸ್ನೇಹಿತರೊಂದಿಗೆ ಸ್ಮೈಲ್ ನವೀನ್ ಪೊಲೀಸರಿಗೆ ಶರಣಾಗಿದ್ದ. ಪೊಲೀಸರು ಎಲ್ಲಾ 13 ಮಂದಿ ಆರೋಪಿಗಳನ್ನು ಬಂಧಿಸಿ, ಜೈಲಿಗಟ್ಟಿದ್ದರು. ಇತ್ತೀಚೆಗೆ ಸ್ಮೈಲ್ ನವೀನ್ ಜೈಲಿನಿಂದ ಬಿಡುಗಡೆಯಾಗಿದ್ದ.



ಸ್ಮೈಲ್ ನವೀನ್

ಈ ಹಿಂದೆ ಟಿಕ್‌ಟಾಕ್‌ನಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿದ್ದ ಸ್ಮೈಲ್ ನವೀನ್ ಟಿಕ್‌ಟಾಕ್ ಸ್ಟಾರ್ ಎಂದೇ ಕರೆಯಲ್ಪಡುತ್ತಿದ್ದ. ಈತನ ಟಿಕ್‌ಟಾಕ್‌ಗೆ ಅಪಾರ ಸಂಖ್ಯೆಯ ಅಭಿಮಾನಿಗಳಿದ್ದರು. ಸಿನಿಮಾ ಹಾಡುಗಳಿಗೆ ಮಾತ್ರವಲ್ಲದೇ ತಾನೆ ಚುಟುಕಾಗಿ ಕಥೆ ತಯಾರಿಸಿ ಟಿಕ್‌ಟಾಕ್‌ನಲ್ಲಿ ಅಭಿನಯಿಸುವ ಮೂಲಕ ಹೆಸರುವಾಸಿಯಾಗಿದ್ದ ಈತ, ರೌಡಿಗಳ ಜೊತೆ ಸೇರಿ ಹತ್ಯಾ ಪ್ರಕರಣದಲ್ಲಿ ಭಾಗಿಯಾಗಿ ಜೈಲು ಸೇರಿದ್ದ.

ಸರ್ಕಾರದಿಂದ ಟಿಕ್‌ಟಾಕ್ ಬ್ಯಾನ್ ಆದ ನಂತರ ಟಿಕ್‌ಟಾಕ್‌ನಂತಹುದ್ದೇ ಆಗಿರುವ ರೀಲ್ಸ್ ವಿಡಿಯೋ ಮಾಡುವ ಮೂಲಕ ಮತ್ತೆ ಮನರಂಜನಾ ಕ್ಷೇತ್ರಕ್ಕೆ ಈತ ಕಾಲಿಟ್ಟಿದ್ದ. ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್‌ನಲ್ಲಿ ಈತನಿಗೆ ಅಪಾರ ಸಂಖ್ಯೆಯ ಫಾಲೋವರ್ಸ್‌ಗಳಿದ್ದರು. ರೀಲ್ಸ್ ಮೂಲಕವು ಈತ ಅಭಿಮಾನಿಗಳ ದಂಡನ್ನು ಹೊಂದಿದ್ದ.

ಅರಮನೆ ಮುಂದೆ ರೀಲ್ಸ್ ಮಾಡುವಾಗ ಅಪಹರಣ: ಸ್ಮೈಲ್ ನವೀನ ತನ್ನ ಸ್ನೇಹಿತ ಪವನ್ ಹಾಗೂ ಇಬ್ಬರು ಯುವತಿಯೊಂದಿಗೆ ಆಗಸ್ಟ್ 27ರಂದು ಮೈಸೂರಿಗೆ ಆಗಮಿಸಿದ್ದ. ಅಂದು ರಾತ್ರಿ 9.45ರ ಸುಮಾರಿನಲ್ಲಿ ಮೈಸೂರು ಅರಮನೆಯ ವರಹಾ ಗೇಟ್ ಮುಂಭಾಗದ ರಸ್ತೆಯಲ್ಲಿ ಈತ ರೀಲ್ಸ್ ವಿಡಿಯೋ ಮಾಡುತ್ತಿದ್ದಾಗ ಆ ಸ್ಥಳಕ್ಕೆ ಬಿಳಿ ಬಣ್ಣದ ಸ್ಕಾರ್ಪಿಯೋ ಮತ್ತು ಕೆಂಪು ಬಣ್ಣದ ಸ್ಯಾಂಟ್ರೋ ಕಾರು ಬಂದು ನಿಂತಿದೆ. ಸ್ಕಾರ್ಪಿಯೋದಲ್ಲಿದ್ದವರು ನವೀನ ಮತ್ತು ಪವನ್‌ನನ್ನು ಹಿಡಿಯಲು ಹೋದಾಗ ಅವರಿಬ್ಬರು ತಪ್ಪಿಸಿಕೊಂಡು ಓಡಲು ಯತ್ನಿಸಿದ್ದಾರೆ. ಈ ವೇಳೆ ಸ್ಯಾಂಟ್ರೋ ಕಾರಿನಿಂದ ಇವರಿಬ್ಬರನ್ನು ಗುದ್ದಿದಾಗ ಕೆಳಗೆ ಬಿದ್ದಿದ್ದಾರೆ. ಆ ಸಂದರ್ಭದಲ್ಲಿ ಎರಡೂ ಕಾರುಗಳಲ್ಲಿದ್ದ ಸುಮಾರು 10 ಮಂದಿ ದುಷ್ಕರ್ಮಿಗಳು ಇವರಿಬ್ಬರನ್ನು ಕಾರಿಗೆ ಎತ್ತಿಹಾಕಿಕೊಂಡಿದ್ದಾರೆ. ಆ ಮೇಲೆ ನವೀನ್ ಮತ್ತು ಪವನ್, "ಪರಮಿ ಅಣ್ಣ, ನಾನಲ್ಲ, ನನ್ನನ್ನು ಬಿಟ್ಟುಬಿಡಿ" ಎಂದು ಕೂಗಾಡಿದ್ದಾರೆ. ಇದನ್ನು ಕಂಡ ಅರಮನೆಯ ಗೈಡ್ ಚಂದ್ರು ಎಂಬುವರು ಕೆ.ಆರ್. ಠಾಣೆಗೆ ದೂರು ಸಲ್ಲಿಸಿದ್ದಾರೆ. ಪೊಲೀಸರು ಬೆನ್ನತ್ತಿದ್ದರೂ ಕೂಡ ಅಪಹರಣಕಾರರು ಸಿಗಲಿಲ್ಲ ಎಂದು ಹೇಳಲಾಗಿದೆ.

ಮರುದಿನ ಸಂಜೆ 4.30ರ ವೇಳೆಗೆ ನಂಜನಗೂಡು ತಾಲೂಕು ಗೋಳೂರಿನ ಹುಲ್ಲಹಳ್ಳಿ ನಾಲೆ ಬಳಿ ಪೊದೆಯಲ್ಲಿ ಸ್ಮೈಲ್ ನವೀನ್‌ನ ಶವ ದೊರೆತಿದೆ. ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಅಪರಿಚಿತನ ಹತ್ಯೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದರು. (ಈ ಸಂಬಂಧ ಆಗಸ್ಟ್ 29ರಂದು "ನಂಜನಗೂಡು ಬಳಿ ಅಪರಿಚಿತನ ಹತ್ಯೆ" ಎಂಬ ಶೀರ್ಷಿಕೆಯಡಿ 'ಮೈಸೂರು ಮಿತ್ರ'ನಲ್ಲಿ ವರದಿ ಪ್ರಕಟವಾಗಿತ್ತು) ನವೀನ್‌ನನ್ನು ಕಾರಿನಲ್ಲೇ ಹತ್ಯೆ ಮಾಡಿ, ಪವನ್‌ನನ್ನು ದುಷ್ಕರ್ಮಿಗಳು ಬಿಟ್ಟು ಕಳುಹಿಸಿದ್ದರಿಂದ ಹುಲ್ಲಹಳ್ಳಿ ನಾಲೆ ಬಳಿ ಹತ್ಯೆಯಾಗಿದ್ದವನು ಸ್ಮೈಲ್ ನವೀನ್ ಎಂಬುದು ಪತ್ತೆಯಾಯಿತು.

ನಂಜನಗೂಡು ಉಪವಿಭಾಗದ ಡಿವೈಎಸ್ಪಿ ಗೋವಿಂದರಾಜು ಮಾರ್ಗದರ್ಶನದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಇಂದು 8 ಮಂದಿಯನ್ನು ಬಂಧಿಸಿದ್ದಾರೆ. 3 ವರ್ಷದ ಹಿಂದೆ ನಡೆದಿದ್ದ ರಿಯಲ್ ಎಸ್ಟೇಟ್ ಉದ್ಯಮಿ ವಿನೋದ್ ಹತ್ಯೆಗೆ ಪ್ರತೀಕಾರವಾಗಿ ಸ್ಮೈಲ್ ನವೀನ್‌ನನ್ನು ಹತ್ಯೆ ಮಾಡಲಾಗಿದೆ ಎಂದು ಹೇಳಲಾಗಿದೆ.

ಆಗಸ್ಟ್ 27ರಂದು ಮಧ್ಯರಾತ್ರಿ ಕೆ.ಆರ್ ಠಾಣೆಯಲ್ಲಿ ದಾಖಲಾಗಿದ್ದ ನವೀನ್ ಮತ್ತು ಪವನ್ ಅಪಹರಣ ಪ್ರಕರಣವನ್ನು ದೇವರಾಜ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ನವೀನ್‌ನನ್ನು ಕೆ.ಆರ್.ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರಿನಲ್ಲೇ ಹತ್ಯೆ ಮಾಡಿರುವುದರಿಂದ ಕೊಲೆ ಪ್ರಕರಣವನ್ನು ನಂಜನಗೂಡು ಗ್ರಾಮಾಂತರ ಠಾಣೆಯಿಂದ ಕೆ.ಆರ್.ಠಾಣೆಗೆ ವರ್ಗಾಯಿಸುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಆಹಾರ ನಿಗಮದ ಗೋದಾಮಿಗೆ ಸಚಿವ ಮುನಿಯಪ್ಪ ದಿಢೀರ್ ಭೇಟಿ



ಮೈಸೂರು, ಆ.30(ಸಿಎನ್)–ಮೈಸೂರಿನ ಹೆಬ್ಬಾಳದಲ್ಲಿರುವ ಆಹಾರ ನಿಗಮದ ಗೋದಾಮಿಗೆ ಆಹಾರ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ಅವರು ದಿಢೀರ್ ಭೇಟಿ ನೀಡಿ, ಪಡಿತರ ದಾಸ್ತಾನು ಪರಿಶೀಲನೆ ನಡೆಸಿದರು.

ಪರಿಶೀಲನೆ ವೇಳೆ ಆಹಾರ ಧಾನ್ಯ ಮೂಟೆಗಳನ್ನು ಸರಿಯಾಗಿ ಜೋಡಿಸದೆ ಇರುವುದನ್ನು ಗಮನಿಸಿದ ಅವರು, ತಿನ್ನುವ ಪದಾರ್ಥವನ್ನು ಹೀಗೆ ಬೇಕಾಬಿಟ್ಟಿ, ಎಲ್ಲೆಂದರಲ್ಲಿ ಬಿಸಾಡಬೇಡಿ. ಒಂದು ಕ್ರಮವಾಗಿ ಜೋಡಿಸಿ ಇಡಬೇಕು. ಹುಳು–ಹುಪ್ಪಟೆ ಹೋಗದಂತೆ ಚೀಲದ ಬಾಯನ್ನು ಬಿಗಿಯಾಗಿ ಕಟ್ಟಬೇಕು. ಹರಿದ ಚೀಲಗಳಲ್ಲಿ ಪಡಿತರ ದಾಸ್ತಾನು ಮಾಡಬೇಡಿ. ಕೊಂಡೊಯ್ಯುವಾಗ ಪೋಲಾಗುತ್ತದೆ. ವಿತರಣೆ ಮಾಡುವಾಗ ತೂಕದಲ್ಲಿ ವ್ಯತ್ಯಾಸ ಬರಬಹುದು. ತಿನ್ನಲು ಬಳಸುವ ಪದಾರ್ಥಗಳನ್ನು ಜವಾಬ್ದಾರಿಯಿಂದ ನೋಡಿಕೊಳ್ಳಬೇಕು. ಸರಿಯಾಗಿ ನಿರ್ವಹಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.


ಬಳಿಕ ಅಲ್ಲೇ ಇದ್ದ ಹಮಾಲಿಗರನ್ನು(ಮೂಟೆ ಹೊರುವವರು) ಕರೆದು, ಇಲ್ಲಿ ಎಲ್ಲಾ ರೀತಿಯ ಸೌಕರ್ಯ ಇದೆಯಾ ಎಂದು ಕೇಳಿದಾಗ, 'ಇಲ್ಲ ಸಾರ್ ಇಲ್ಲಿ ಶೌಚಾಲಯ, ಸ್ನಾನಗೃಹ ವ್ಯವಸ್ಥೆ ಇಲ್ಲ'. ದಿನನಿತ್ಯ ನಮಗೆ ತೊಂದರೆಯಾಗುತ್ತಿದೆ. ದಯವಿಟ್ಟು ಸೌಲಭ್ಯ ಕಲ್ಪಿಸಿಕೊಡಿ ಎಂದರು. ಪಕ್ಕದಲ್ಲೇ ಅಧಿಕಾರಿಗಳನ್ನು ಕರೆದ ಸಚಿವರು ಕ್ರಮಕ್ಕೆ ಸೂಚಿಸಿದರು. ಈ ವೇಳೆ ಜಂಟಿ ನಿರ್ದೇಶಕಿ ಕುಮುದಾ ಶರತ್, ಜಿಲ್ಲಾ ವ್ಯವಸ್ಥಾಪಕ ಪ್ರೇಮ್‌ಕುಮಾರ್, ರಮೇಶ್ ಇನ್ನಿತರ ಸಿಬ್ಬಂದಿ ಹಾಜರಿದ್ದರು.



ಬೆಂಗಳೂರಿನ ಶಾಸಕರ ಭವನದಲ್ಲಿ ಬುಧವಾರ ತಮ್ಮ ಕಚೇರಿ ಉದ್ಘಾಟನೆ ಮಾಡಿದ ಶಿಕಾರಿಪುರ ಶಾಸಕ ಬಿ.ವೈ. ವಿಜಯೇಂದ್ರ ಅವರನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹೂಗುಚ್ಛ ನೀಡಿ ಅಭಿನಂದಿಸಿದರು.

ನಟರಾಜ್ ನಿಧನ

ಮೈಸೂರು, ಆ.30–ಮೈಸೂರಿನ ಸಿದ್ಧಾರ್ಥನಗರ ನಿವಾಸಿ ನಟರಾಜ್(78) ಅವರು ಇಂದು ನಿಧನರಾದರು.



ಮೃತರು ಪತ್ನಿ, ಸಾಹುಕಾರ್ ಚೆನ್ನಯ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎನ್.ಮಂಜುನಾಥ್ ಸೇರಿದಂತೆ ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಲಲಿತಾದ್ರಿಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಶಾಸಕ ತನ್ವೀರ್ ಸೇಠ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಸೇರಿದಂತೆ ಅನೇಕ ರಾಜಕೀಯ ಮುಖಂಡರು ಮೃತರ ಅಂತಿಮ ದರ್ಶನ ಪಡೆದರು.

ಮೈಸೂರು ದಂಪತಿಗೆ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಲಾಭಾಂಶದ ಆಸೆ ತೋರಿಸಿ 1.25 ಕೋಟಿ ವಂಚಿಸಿದ ತೆಲಂಗಾಣ ದಂಪತಿ!

ಮೈಸೂರು, ಆ.30–ರಿಯಲ್ ಎಸ್ಟೇಟ್ ವ್ಯವಹಾರ ನಡೆಸಿ ಲಾಭಾಂಶ ನೀಡುವುದಾಗಿ ನಂಬಿಸಿ ಮೈಸೂರಿನ ದಂಪತಿಗೆ ತೆಲಂಗಾಣ ದಂಪತಿ 1.25 ಕೋಟಿ ರೂ. ವಂಚನೆ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ಬೋಗಾದಿ ನಿವಾಸಿಗಳಾದ ಶ್ರೀನಿವಾಸ ಹೊಸಮನೆ (52) ಮತ್ತು ನಾಗರತ್ನ ಹೊಸಮನೆ(44) ದಂಪತಿ ವಂಚನೆಗೊಳಗಾದವರಾಗಿದ್ದು, ತೆಲಂಗಾಣದ ಸಿಕಂದರಾಬಾದ್ ನಿವಾಸಿಗಳಾದ ಸುನಿಲ್ ಘನತೆ (58) ಮತ್ತು ಅವರ ಪತ್ನಿ ಗಂಗಾ ಘನತೆ (50) ಆರೋಪಕ್ಕೆ ಗುರಿಯಾಗಿರುವವರು.

ವಿವರ: ಈ ಹಿಂದೆ ಶ್ರೀನಿವಾಸ ಹೊಸಮನೆಯವರು ಹೈದರಾಬಾದ್‌ನ ಟಿಇಕೆ ಸಿಸ್ಟಂ ಗ್ಲೋಬಲ್ ಸರ್ವಿಸಸ್ ಎಂಬ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾಗ ಇವರಿಗೆ ಸುನಿಲ್ ಘನತೆ ದಂಪತಿ ಪರಿಚಯವಾಗಿದ್ದರು. ಅವರು ಮೈಸೂರಿನ ಇವರ ಮನೆಗೂ ಕೂಡ ಬಂದು–ಹೋಗುತ್ತಿದ್ದರು. ಈ ವೇಳೆ ಹೈದರಾಬಾದ್‌ನಲ್ಲಿ ತಾವು ಸರ್ವಿಸ್ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಾಣ ಮಾಡುತ್ತಿದ್ದು, ಅದರಲ್ಲಿ ನೀವು ಹಣ ತೊಡಗಿಸಿದರೆ ಲಾಭಾಂಶ ನೀಡುವುದಾಗಿ ನಂಬಿಸಿ 2017ರ ಆಗಸ್ಟ್ 9ರಿಂದ 2019ರ ಆಗಸ್ಟ್ 30ರವರೆಗೆ ಶ್ರೀನಿವಾಸ ಹೊಸಮನೆ ದಂಪತಿಯಿಂದ 1.25 ಕೋಟಿ ರೂ. ಪಡೆದು ವಂಚಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.

ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮಂಡ್ಯ ರಮೇಶ್ ಸ್ವಚ್ಛತಾ ಅಭಿಯಾನದ ರಾಯಭಾರಿ

ಮೈಸೂರು, ಆ.30(ಎಸ್‌ಪಿಎನ್)–ನೂತನ ಸ್ವಚ್ಛತಾ ಅಭಿಯಾನದ ರಾಯಭಾರಿಯಾಗಿ ನೇಮಕವಾಗಿರುವ ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಅವರನ್ನು ಮೈಸೂರು ನಗರಪಾಲಿಕೆ ಮೇಯರ್ ಮೈಸೂರು ಪೇಟ ತೊಡಿಸಿ ಮಂಗಳವಾರ ಅಭಿನಂದಿಸಿದ್ದಾರೆ.



ಕೇಂದ್ರ ಸರ್ಕಾರವು ಸ್ವಚ್ಛ ಭಾರತ್ ಮಿಷನ್ ಅನುಷ್ಠಾನಕ್ಕೆ ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಅವರನ್ನು ಮೈಸೂರು ಸ್ವಚ್ಛತಾ ಅಭಿಯಾನದ ರಾಯಭಾರಿಯನ್ನಾಗಿ ನೇಮಿಸಿರುವ ಹಿನ್ನೆಲೆಯಲ್ಲಿ ಮೇಯರ್ ಶಿವಕುಮಾರ್ ಪಾಲಿಕೆ ವತಿಯಿಂದ ಮೈಸೂರು ಪೇಟ ತೊಡಿಸಿ ಅಭಿನಂದಿಸಲಾಯಿತು. ಮಂಡ್ಯ ರಮೇಶ್ ಅವರನ್ನು ಮೈಸೂರು ನಗರದ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಸ್ವಚ್ಛ ಭಾರತ ಅಭಿಯಾನಕ್ಕಾಗಿ ರಾಯಭಾರಿಯಾಗಿ ನೇಮಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.8.2023 ಗುರುವಾರ, ಮಳೆ ನಕ್ಷತ್ರ: ಪುಬ್ಬ 31.08.2023 ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಶ್ರೀ ಗಾಯತ್ರಿದೇವಿ ಅಮ್ಮನವರ ದೇವಸ್ಥಾನ:** ಕಳಶ ಸ್ಥಾಪನೆ ಮತ್ತು ಗಾಯತ್ರಿದೇವಿ ಅಮ್ಮನವರ ಹೋಮ, ಶ್ರೀ ಗಾಯಿತ್ರಿ ಪ್ರತಿಪತ್ ಪ್ರಯುಕ್ತ ಬೆಳಗ್ಗೆ 7.30ಕ್ಕೆ ಮಹಾಗಣಪತಿ ಹೋಮ, ನವಗ್ರಹ ಹೋಮ, ಪರಿವಾರ ದೇವತಾ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮ. 1ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ಅರಮನೆ ಕೋಟೆ ಆವರಣ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಡಿ.ಬನುಮಯ್ಯ ರಸ್ತೆ, ಕೆಆರ್ ಮೊಹಲ್ಲಾ, ಬೆಳಗ್ಗೆ

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಪ್ರಥಮ ವರ್ಷದ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ, ಉದ್ಘಾಟನೆ: ಕರ್ನಾಟಕ ಸರ್ಕಾರದ ನಿವೃತ್ತ ಪ್ರಧಾನ ಕಾರ್ಯದರ್ಶಿ ಎಂ.ಕೆ.ಶಂಕರಲಿಂಗೇಗೌಡ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಕಾಲೇಜು ಅಧ್ಯಕ್ಷ ಟಿ.ನಾಗರಾಜು, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಜಾಗೃತಿ ಅಕಾಡೆಮಿ ಟ್ರಸ್ಟ್ :** ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸ್ ಅವರ 108ನೇ ಹುಟ್ಟುಹಬ್ಬದ ಅಂಗವಾಗಿ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮಾಜಿ ಗೃಹ ಸಚಿವ ಪಿ.ಜಿ.ಆರ್.ಸಿಂಧ್ಯಾ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅರಗು ಮತ್ತು ಬಣ್ಣದ ಕಾರ್ಖಾನೆ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಮೈಸೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್.ಸತೀಶ್, ಅಧ್ಯಕ್ಷತೆ : ಶಾಸಕ ಅನಿಲ್ ಚಿಕ್ಕಮಾದು, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಜೆಎಸ್‌ಎಸ್ ವೃದ್ಧಾಶ್ರಮ, ಮೈಸೂರು, ಜೆಎಸ್‌ಎಸ್ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ :** ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 108ನೇ ಜಯಂತಿ ಮಹೋತ್ಸವ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಸಾಮಾನ್ಯ ಅಭಿವೃದ್ಧಿ ವಿಭಾಗದ ನಿರ್ದೇಶಕ ಕೆ.ಎಲ್. ರೇವಣ್ಣಸ್ವಾಮಿ, ಅಧ್ಯಕ್ಷತೆ: ಜೆಎಸ್‌ಎಸ್ ವೃದ್ಧಾಶ್ರಮದ ಡಾ. ಓಂ ಪ್ರಕಾಶ್, ಮುಖ್ಯ ಅತಿಥಿಗಳು : ಮಾರ್‌ಲ್ಯಾಬ್ಸ್ ಮುಖ್ಯಸ್ಥ ಕೆ.ಸಿ. ಚನ್ನಕೇಶವ, ಸ್ಥಳ: ಜೆಎಸ್‌ಎಸ್ ವೃದ್ಧಾಶ್ರಮ ಆವರಣ, ಅರವಿಂದನಗರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್‌ಎಸ್ ಪ್ರಥಮ ದರ್ಜೆ ಕಾಲೇಜು:** ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮೈಸೂರು ವಿವಿ ಅಂತರರಾಷ್ಟ್ರೀಯ ಕೇಂದ್ರದ ನಿರ್ದೇಶಕ ಜನಾರ್ಧನ್, ಗೌರವ ಅತಿಥಿಗಳು: ವರ್ಲ್ಡ್ ವೈಡ್ ಟೆಕ್ನಾಲಜಿ ಮಾನವ ಸಂಪನ್ಮೂಲ ವ್ಯವಸ್ಥಾಪಕಿ ಡಾ.ಸವಿತಾಗೌಡ, ಅಧ್ಯಕ್ಷತೆ: ಜೆಎಸ್‌ಎಸ್‌ಎಸ್ ಕಾರ್ಯದರ್ಶಿ ವನಜಾ ಬಿ.ಪಂಡಿತ್, ಉಪಸ್ಥಿತರು: ಆಡಳಿತಾಧಿಕಾರಿ ಅನುಪಮಾ ಬಿ.ಪಂಡಿತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರ್.ಕೆ.ಭರತ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ:** ಪುಸ್ತಕ ಬಿಡುಗಡೆ ಹಾಗೂ ಪ್ರೊ.ಡಿ.ವಿ.ಗೋಪಾಲಪ್ಪ ಅವರಿಗೆ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರ ಪ್ರಸಾದ್, ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಂಜಪ್ಪ ಡಿ.ಹೊಸಮನೆ, ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್, ಅಧ್ಯಕ್ಷತೆ: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಮಹೇಶ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಧಮ್ಮದೀಪ ಪ್ರತಿಷ್ಠಾನ ಚಾರಿಟೆಬಲ್ ಟ್ರಸ್ಟ್ :** ಬುದ್ಧ ಬೆಳದಿಂಗಳು 8ನೇ ವಾರ್ಷಿಕೋತ್ಸವ ಹಾಗೂ ಧ್ಯಾನ ಗಾಯನ ವಿಚಾರ ಕಾರ್ಯಕ್ರಮ, ಸಾನ್ನಿಧ್ಯ : ಚೇತವನ ಬುದ್ಧವಿಹಾರದ ಮನೋರಕ್ಕಿತ ಭಂತೇಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಬುದ್ಧ ಮೂರ್ತಿಗೆ ಪುಷ್ಪಾರ್ಚನೆ: ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಬೌದ್ಧ ತತ್ತ್ವಗಳ ಅನುಸರಣೆಯ ಅಗತ್ಯತೆ ಕುರಿತು ಚಿಂತಕ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರಿಂದ ಉಪನ್ಯಾಸ, ಮುಖ್ಯ ಅತಿಥಿಗಳು: ಶಾಸಕ ಕೆ. ಹರೀಶ್‌ಗೌಡ, ಮಾಜಿ ಸಚಿವ ಎನ್. ಮಹೇಶ್, ಸ್ಥಳ: ಗೌತಮಬುದ್ಧ ಉದ್ಯಾನವನ, ಮಾನಸಗಂಗೋತ್ರಿ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್:** ವಿದ್ವಾನ್ ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್‌ಕುಮಾರ್–ಪಿಟೀಲು, ವಿದ್ವಾನ್ ಕಾಂಚನ ಈಶ್ವರಭಟ್–ಮೃದಂಗ, ವಿದ್ವಾನ್ ಮಂಜುನಾಥ್–ಘಟಂ, ಸ್ಥಳ: ಮೈಸೂರು ಕೆ.ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ

■ **ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳವರ ಮಠ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10ಕ್ಕೆ ಶ್ರೀ ರಾಘವೇಂದ್ರ ರತ್ನಾಕರ್ ಮತ್ತು ತಂಡದವರಿಂದ ದೇವರನಾಮಗಳು, ಸಂಜೆ 6ಕ್ಕೆ ಕು. ಧನ್ಯ ಅವರಿಂದ ದಾಸವಾಣಿ, ಸಂಜೆ 8ಕ್ಕೆ ಕು. ಯೋಗಶ್ರೀ ಅವರಿಂದ ದಾಸವೈಭವ, ಸ್ಥಳ: ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಾರಾಯಣಶಾಸ್ತ್ರಿ ರಸ್ತೆ

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾ ವಿದ್ಯಾಪೀಠ, ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ವಾಚನ–ಕಾರ್ಯಪಾಲಕ ಅಭಿಯಂತರಾದ ವಿದ್ವಾನ್ ಕೃರಾಮಚಂದ್ರ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ ಸಾಮೂಹಿಕ ಪ್ರಾರ್ಥನೆ: ಸಂಜೆ 6 ಗಂಟೆಗೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ (ಶ್ರೀ ರಾಘವೇಂದ್ರಸ್ವಾಮಿ ಮಠ) :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7 ರಿಂದ ಮಹಾ ಪಂಚಾಮೃತ ಅಭಿಷೇಕ, ಬೆಳಗ್ಗೆ 8ರಿಂದ ಕನಕಾಭಿಷೇಕ, ಸರ್ವಸೇವೆ, ಮ. 12ಕ್ಕೆ ಮಹಾಮಂಗಳಾರತಿ, ಮ. 12.30 ರಿಂದ ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 6.30 ರಿಂದ ವಿದ್ವಾನ್ ಹೆಮ್ಮಿಗೆ ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ–ವಯೋಲಿನ್, ವಿದ್ವಾನ್ ನರೇಂದ್ರ–ಮೃದಂಗ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ, ಸೋಮನಾಥಪುರ :** ಶ್ರೀ ಗುರುರಾಘವೇಂದ್ರ ಸ್ವಾಮಿಗಳವರ 352ನೇ ಆರಾಧನಾ ಮಹೋತ್ಸವ, ಬೆಳಗ್ಗೆ 6ಕ್ಕೆ ಸುಪ್ರಭಾತ, ಬೆ. 8 ರಿಂದ ರಾಘವೇಂದ್ರ ಅಷ್ಟಾಕ್ಷರ ಜಪ, ಬೆಳಗ್ಗೆ 9 ರಿಂದ ಹೋಮ, ಬೆ. 11 ರಿಂದ ಅಷ್ಟೋತ್ತರ ಸೇವೆ, ಬೆ. 11.30 ರಿಂದ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಸಂಜೆ 6 ರಿಂದ ಉಪನ್ಯಾಸ ಮತ್ತು ಸಂಗೀತ ಸೇವೆ, ರಾ. 9.30 ರಿಂದ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ತೊಟ್ಟಿಲು ಸೇವೆ, ಬೆಳಗ್ಗೆ 8 ರಿಂದ ಸೋಮನಾಥನಗರದ ಶ್ರೀ ಸೋಮನಾಥೇಶ್ವರ ದೇವಸ್ಥಾನದಿಂದ ವಾಹನೋತ್ಸವ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಸೋಮನಾಥನಗರ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ –258, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ಸ್ಫೂರ್ತಿ ರಾವ್ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಕೆ.ವಿ. ಪ್ರಸಾದ್ –ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ತನುಮನ ಸಂಸ್ಥೆ, ಮೈಸೂರು:** ಜಗ ನಡೆಯಲಿ ಬುದ್ಧನಕಡೆ ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು: ಚಂದ್ರಕಲಾ, ತಿಮ್ಮಯ್ಯ, ದೇವದತ್ತ, ತ್ಯಾಗರಾಜು, ವಿದುಷಿ ಮಹೇಶ್ವರಿ, ಹುಯಿಲಾಳು ರಾಮಸ್ವಾಮಿ, ರವೀಂದ್ರಮೂರ್ತಿ, ಮರಿದೇವಯ್ಯ, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಅಶೋಕ ವೃತ್ತ, ಸಂಜೆ 6ಕ್ಕೆ.

ಗೃಹಲಕ್ಷ್ಮಿ ಉದ್ಘಾಟನಾ ಸಮಾರಂಭದ ವಿಶೇಷತೆಗಳು

● ಹೈಟೆಕ್ ವ್ಯವಸ್ಥೆ, ಅಚ್ಚುಕಟ್ಟಾಗಿ ನಡೆದ ಸಮಾರಂಭ ● ಸಾಧು ಕೋಕಿಲ ಹಾಸ್ಯ ಹೊನಲು ● ಮೊಬೈಲ್ ಸಂಪರ್ಕವಿಲ್ಲದೆ ಜನರ ಚಡಪಡಿಕೆ ● 'ಗೃಹಲಕ್ಷ್ಮಿ' ಹೆಬ್ಬಾಳ್ಕರ್ ಬಾಯಲ್ಲಿ 'ಗ್ರಹಲಕ್ಷ್ಮಿ'



ಮೈಸೂರು,ಆ.30(ಜಿಎಲ್‌ಯು)–ವೇದಿಕೆ, ಪೆಂಡಾಲ್ ಎಲ್ಲವೂ ಹೈಟೆಕ್. ಅಚ್ಚುಕಟ್ಟಾಗಿ ನಡೆದ ಸಮಾರಂಭ. ರಾಜಕಾರಣಿಗಳ ಭಾಷಣ ಕೇಳಿ ಬೋರ್ ಆಗಿದ್ದವರಿಗೆ ಸಾಧು ಕೋಕಿಲಾ ಹಾಸ್ಯ ಲಹರಿ. ಸಮಾರಂಭ ತಡವಾಗಿ ಆರಂಭವಾದರೂ ನಿಗದಿತ ವೇಳೆಗೂ ಮೊದಲೇ ಮುಕ್ತಾಯ. ಹೆಜ್ಜೆ ಹೆಜ್ಜೆಗೂ ಸಿಸಿಟಿವಿ ಕಣ್ಗಾವಲು. ಮೊಬೈಲ್ ಜಾಮರ್‌ನಿಂದ ಚಡಪಡಿಸಿದ ಜನರು. 'ಗೃಹಲಕ್ಷ್ಮಿ' ಬದಲು 'ಗ್ರಹಲಕ್ಷ್ಮಿ' ಎಂದು ಹೇಳಿ ನೆರೆದವರನ್ನು ಕಕ್ಕಾಬಿಕ್ಕಿಗೊಳಿಸಿದ ಹೆಬ್ಬಾಳ್ಕರ್.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿದ ಸಮಾರಂಭದಲ್ಲಿ ಕಂಡು ಬಂದ, ಕೇಳಿಬಂದ ವಿಶೇಷತೆಗಳು!

ವೇದಿಕೆ ಸೇರಿದಂತೆ ಇಡೀ ಮೈದಾನದಲ್ಲಿ ವಾಟರ್ ಪ್ರೂಫ್ ಜರ್ಮನ್ ಪೆಂಡಾಲ್ ಹಾಕಲಾಗಿತ್ತು. ಪೆಂಡಾಲ್ ಮಧ್ಯೆ ಮಧ್ಯೆ ಬಾರೀ ಗಾತ್ರದ ಫ್ಯಾನ್‌ಗಳನ್ನು ಅಳವಡಿಸಿದ್ದರಿಂದ ಬಿಸಿಲಿನ ತಾಪವಿದ್ದರೂ ಜನರಿಗೆ ಒಳಗೆ ಸ್ವಲ್ಪವೂ ತಾಪದ ಅನುಭವವಾಗಲಿಲ್ಲ. ಹೈಡ್ರಾಲಿಕ್ ಪಂಪ್ ಮೂಲಕ ಗೃಹಲಕ್ಷ್ಮಿ ಕಾರ್ಡ್ ಅನಾವರಣ, ಇ–ಗವರ್ನೆನ್ಸ್ ಮೂಲಕ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ಸೇರಿದಂತೆ ಎಲ್ಲವೂ ಹೈಟೆಕ್ ಆಗಿತ್ತು.

ವೇದಿಕೆ ಉದ್ದಗಲಕ್ಕೂ 48 ಅಡಿಯ ಡಿಜಿಟಲ್ ಸ್ಕ್ರೀನ್ ಅಳವಡಿಲಾಗಿತ್ತು. ಕರ್ನಾಟಕದ ಇತರೆಡೆ ನಡೆಯುತ್ತಿದ್ದ ಗೃಹಲಕ್ಷ್ಮಿ ಯೋಜನೆಯ ಕಾರ್ಯಕ್ರಮಗಳ ನೇರ ಪ್ರಸಾರ ಆ ಸ್ಕ್ರೀನ್‌ನಲ್ಲಿ ಒಂದಾದ ಮೇಲೆ ಒಂದರಂತೆ ಬಿತ್ತರಗೊಳ್ಳುತ್ತಿತ್ತು. ಜೊತೆಗೆ ಪೆಂಡಾಲ್ ಅಕ್ಕ–ಪಕ್ಕದಲ್ಲಿ ದೊಡ್ಡದಾದ ಡಿಜಿಟಲ್ ಸ್ಕ್ರೀನ್‌ಗಳನ್ನು ಅಳವಡಿಸಿ ಕಾರ್ಯಕ್ರಮದ ನೇರ ಪ್ರಸಾರ ಪ್ರದರ್ಶನ ಮಾಡಲಾಗುತ್ತಿತ್ತು. ಒಟ್ಟಾರೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಯಾವುದೇ ಲೋಪವಿಲ್ಲದೆ ಸಮಾರಂಭವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು. ಇನ್ನು ವೇದಿಕೆ ಮುಂಭಾಗ ವಿವಿಧ ಹೂವುಗಳಿಂದ ವರ್ಣರಂಜಿತವಾಗಿ ಅಲಂಕರಿಸಲಾಗಿತ್ತು.

ಸರ್ಕಾರದ ನೂರು ದಿನದ ಸಾಧನೆಯ ವಿವರದ 'ಕ್ಯೂಆರ್' ಕೋಡ್ ಇರುವ ಡಿಜಿಟಲ್ ಕಾರ್ಡ್‌ಗಳನ್ನು ಈ ವೇಳೆ ಮಹಿಳೆಯರಿಗೆ ವಿತರಿಸಲಾಯಿತು.

ಕಾರ್ಯಕ್ರಮ ಆರಂಭವಾಗುವ ಮುನ್ನ ಶಾಸಕರು ಒಬ್ಬರಾದ ಮೇಲೆ ಒಬ್ಬರಂತೆ ಭಾಷಣ ಮಾಡುತ್ತಿದ್ದರು. ರಾಜಕಾರಣಿಗಳ ಭಾಷಣ ಕೇಳಿ ಮಹಿಳೆಯರಿಗೆ ಬೇಜಾರಾಗಿತ್ತು. ಈ ವೇಳೆ ಖ್ಯಾತ ಚಲನಚಿತ್ರ ಹಾಸ್ಯ ನಟ ಸಾಧು ಕೋಕಿಲ ಹಾಸ್ಯದ ಹೊನಲು ಹರಿಸಿದರು. ಜೊತೆಗೆ ಕೆಲವು ಹಾಡುಗಳನ್ನು ಹಾಡಿ ರಂಜಿಸಿದರು.

ಸಮಾರಂಭ ಎರಡು ಗಂಟೆ ತಡವಾಗಿ ಆರಂಭವಾಯಿತು. ಆದರೆ ನಿಗದಿತ ಸಮಯಕ್ಕೂ ಮೊದಲೆ ಅರ್ಧ ಗಂಟೆ ಮುಂಚಿತವಾಗಿ ಸಮಾರಂಭ ಮುಕ್ತಾಯಗೊಂಡಿತು. ರಾಹುಲ್ ಗಾಂಧಿ ಬೇಗ ಹೋಗಬೇಕಿದ್ದರಿಂದ ಹೆಚ್ಚು ಮಾತನಾಡದಂತೆ ಸೂಚನೆ ನೀಡಲಾಗಿತ್ತು. 11 ಗಂಟೆಗೆ ಆರಂಭವಾಗಬೇಕಿದ್ದ ಸಮಾರಂಭ 1 ಗಂಟೆಗೆ ಆರಂಭವಾಯಿತು. ನಿಗದಿಯಂತೆ 3.15 ಗಂಟೆಗೆ ಮುಗಿಯಬೇಕಿತ್ತಾದರೂ 2.45 ಗಂಟೆಗೆ ಮುಕ್ತಾಯಗೊಂಡಿತು. ಸಮಾರಂಭ ನಡೆಯುವ ಬಹಳಷ್ಟು ಕಡೆಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಜೊತೆಗೆ 10 ಗಂಟೆಯಿಂದಲೇ ಸಮಾರಂಭ ಮುಗಿಯುವ ತನಕ ಮೊಬೈಲ್ ಜಾಮರ್ ಹಾಕಲಾಗಿತ್ತು. ಇದರಿಂದ ಫೋನ್ ಹಾಗೂ ಇಂಟರ್‌ನೆಟ್ ಸಂಪರ್ಕವಿಲ್ಲದೆ ಯಾರಿಗೂ ಮೊಬೈಲ್ ಫೋನ್ ಬಳಸಲು ಸಾಧ್ಯವಾಗಲಿಲ್ಲ. ಒಂದು ನಿಮಿಷವೂ ಮೊಬೈಲ್ ನೋಡದೆ ಇದ್ದವರು ಚಡಪಡಿಸುತ್ತಿದ್ದರು. ಮೊಬೈಲ್ ಜಾಮರ್ ಪ್ರಭಾವ ಎಷ್ಟಿತ್ತೆಂದರೆ ರಾಮಸ್ವಾಮಿ ಸರ್ಕಲ್ ತನಕ ಫೋನ್ ಸಂಪರ್ಕ ಸಿಗುತ್ತಿರಲಿಲ್ಲ. ಸಮಾರಂಭದಲ್ಲಿ ಸ್ವಾಗತ ಭಾಷಣದ ವೇಳೆ ಲಕ್ಷ್ಮಿ ಹೆಬ್ಬಾಳ್ಕರ್, ಗೃಹಲಕ್ಷ್ಮಿ ಎನ್ನುವ ಬದಲು ಗ್ರಹಲಕ್ಷ್ಮಿ ಎಂದು ಹೇಳಿ ನೆರೆದವರು ಕಕ್ಕಾಬಿಕ್ಕಿಯಾಗುವಂತೆ ಮಾಡಿದರು. ಪದೇ ಪದೆ ಅದನ್ನೇ ಉಚ್ಚಾರ ಮಾಡಿದರೂ ನಂತರ ಯಾರೂ ಕೂಡ ತಪ್ಪು ತಿಳಿಸುವ ಗೋಜಿಗೆ ಹೋಗಲಿಲ್ಲ.

ಸಾಮಾನ್ಯವಾಗಿ ಶಾಸಕರು, ಸಚಿವರ ಸಮಾರಂಭ ರಾಜಕೀಯಕ್ಕೆ ಮೀಸಲಾಗಿರುತ್ತದೆ. ಆದರೆ ಇದು ಸರ್ಕಾರದ ಕಾರ್ಯಕ್ರಮವಾದ ಕಾರಣ ರಾಜಕಾರಣಿಗಳ ಸಂಖ್ಯೆಯಷ್ಟೇ ಅಧಿಕಾರಿಗಳು ವೇದಿಕೆಯಲ್ಲಿದ್ದರು. ಇಂದಿನ ಸಮಾರಂಭದಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನ ಯಾವುದೇ ಶಾಸಕರು ಭಾಗಿಯಾಗಿರಲಿಲ್ಲ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಂಕಿ–ಅಂಶಗಳ ಸಹಿತ ಕೇಂದ್ರದ ಬಿಜೆಪಿ ಸರ್ಕಾರದ ಲೋಪಗಳನ್ನು ಎಳೆ–ಎಳೆಯಾಗಿ ಬಿಡಿಸಿ ಹೇಳುತ್ತಿದ್ದರು. ಆದರೆ ಈ ವೇಳೆ ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ, ವೇಣು ಗೋಪಾಲ್ ಗಹನ ಚರ್ಚೆಯಲ್ಲಿ ತೊಡಗಿದ್ದರು. ರಾಹುಲ್ ಗಾಂಧಿ ಸೇರಿದಂತೆ ವೇದಿಕೆಯಲ್ಲಿದ್ದ ಗಣ್ಯರಿಗೆ ಮೈಸೂರು ಜರಿಪೇಟ ಹಾಕಿ ಸನ್ಮಾನಿಸಲಾಗುತ್ತಿತ್ತು ಆದರೆ ಮೈಸೂರು ಪೇಟ ಹಾಕಲು ಹೋದಾಗ ರಾಜ್ಯದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ನಿರಾಕರಿಸಿದರು. ತರುವಾಯ ನೆನಪಿನ ಕಾಣಿಕೆ ನೀಡಲಾಯಿತು. ಮೈಸೂರು ಪೇಟ ಧರಿಸಲು ಮಲ್ಲಿ ಕಾರ್ಜುನ ಖರ್ಗೆ ಕೂಡ ನಿರಾಕರಿಸಿದರು.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರವರ ಎರಡನೇ ನ್ಯಾಯಾಲಯ (ಹಿರಿಯ ಶ್ರೇಣಿ), ಮತ್ತು ಸಿ.ಜೆ.ಎಂ., ಮೈಸೂರು.

ಮಿಸ್ ಪೆಟಿಷನ್ ಸಂಖ್ಯೆ 26/2023

ಅರ್ಜಿದಾರರು: ಶ್ರೀ ಎಸ್. ಶ್ರೀಕಾಂತ್ ಗುಪ್ತ ಬಿನ್ ಬಿ.ವಿ. ಶ್ರೀನಿವಾಸ್ ಗುಪ್ತ, 48 ವರ್ಷ, #259, 6ನೇ ಕ್ರಾಸ್, ಮಾನಸರ ರಸ್ತೆ, ಇಂದಿರಾ ನಗರ ಮೈಸೂರು–570010, ಮೊಬೈಲ್ ನಂ. 9844109376. **ವಿರುದ್ಧ**

ಎದುರುದಾರರು: ಶ್ರೀ ಸೈಯದ್ ನಿಜಾಮ್ ಆಲಿ ಬಿನ್ ಲೇಟ್ ತಹರ್ ಆಲಿ , ಮ್ಯಾನೇಜಿಂಗ್ ಡೈರೆಕ್ಟರ್ ಆಫ್ ಮೈಸೂರು ಹೋಂ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮನೆ ನಂ. 545, 2ನೇ ಸ್ಟೇಜ್, ರಾಜೀವ್ ನಗರ, ಮೈಸೂರು–570019

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣದ ಅರ್ಜಿದಾರರು ಎದುರುದಾರರ ವಿರುದ್ಧ ಮಾನ್ಯ ಘನ ನ್ಯಾಯಾಲಯದಲ್ಲಿ ಮೇಲ್ಕಂಡ ಮಿಸ್ ಪೆಟಿಷನ್ ನಂ. 26/2023 ದಾಖಲು ಮಾಡಿ ಅದರಿಂದ ಅಸಲು ದಾವೆ ನಂ. 159/2012ರ ಆದೇಶವನ್ನು ಪಕ್ಕಕ್ಕೆ (ಸೆಟ್ ಅಸೈಡ್) ಇರಿಸಲು ಎದುರುದಾರರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ನ್ಯಾಯಾಲಯದಲ್ಲಿ ಸದರಿ ಪ್ರಕರಣವು ದಿನಾಂಕ 04/10/2023 ರಂದು ಬೆಳಗ್ಗೆ 11.00 ಗಂಟೆಗೆ ಇದ್ದು, ಅಂದು ನೀವಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ನಿಮ್ಮನ್ನು ಏಕಪಕ್ಷೀಯ ಎಂದು ಪರಿಗಣಿಸಿ ನ್ಯಾಯಾಲಯವು ಪ್ರಕರಣವನ್ನು ತೀರ್ಮಾನಿಸಲಾಗುತ್ತದೆ ಎಂದು ತಿಳಿಯತಕ್ಕದ್ದು.

ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ 21/08/2023 ರಂದು ಸಹಿ ಮತ್ತು ಮೊಹರಿನೊಡನೆ ಕೊಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/– ಶಿರಸ್ತೇದಾರರು, ಮಾನ್ಯ ಪ್ರಧಾನ 2ನೇ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಮತ್ತು ಸಿ.ಜೆ.ಎಂ., ಮೈಸೂರು

ಅರ್ಜಿದಾರರ ಪರ ವಕೀಲರು,
ಸಹಿ/– ಎ.ವಿನೇಶ್ , ಎಂ.ಕಾಂ, ಎಲ್‌ಎಲ್‌ಎಮ್
No.291, 5 th main Gokulam V V mohalla, mysore -570 002
Email-vinesh1967@gmail.com I 9342184760

ಸ್ಥಳ: ಮೈಸೂರು
ದಿನಾಂಕ: 19.08.2023

ಕರ್ನಾಟಕ ಗೃಹ ಮಂಡಳಿ

Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 12.09.2023 ಸಂಜೆ 4.00 ಗಂಟೆವರೆಗೆ.

ಕ್ರ ಸಂ	ಕಾಮಗಾರಿಯ ಹೆಸರು
1.	ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸೂರ್ಯನಗರ 2ನೇ ಹಂತದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಗಳ 2023–24 ನೇ ಸಾಲಿನ ವಾರ್ಷಿಕ ನಿರ್ವಹಣೆ ಕಾಮಗಾರಿ. **Tender Reference No: KHB/2023-24/OW/work_indent 25 & IFT No.24/2023-24, Date: 28.08.2023, ಟೆಂಡರ್‌ಗಿಟ್ಟ ಮೊತ್ತ ರೂ.1,34,20,479/-.**
2.	ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಕೆಂಚಲಗೂಡಿನಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಗಳ 2023–24ನೇ ಸಾಲಿನ ವಾರ್ಷಿಕ ನಿರ್ವಹಣೆ ಕಾಮಗಾರಿ. **Tender Reference No: KHB/2023-24/OW/work_indent 27 & IFT No.25/2023-24, Date: 28.08.2023, ಟೆಂಡರ್‌ಗಿಟ್ಟ ಮೊತ್ತ ರೂ.11,27,358/-.**

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/R01104/AAPL/2022-23

(ಕರ್ನಾಟಕ ಸರ್ಕಾರ)

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:01/2023–24
ದಿನಾಂಕ:29.08.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಬೇಲೂರು, ಉಪ ವಿಭಾಗ ವ್ಯಾಪ್ತಿಯ 2021–22ನೇ ಸಾಲಿನ 2515–00–001–0–04 ಯೋಜನೆ, 2022–23ನೇ ಸಾಲಿನ ಧಾರ್ಮಿಕ ದತ್ತಿ ಇಲಾಖೆ ಸಾಮಾನ್ಯ ಯೋಜನೆಯಡಿಯ ಲೆಕ್ಕ ಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ kw-1, kw-2 ರ ರೀತ್ಯಾ ಅಂತರ್ಜಾಲದಲ್ಲಿ ದಿ: 29.08.2023 ರಿಂದ ದಿ:07.09.2023ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 07.09.2023 ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:07.09.2023 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:11.09.2023 ರಂದು ಸಂಜೆ 4.00 ಗಂಟೆಯ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್, ಪ.ರಾಜ್.ಇಂ.ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/241/ಕೆಎಸ್‌ಎಂಸಿಎ/245/2023–24

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–3/ 810 /2023–24 ದಿನಾಂಕ: 29.08.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 5.30 ಗಂಟೆ ನಂತರ	ಸಂಜೆ 5.30 ಗಂಟೆ ಒಳಗೆ	ಸಂಜೆ 5.45 ಗಂಟೆ ನಂತರ
ಕ್ರ ಸಂ	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1 & Kw-2	40 ಸಂಖ್ಯೆ	620.71	31.08.2023	14.09.2023	15.09.2023
2	Service Tender	8 ಸಂಖ್ಯೆ	128.56	31.08.2023	14.09.2023	15.09.2023
3	Expression Of Interest	1 ಸಂಖ್ಯೆ		31.08.2023	14.09.2023	15.09.2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸ&ಒಚ (ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಐದನೇ ಪುಟದಿಂದ

ಮೊಬೈಲ್‌ಗೆ ರವಾನೆಯಾಯ್ತು ಸಂದೇಶ

ನಿಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಧನ್ಯವಾದಗಳು ನಿಮ್ಮ ಕರ್ನಾಟಕ ಸರ್ಕಾರ" ಎಂಬ ಸಂದೇಶ ಮೊಬೈಲ್ ಫೋನ್‌ಗಳಿಗೆ ರವಾನೆಯಾಯಿತು. ಇದನ್ನು ನೋಡಿದ ಮಹಿಳೆಯರು ಸಂತಸ ವ್ಯಕ್ತಪಡಿಸಿದರು. ತಾವು ಕುತೂಹಲದಿಂದ ಕಾಯುತ್ತಿದ್ದ ಕ್ಷಣ ಸಾಕಾರಗೊಂಡಿರುವುದಕ್ಕೆ ನಾರಿಯರು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ ರಾಹುಲ್ ಗಾಂಧಿ ಅವರು ಹೈಡ್ರಾಲಿಕ್ ಪಂಪ್‌ನ ಬಟನ್ ಒತ್ತುವುದರ ಮೂಲಕ ಗೃಹಲಕ್ಷ್ಮಿ ಯೋಜನೆಯ ಕಾರ್ಡ್ ಅನ್ನು ಲೋಕಾರ್ಪಣೆಗೊಳಿಸಿದರು. ಜೊತೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ನೂರು ದಿನ ಪೂರೈಸಿರುವ ಹಿನ್ನೆಲೆ ಸಾಧನೆಯ ಕೈಪಿಡಿಯನ್ನು ರಾಹುಲ್ ಗಾಂಧಿ ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ಮಲ್ಲಿಕಾರ್ಜುನ ಖರ್ಗೆ ಸಲಹೆ

ದಿವಾಳಿ ಮಾಡಿದೆ ಎಂದು ಟೀಕಿಸುತ್ತಾರೆ. ಇಂದು ಕರ್ನಾಟಕದಲ್ಲಿ ನೀಡುತ್ತಿರುವ ಅಭಿವೃದ್ಧಿ ಯೋಜನೆಗಳನ್ನು ನೋಡಿ ತಿಳಿದುಕೊಳ್ಳಲಿ ಎಂದು ಅವರು ನುಡಿದರು.

ಕೇವಲ 100 ದಿನಗಳಲ್ಲಿ 5 ಗ್ಯಾರಂಟಿಗಳ ಪೈಕಿ ನಾಲ್ಕು ಯೋಜನೆಗಳನ್ನು ಅನುಷ್ಠಾನ ಮಾಡಿ, ಈ ಬಗೆಯಲ್ಲೂ ಪ್ರಗತಿ ಸಾಧಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಇಂದಿನ ಕಾರ್ಯಕ್ರಮವನ್ನು ಟಿವಿಗಳಲ್ಲಿ ನೋಡಿದರೆ ಅಥವಾ ಇಂಟೆಲಿಜೆನ್ಸ್ ವಿಂಗ್‌ನಿಂದ ಮಾಹಿತಿ ತರಿಸಿಕೊಂಡರೆ ನರೇಂದ್ರ ಮೋದಿ ಹಾಗೂ ಅಮಿತ್ ಶಾಗೆ ನಮ್ಮ ಸರ್ಕಾರ ಏನು ಮಾಡುತ್ತಿದೆ ಎಂಬುದು ತಿಳಿಯುತ್ತದೆ ಎಂದು ಖರ್ಗೆ ಅವರು ನುಡಿದರು.

53 ವರ್ಷಗಳಲ್ಲಿ ನಾವು ಮಾಡಿದ ಅಭಿವೃದ್ಧಿ ಯೋಜನೆಗಳಿಗೆ ಸುಣ್ಣ–ಬಣ್ಣ ಬಳಿದು ಬಿಜೆಪಿಯವರು ನಾವೇ ಮಾಡಿದ್ದೇವೆಂದು ಪ್ರಚಾರ ಮಾಡುತ್ತಾರೆ. ಜವಾಹರಲಾಲ್ ನೆಹರು, ಲಾಲ್‌ಬಹದ್ದೂರ್ ಶಾಸ್ತ್ರಿ, ಇಂದಿರಾಗಾಂಧಿ, ರಾಜೀವ್ ಗಾಂಧಿಯವರು ಮಾಡಿದ ಕೆಲಸದ ಬಗ್ಗೆ ಟೀಕೆ ಮಾಡುವ ಬಿಜೆಪಿಯವರು, ನಮ್ಮನ್ನು ರಿಪೋರ್ಟ್ ಕಾರ್ಡ್ ಕೇಳುತ್ತಾರೆ. ದೇಶದಲ್ಲಿದ್ದ ಶೇ.18ರಷ್ಟು ಶಿಕ್ಷಿತರ ಪ್ರಮಾಣವನ್ನು 2013–14ರ ವೇಳೆಗೆ ಶೇ.74ಕ್ಕೆ ಏರಿಸಿದ್ದು, ಮಹಿಳೆಯರ ಶಿಕ್ಷಣವನ್ನು ಶೇ.7ರಿಂದ 65ಕ್ಕೆ ಹೆಚ್ಚಿಸಿದ್ದು, ಶೇ.7ರಷ್ಟಿದ್ದ ಎಸ್ಸಿ–ಎಸ್ಟಿ ಸಮುದಾಯದವರ ಶಿಕ್ಷಣವನ್ನು ಶೇ.66ಕ್ಕೇರಿಸಿದ್ದು, ಕಾಂಗ್ರೆಸ್ ಸಾಧನೆ ಎಂದು ಖರ್ಗೆ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಗುಜರಾತ್ ರಾಜ್ಯದಲ್ಲೇ 1000 ಮಂದಿ ಪೈಕಿ 45 ಮಂದಿ ಸಾವನ್ನಪ್ಪುತ್ತಿದ್ದರು. ಆ ಪ್ರಮಾಣವನ್ನು ನಾವು 30ಕ್ಕಿಳಿಸಿದ್ದೇವೆ. 2 ಲಕ್ಷವಿದ್ದ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು 8 ಲಕ್ಷಕ್ಕೇರಿಸಿದ್ದು, ನರೇಗಾ ಯೋಜನೆ ಜಾರಿಗೊಳಿಸಿ ಉದ್ಯೋಗ ಒದಗಿಸಿದ್ದು, ಅನ್ನಭಾಗ್ಯ ಯೋಜನೆ ಮೂಲಕ ಆಹಾರ ಭದ್ರತಾ ಯೋಜನೆ ನಾವು ಮಾಡಿದ ಸಾಧನೆ ಎಂದು ಅವರು ನುಡಿದರು.

ಬಿಜೆಪಿಯವರು ಅದಾನಿ, ಅಂಬಾನಿ, ನೀರವ್ ಮೋದಿಯವರಂತಹ ಶ್ರೀಮಂತರ ಪರ ಯೋಜನೆ ನೀಡುತ್ತಾರೆ. ನಮ್ಮ ಸರ್ಕಾರ ಬಡವರು, ರೈತರು, ಹಿಂದುಳಿದವರು, ಎಸ್ಸಿ, ಎಸ್ಟಿ ಸಮುದಾಯ ಸೇರಿದಂತೆ ಸಮಾಜದ ಎಲ್ಲಾ ವರ್ಗಗಳ ಹಿತ ಕಾಯುತ್ತದೆ ಎಂದ ಅವರು, ಮೋದಿ ಎಂಬ ಹೆಸರಿನ ಬಗ್ಗೆ ಮಾತನಾಡಿದ ರಾಹುಲ್ ಗಾಂಧಿ ವಿರುದ್ಧ ಪ್ರಕರಣ ದಾಖಲಿಸಿ ದ್ವೇಷ ಸಾಧಿಸಿದ್ದ ಬಿಜೆಪಿಗೆ ನ್ಯಾಯಾಲಯದ ತೀರ್ಪು ಉತ್ತರ ನೀಡಿದೆ ಎಂದರು.

ರಾಹುಲ್ ಗಾಂಧಿ ಅವರು 4,000 ಕಿ.ಮೀ. ಭಾರತ ಜೋಡೋ ಯಾತ್ರೆ ಮಾಡಿದರು. ಇಂತಹ ಬೃಹತ್ ನಡಿಗೆಯನ್ನು ಈವರೆಗೂ ಯಾರೂ ಮಾಡಲು ಸಾಧ್ಯವಾಗಲಿಲ್ಲ. 21 ವರ್ಷ ಮಿತಿ ಇದ್ದ ಮತದಾನದ ಹಕ್ಕನ್ನು 18 ವರ್ಷಕ್ಕಿಳಿಸಿದ, ಮಹಿಳಾ ಮೀಸಲಾತಿ, ಅಣೆಕಟ್ಟೆ ಹೆದ್ದಾರಿ ಐಐಟಿ, ಮೆಡಿಕಲ್ ಕಾಲೇಜು ಸ್ಥಾಪನೆಯಂತಹ ಮಹತ್ತರ ಯೋಜನೆಗಳು ಕಾಂಗ್ರೆಸ್ ಸಾಧನೆಯೇ ಹೊರತು, ಬಿಜೆಪಿಯದ್ದಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ದಿಟ್ಟ ನುಡಿ

ಎಂದು ಭರವಸೆ ನೀಡಿದರು. ಚುನಾವಣಾ ಸಂದರ್ಭದಲ್ಲಿ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವ ಜವಾಬ್ದಾರಿ ಎಲ್ಲಾ ರಾಜಕೀಯ ಪಕ್ಷಗಳದ್ದಾಗಿದೆ. ಯಾವುದೇ ರಾಜಕೀಯ ಪಕ್ಷಗಳಿರಲಿ, ಚುನಾವಣೆ ವೇಳೆ ಮತ ದಾರರಿಗೆ ನೀಡಿದ ಭರವಸೆ ಈಡೇರಿಸು ವುದು ಅವರ ಧರ್ಮ. ಆದರೆ, ನಮ್ಮ ಸರ್ಕಾರ ಹೊರತುಪಡಿಸಿ ಉಳಿದ ಯಾವುದೇ ಸರ್ಕಾರ ನುಡಿದಂತೆ ನಡೆದಿಲ್ಲ. ಮುಂದಿನ 5 ವರ್ಷದಲ್ಲಿ ಎಲ್ಲಾ ಭರವಸೆಗಳನ್ನು ನಾವು ಈಡೇರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ನೂರರ ಸಾಧನೆ ಜನರ ಮುಂದಿಡಲು ಕೈಪಿಡಿ: ಆ.27ಕ್ಕೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 100 ದಿನ ಪೂರೈಸಿದೆ. ಈ ನೂರು ದಿನದಲ್ಲಿ ನಮ್ಮ ಸರ್ಕಾರ ಮಾಡಿರುವ ಸಾಧನೆ, ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಕೈಪಿಡಿಯೊಂದನ್ನು ಪ್ರಕಟಿಸಲಾಗಿದೆ. ಈ 100 ದಿನದ ಅವಧಿಯಲ್ಲಿ ನಮ್ಮ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ. ಈ ಕಿರುಹೊತ್ತಿಗೆ ಕಳೆದ ಮೂರು ತಿಂಗಳು, 10 ದಿನಗಳಲ್ಲಿ ಮಾಡಿರುವ ಸಾಧನೆಗಳನ್ನು ಒಳಗೊಂಡಿದೆ. ಈ ರಾಜ್ಯದ ಜನತೆಗೆ ನಮ್ಮ ಕರ್ತವ್ಯ ಜವಾಬ್ದಾರಿ ಹಾಗೂ ಸಾಧನೆಗಳನ್ನು ಮುಂದಿಡುವ ಪ್ರಯತ್ನ ಮಾಡಿದೆ ಎಂದರು.

ದೇಶದಲ್ಲೇ ದೊಡ್ಡ ಮಟ್ಟದ ಕಾರ್ಯಕ್ರಮ: ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮಿ ಯೋಜನೆ ದೇಶದಲ್ಲಿ ಅತೀ ದೊಡ್ಡ ಯೋಜನೆಯಾಗಿದೆ. ಸರ್ಕಾರದಿಂದ ದೊಡ್ಡ ಮಟ್ಟದ ಹಣವನ್ನು ನೇರವಾಗಿ ಫಲಾನುಭವಿಗಳಿಗೆ ಜಮಾ ಮಾಡುವ ಕಾರ್ಯಕ್ರಮ ಇದಾಗಿದೆ. ರಾಜ್ಯದಲ್ಲಿ 1.26 ಕೋಟಿ ಕುಟುಂಬಗಳಿವೆ. ಆ ಕುಟುಂಬಗಳ ಯಜಮಾನಿಯರಿಗೆ ಮಾಸಿಕ 2 ಸಾವಿರ ರೂ. ನೀಡುವ ಕಾರ್ಯಕ್ರಮವಿದು. ಈ ಯೋಜನೆಗೆ ಈಗಾಗಲೇ 1.10 ಕೋಟಿ ಮಹಿಳೆಯರು ನೋಂದಾಯಿಸಿಕೊಂಡಿದ್ದಾರೆ. ಯಜಮಾನಿಗೆ ತಿಂಗಳಿಗೆ 2 ಸಾವಿರ ರೂ.ನಂತೆ ವರ್ಷಕ್ಕೆ 24 ಸಾವಿರ ರೂ. ನೀಡಲಾಗುತ್ತದೆ. ಭಾರತದಲ್ಲಿ ಯಾವ ರಾಜ್ಯವೂ ಜನರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನೆರವು ನೀಡುವ ಕಾರ್ಯಕ್ರಮ ಜಾರಿಗೊಳಿಸಿಲ್ಲ ಎಂದರು.

48.50 ಕೋಟಿ ಪ್ರಯಾಣಿಕರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಶಕ್ತಿ' ಯೋಜನೆಯನ್ನು ರಾಜ್ಯದಲ್ಲಿ ಜೂ.11 ರಂದು ಜಾರಿಗೊಳಿಸಲಾಯಿತು. ಇದರಿಂದ ರಾಜ್ಯದಾದ್ಯಂತ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಜೂ.11ರಿಂದ ಆ.29ರವರೆಗೆ ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ 48.50 ಕೋಟಿ ಮಹಿಳಾ ಪ್ರಯಾಣಿಕರು ಉಚಿತ ಟಿಕೆಟ್‌ನಡಿ ಪ್ರಯಾಣಿಸಿದ್ದಾರೆ.

ಜುಲೈ ತಿಂಗಳಿಂದ ಗೃಹಜ್ಯೋತಿ ಕಾರ್ಯಕ್ರಮದಡಿ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತಿದೆ. 1.56 ಕೋಟಿ ಫಲಾನುಭವಿಗಳು ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಅಕ್ಕಿ ನೀಡಲಾಗಿದೆ. ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿ ನೀಡದ ಕಾರಣ, 5 ಕೆಜಿ ಅಕ್ಕಿ ನೀಡಿ, ಉಳಿದ 5 ಕೆಜಿ ಅಕ್ಕಿಗೆ ಹಣ ನೀಡಲಾಗುತ್ತಿದೆ. ಈ ಎಲ್ಲಾ ಯೋಜನೆಗಳು ಬಡ, ದಲಿತ, ಶೋಷಿತ ಹಾಗೂ ಮಧ್ಯಮ ವರ್ಗದ ಹಿತಕಾಯುವ ಕಾರ್ಯಕ್ರಮಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅನುದಾನ ಮುಂದುವರಿಕೆ: ರಾಜ್ಯದಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ ಬಿಜೆಪಿ, ಜೆಡಿಎಸ್ ನಾಯಕರು ಟೀಕಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಗ್ಯಾರಂಟಿ ಯೋಜನೆಯಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಆರೋಪಿಸಿದ್ದರು. ಆದರೆ ಗ್ಯಾರಂಟಿಗಳಿಂದ ರಾಜ್ಯ ದಿವಾಳಿಯಾಗಿಲ್ಲ, ಆಗೋದು ಇಲ್ಲ ಎಂದು. ನಾವು ನುಡಿದಂತೆ ನಡೆದು 4 ಗ್ಯಾರಂಟಿ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದೇವೆ. ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇವೆ. ನೀರಾವರಿ, ಲೋಕೋಪಯೋಗಿ, ವಸತಿ, ಗ್ರಾಮೀಣಾಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗೆ ನೀಡುತ್ತಿದ್ದ ಅನುದಾನವನ್ನು ಮುಂದುವರೆಸಿದ್ದೇವೆ. ರಾಜ್ಯ ದಿವಾಳಿಯಾಗಿಲ್ಲ. ವಿರೋಧ ಪಕ್ಷಗಳು ನಮ್ಮ ಸರ್ಕಾರದ ಮೇಲೆ ಸುಳ್ಳು ಹೇಳುತ್ತಲೇ ಇವೆ. ಯಾರು ಏನೇ ಹೇಳಿದರೂ ನಮ್ಮ ಸರ್ಕಾರ ಬಡವರ, ಶೋಷಿತರ ಹಿತಕಾಯುವ ಕಾರ್ಯಕ್ರಮವನ್ನು ಮುಂದುವರೆಸುತ್ತದೆ ಎಂದು ತಿಳಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಸಂತಸ


ಮಾಡಿದರು ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ಜನರ ಬದುಕು ಹಸನಾಗಿಸುವ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದೆವು. ನುಡಿದಂತೆ ನಡೆಯುತ್ತೇವೆ ಎಂದು ಚುನಾವಣೆ ವೇಳೆ ಜನರಿಗೆ ಭರವಸೆ ನೀಡಿದ್ದೆವು. ಅದರಂತೆ ಈಗ ಅಧಿಕಾರಕ್ಕೆ ಬಂದು, ಜನರಿಗೆ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ಕೇವಲ ನೂರು ದಿನದ ಅವಧಿಯಲ್ಲಿ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ ಎಂದು ವಿವರಿಸಿದರು.

ಇದು ಐತಿಹಾಸಿಕ ಕಾರ್ಯಕ್ರಮ. ಇದಕ್ಕಿಂತ ದೊಡ್ಡ ಸೌಲಭ್ಯ ರಾಜ್ಯದ ಜನರಿಗೆ ಎಂದೂ ದೊರೆಯುವುದಿಲ್ಲ. ಇದನ್ನು ನಾವು ಸಾಕಾರಗೊಳಿಸಿದ್ದೇವೆ. 1.41 ಕೋಟಿ ಕುಟುಂಬಗಳಿಗೆ ಗೃಹಜ್ಯೋತಿ ಯೋಜನೆಯಡಿ ಶೂನ್ಯ ವಿದ್ಯುತ್ ಬಿಲ್ ಬರುತ್ತಿದೆ. 1.31 ಕೋಟಿ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿ ಹಾಗೂ ಹಣ ದೊರೆಯುತ್ತಿದೆ. ಶಕ್ತಿ ಯೋಜನೆಯಲ್ಲಿ ಮಹಿಳೆಯರು ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಈಗ ಎರಡು ಸಾವಿರ ರೂಪಾಯಿ ಕುಟುಂಬದ ಯಜಮಾನಿ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಯಾಗುತ್ತಿದೆ. ಈ ಎಲ್ಲಾ ಯೋಜನೆಗಳಿಂದ ಒಂದು ಕುಟುಂಬಕ್ಕೆ ಐದು ಸಾವಿರ ರೂಪಾಯಿ ದೊರೆಯಲಿದೆ. ದೇಶದ ಯಾವ ರಾಜ್ಯದಲ್ಲೂ ಅನುಷ್ಠಾನ ಮಾಡಲಾಗದ ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದೆ ಎಂದು ಡಿ.ಕೆ.ಶಿವಕುಮಾರ್ ಅಂಕಿ ಅಂಶಗಳ ಸಮೇತ ನೆರೆದ ಅಪಾರ ಜನಸ್ತೋಮದ ಮುಂದೆ ಮಂಡಿಸಿದರು.

ಮೈಸೂರು–ಕೊಡಗು ಕ್ಷೇತ್ರದಲ್ಲಿ 'ಕೈ' ಅಭ್ಯರ್ಥಿ ಗೆಲ್ಲಿಸಿ



• ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರಿಗೆ ಸಿದ್ದರಾಮಯ್ಯ ಸಲಹೆ • ರಾಜೀವ್‌ನಗರದಲ್ಲಿ ಸುಂದರ 'ಅಲ್ ಬದರ್' ವೃತ್ತ ಉದ್ಘಾಟನೆ



ಮೈಸೂರು, ಆ.30(ಎಸ್‌ಪಿಎನ್)– ಮುಂದಿನ ಲೋಕಸಭಾ ಚುನಾವಣೆಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ಮತದಾರರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಮೈಸೂರು ರಾಜೀವ್‌ನಗರದಲ್ಲಿ ಮೈಸೂರು ನಗರ ಪಾಲಿಕೆ ವತಿಯಿಂದ ವಾರ್ಡ್ 13ರಲ್ಲಿ ಅಂದಾಜು 2.47 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ 'ಅಲ್ ಬದರ್' ವೃತ್ತವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಕಳೆದ 9 ವರ್ಷಗಳಿಂದ ಅಧಿಕಾರದಲ್ಲಿದ್ದಾರೆ. ಮೈಸೂರಿನ ಅಭಿವೃದ್ಧಿಗೆ ಯಾವುದೇ ವಿಶೇಷ ಅನುದಾನ ನೀಡಿಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿ, ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರು, ದಲಿತರು, ಕಾರ್ಮಿಕರು, ಮಧ್ಯಮವರ್ಗದವರ ಪರವಾಗಿದೆ. ಆದರೆ, ಬಿಜೆಪಿ ಎಂದಿಗೂ ಬಡವರ ಪರವಾಗಿಲ್ಲ. ಕಳೆದ 9 ವರ್ಷಗಳಿಂದ ಬೆಲೆಯೇರಿಕೆಯಿಂದ ತತ್ತರಿಸಿದ್ದರೂ ಪ್ರಧಾನಿ ಮೋದಿ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಪ್ರಧಾನಿ ಮೋದಿಯವರು ರಾಜ್ಯಕ್ಕೆ ಬಂದಾಗ 'ಅಚ್ಛೆ ದಿನ್' ಅನ್ನುತ್ತಿದ್ದರು. ಅದನ್ನು ಜಾರಿಗೆ ತರಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ 5ರಲ್ಲಿ 4 ಗ್ಯಾರಂಟಿಗಳನ್ನು ಜಾರಿಗೊಳಿಸಿ, 'ಅಚ್ಛೆ ದಿನ್' ತಂದಿದ್ದೇವೆ ಎಂದರು.

ಮೈಸೂರು ಅಭಿವೃದ್ಧಿಗೆ ಬದ್ಧ: ನಾನು ಮೈಸೂರು ನಗರದವನಲ್ಲ ಆದರೆ, ಮೈಸೂರು ನಗರದಲ್ಲಿ ಓದಿದ್ದೇನೆ. ಹಾಗಾಗಿ ಮೈಸೂರು ನಗರದ ಅಭಿವೃದ್ಧಿ ನನ್ನ ಆದ್ಯ ಕರ್ತವ್ಯ ಎಂದ ಮುಖ್ಯಮಂತ್ರಿಗಳು, ಈ ಭಾಗದ ಶಾಸಕರಾದ ತನ್ವೀರ್ ಸೇಠ್ ಅವರು, ಮೈಸೂರಿನ ಸಮಗ್ರ ಅಭಿವೃದ್ಧಿ ಕುರಿತು ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡಿದ್ದಾರೆ. ಅವರು ಸೇರಿದಂತೆ ಇತರೆ ಶಾಸಕರ ಸಲಹೆ ಪಡೆದು ಮೈಸೂರಿನ ಅಭಿವೃದ್ಧಿಗೆ ನಮ್ಮ ಸರ್ಕಾರ ಶ್ರಮಿಸುತ್ತದೆ ಎಂದು ಅಭಯ ನೀಡಿದರು.

ಲೋಕಸಭೆ ಚುನಾವಣೆ ಹತ್ತಿರವಿದೆ. ಬಿಜೆಪಿ ಆಡಳಿತಾವಧಿಯಲ್ಲಿ ಆಗಿರುವ ಅನಾಹುತಗಳನ್ನು ಸರಿಪಡಿಸಲು ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಕೇಂದ್ರದಲ್ಲಿ 9 ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿ, ಅಲ್ಪಸಂಖ್ಯಾತರು, ಕ್ರೈಸ್ತರು, ದಲಿತರನ್ನು ಒಂದೇ ತಾಯಿ ಮಕ್ಕಳಂತೆ ಕಂಡು ಅಭಿವೃದ್ಧಿಪಡಿಸಬೇಕಿತ್ತು. ಈ ನಿಟ್ಟಿನಲ್ಲಿ ಬಿಜೆಪಿ ಚಿಂತಿಸಿಲ್ಲ. ಬಡವರಿಗಾಗಿ ಯಾವುದೇ ಯೋಜನೆ ರೂಪಿಸಿಲ್ಲ. ಹಾಗಾಗಿ ಮತ್ತೊಮ್ಮೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ತರದಂತೆ ಮತದಾರರು ಎಚ್ಚರವಹಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿಯಿಂದ ಆರ್ಥಿಕ ದಿವಾಳಿ: ಕಾಂಗ್ರೆಸ್ ಎಂದರೆ ಬದ್ಧತೆ ಇರುವ ಪಕ್ಷ. ಪ್ರಗತಿಪರವಾಗಿ ಕೆಲಸ ಮಾಡುವ ಪಕ್ಷ. ನೆಹರು ಕಾಲದಿಂದ ಮನಮೋಹನ್ ಸಿಂಗ್ ಅವಧಿಯವರೆಗೆ ಎಂದಿಗೂ ಸಾಮರಸ್ಯ ಕದಡುವ ಕೆಲಸ ಮಾಡಿಲ್ಲ. ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ನಂತರ ದೇಶದಲ್ಲಿ ಆರ್ಥಿಕತೆ ದಿವಾಳಿಯಾಗಿದೆ. ಮಧ್ಯಮ ವರ್ಗ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ರಾಜ್ಯದ ಮತದಾರರು ಮನಸ್ಸು ಮಾಡಬೇಕು ಎಂದು ತಿಳಿಸಿದರು.

ಮಾಜಿ ಮೇಯರ್ ಅಯೂಬ್ ಖಾನ್ ತಾವು ಪ್ರತಿನಿಧಿಸುವ ವಾರ್ಡ್ ಅನ್ನು ವಿಶೇಷವಾಗಿ ಅಭಿವೃದ್ಧಿಪಡಿಸಿ, ಗಮನ ಸೆಳೆದಿದ್ದಾರೆ. ಇದಕ್ಕೆ ಶಾಸಕ ತನ್ವೀರ್‌ಸೇಠ್ ಕೂಡ ಕೈ ಜೋಡಿಸಿದ್ದಾರೆ. ಈ ವೃತ್ತವನ್ನು ನಾನು ಸಂತೋಷದಿಂದ ಉದ್ಘಾಟಿಸಿದ್ದು, ಇನ್ನು ಹೆಚ್ಚಿನ ಅನುದಾನದಲ್ಲಿ ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಹಾಗೂ ಈ ಭಾಗದ ಶಾಸಕರ ಸಲಹೆಯನ್ನು ಪರಿಗಣಿಸುತ್ತೇನೆ ಎಂದರು.

2004ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾಗ ಈ ಭಾಗ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿತ್ತು. ಆಗ ದೇವನೂರು ಬಡಾವಣೆ ಎಂದು ಕರೆಯುತ್ತಿದ್ದರು. 2008ರಲ್ಲಿ ಕ್ಷೇತ್ರ ಮರುವಿಂಗಡಣೆ ಆದ ನಂತರ ರಾಜೀವ್‌ನಗರ ಎಂಬುದಾಗಿ ಮರು ನಾಮಕರಣ ಆಗಿದೆ. ಈಗ ಅಯೂಬ್ ಖಾನ್ ಸ್ಥಳೀಯ ಜನಪ್ರತಿನಿಧಿಯಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮತ್ತೆ ಸ್ವಚ್ಛ ನಗರಿ: ಶಾಸಕ ತನ್ವೀರ್ ಸೇಠ್ ಹೇಳಿದಂತೆ ಮೈಸೂರು ನಗರ ವ್ಯವಸ್ಥಿತವಾಗಿ ಬೆಳೆಯಬೇಕು. ಇಲ್ಲಿನ ಜನರಿಗೆ ಉತ್ತಮ ಗುಣಮಟ್ಟದ ನಾಗರಿಕ ಸೇವೆಗಳನ್ನು ಒದಗಿಸಬೇಕು. ಒಳ್ಳೆಯ ರಸ್ತೆ, ಸ್ವಚ್ಛತೆ, ಕಸವಿಲೇವಾರಿ ಕಡೆ ವಿಶೇಷ ಗಮನ ಹರಿಸಲಾಗುತ್ತಿದೆ. ಈ ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದಾಗ ಮೈಸೂರು ನಗರ ಪಾಲಿಕೆಗೆ ಸ್ವಚ್ಛತಾ ನಗರಿ ಎಂಬ ಪ್ರಶಸ್ತಿಯನ್ನು ಎರಡು ಬಾರಿ ಪಡೆದಿತ್ತು. ಈಗ ಅದೇ ಸ್ಥಾನವನ್ನು ಗಳಿಸಲು ಮೈಸೂರಿನ ಜನತೆಯ ಸಹಕಾರ ಅತೀ ಮುಖ್ಯ ಎಂದು ತಿಳಿಸಿದರು

2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬರಲಿಲ್ಲ. ಆಗ ನಾವು ಮತ್ತು ಜೆಡಿಎಸ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸಮ್ಮಿಶ್ರ ಸರ್ಕಾರ ಮಾಡಿದೆವು. ಆದರೆ, ಬಿಜೆಪಿ ನಮ್ಮ ಕಡೆಯ 17 ಶಾಸಕರನ್ನು ಸೆಳೆದು ಬಹುಮತ ಪಡೆದುಕೊಂಡು 3 ವರ್ಷ 10 ತಿಂಗಳು ಆಡಳಿತ ಮಾಡಿತು. ಈ ಅವಧಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ಮಾಡಿತು. ಈ ಅಕ್ರಮವನ್ನು ತನಿಖೆ ಮಾಡಿಸುತ್ತಿದ್ದೇವೆ. ಅಲ್ಲದೆ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ನೂರು ದಿನಗಳು ಕಳೆದಿವೆ. ಈ ಅವಧಿಯ ಸಾಧನೆಯನ್ನು ಕೈಪಿಡಿ ಮೂಲಕ ಜನರಿಗೆ ತಿಳಿಸುವ ಕಾರ್ಯ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಈ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಚಿವರಾದ ಸತೀಶ್ ಜಾರಕಿಹೊಳಿ, ಬೈರತಿ ಸುರೇಶ್, ಶಾಸಕರಾದ ತನ್ವೀರ್ ಸೇಠ್, ಡಿ.ರವಿಶಂಕರ್, ಕೆ.ಹರೀಶ್ ಗೌಡ, ಎಂಎಲ್‌ಸಿ ಮಂಜೇಗೌಡ, ಮಾಜಿ ಎಂಎಲ್‌ಸಿ ಸುದೇಶ್ ನಾಗರಾಜ್, ಮಾಜಿ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಎಂ.ಕೆ. ಸೋಮಶೇಖರ್, ಮಾಜಿ ಮೇಯರ್ ಆರೀಫ್ ಹುಸೇನ್, ನಾರಾಯಣ, ನಗರಪಾಲಿಕೆ ಸದಸ್ಯರಾದ ಆಯೂಬ್ ಖಾನ್, ಅಫ್ತಾಬ್ ಬೇಗ್, ಜಿಗೋಪಿ, ನಗರಾಧ್ಯಕ್ಷ ಆರ್.ಮೂರ್ತಿ, ವಕ್ಫ್ ಬೋರ್ಡ್ ಅಧ್ಯಕ್ಷ ಮೊಹಮ್ಮದ್ ಫಯಾಜ್, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕಾರುಬಾರು!

ಮೈಸೂರು, ಆ.30(ಬಿಎಲ್‌ಯು)– ಗೃಹಲಕ್ಷ್ಮಿ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರದೇ ಕಾರುಬಾರು!



ಸಮಾರಂಭದ ಆರಂಭದಲ್ಲಿ ಸೂಕ್ಷ್ಮವಾಗಿ ಪ್ರಾಸ್ತಾವಿಕ ನುಡಿಗಳಾಡಿದ ಲಕ್ಷ್ಮಿ ಹೆಬ್ಬಾಳ್ಕರ್, ಕರ್ನಾಟಕದಲ್ಲಿ 1.26 ಕೋಟಿ ಕುಟುಂಬಗಳಿವೆ. ಇದರಲ್ಲಿ 1.1 ಕೋಟಿ ಯಜಮಾನಿಯರು ಗೃಹಲಕ್ಷ್ಮಿ ಯೋಜನೆಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಈ ಯೋಜನೆ ಯಿಂದ ಕುಟುಂಬ ನಿರ್ವಹಣೆಗೆ ಮಹಿಳೆಯರಿಗೆ ಬಹಳಷ್ಟು ಅನುಕೂಲ ವಾಗುತ್ತದೆ ಎಂದು ಹೇಳಿದರು. ವೇದಿಕೆಯಲ್ಲಿದ್ದ ಗಣ್ಯರನ್ನು ಸ್ವಾಗತಿ ಸಿದ ಲಕ್ಷ್ಮಿ ಹೆಬ್ಬಾಳ್ಕರ್ ಸಮಾರಂಭದ ಆರಂಭದಿಂದ ಕೊನೆಯ ತನಕ ಹೆಚ್ಚಿನ ಶ್ರಮ ವಹಿಸಿದರು. ಲಕ್ಷ್ಮಿ ಹೆಬ್ಬಾಳ್ಕರ್ ಬರುವ ತನಕ ಕಾರ್ಯಕ್ರಮದ ಜ್ಯೋತಿ ಬೆಳಗಿಸಲಿಲ್ಲ. ಯಜಮಾನಿಯರ ಪ್ರತಿನಿಧಿಯಾಗಿದ್ದ ಲಕ್ಷ್ಮಿ ಹೆಬ್ಬಾಳ್ಕರ್‌ಗೆ ಜ್ಯೋತಿ ಬೆಳಗಲು ಅವಕಾಶ ಮಾಡಿಕೊಡಲಾಗಿತ್ತು. ವಾರದ ಹಿಂದೆಯೇ ಮೈಸೂರಿಗೆ ಆಗಮಿಸಿದ್ದ ಲಕ್ಷ್ಮಿ ಹೆಬ್ಬಾಳ್ಕರ್, ಸಮಾರಂಭ ಅಚ್ಚುಕಟ್ಟಾಗಿ ನಡೆಯಲು ಮೇಲುಸ್ತುವಾರಿ ವಹಿಸಿಕೊಂಡಿದ್ದರು.

ಇಂದು ಬೆಳಗ್ಗೆಯೇ ಸಮಾರಂಭ ನಡೆಯುವ ಸ್ಥಳಕ್ಕೆ ಆಗಮಿಸಿದ ಲಕ್ಷ್ಮಿ ಹೆಬ್ಬಾಳ್ಕರ್ ಕಾರ್ಯಕ್ರಮ ಕುರಿತಂತೆ ಅಧಿಕಾರಿಗಳಿಗೆ ಸಲಹೆ ಹಾಗೂ ಮಾರ್ಗದರ್ಶನ ಮಾಡಿದರು. ಆದರೆ ರಾಹುಲ್ ಗಾಂಧಿ ವೇದಿಕೆಗೆ ಬಂದ ವೇಳೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಒಬ್ಬರ ಕೈ ಒಬ್ಬರು ಮೇಲೆತ್ತಿ ಒಗ್ಗಟ್ಟು ಪ್ರದರ್ಶಿಸಿದರು. ಈ ವೇಳೆ ಲಕ್ಷ್ಮಿ ಹೆಬ್ಬಾಳ್ಕರ್ ಮುಂದೆ ಬರಲು ಪ್ರಯತ್ನಿಸಿದರಾದರೂ, ಅವರಿಗೆ ಅವಕಾಶವಾಗಲಿಲ್ಲ. ಇನ್ನುಳಿದಂತೆ ಎಲ್ಲಾ ಸಂದರ್ಭದಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್ ಸಮಾರಂಭದಲ್ಲಿ ಮುಂಚೂಣಿಯಲ್ಲಿದ್ದು, ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಿದರು.

ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಶೇಕಡ 90ರಷ್ಟು ಮಹಿಳೆಯರು ಭಾಗವಹಿಸಿದ್ದರು. ಪ್ರಾಯಶಃ ಮೈಸೂರಿನ ಇತಿಹಾಸದಲ್ಲಿ ಮಹಿಳೆಯರೇ ಹೆಚ್ಚಾಗಿ ಪಾಲ್ಗೊಂಡಿದ್ದ ಸಮಾರಂಭ ಇದಾಗಿತ್ತು.

ಮುಂಬೈನಲ್ಲಿ ಇಂದು, ನಾಳೆ ಇಂಡಿಯಾ ಸಭೆ

ಮುಂಬೈ: ಮಹಾರಾಷ್ಟ್ರದ ಮುಂಬೈನಲ್ಲಿ ವಿರೋಧ ಪಕ್ಷವಾದ ಇಂಡಿಯಾ (INDIA) ಮೈತ್ರಿಕೂಟದ ಸಭೆ ಗುರುವಾರ ನಡೆಯಲಿದೆ. ಎರಡು ದಿನಗಳ ನಡೆಯಲಿರುವ ಈ ಸಭೆಯಲ್ಲಿ 25ಕ್ಕೂ ಹೆಚ್ಚು ಪ್ರತಿಪಕ್ಷಗಳು ಭಾಗವಹಿಸುವ ನಿರೀಕ್ಷೆ ಇದೆ. ಬೆಂಗಳೂರಿನಲ್ಲಿ ನಡೆದ ಸಭೆಗೆ 20ಕ್ಕೂ ಹೆಚ್ಚು ಪ್ರತಿಪಕ್ಷಗಳ ಸದಸ್ಯರು ಆಗಮಿಸಿದ್ದರು. ಈ ಬಾರಿ ಇನ್ನೂ ಕೆಲವು ಪ್ರತಿಪಕ್ಷಗಳು ಭಾಗಿಯಾಗುವ ಸಾಧ್ಯತೆ ಇದೆ.

ಸಂಚಾಲಕ ಹುದ್ದೆಗೆ ಸಂಬಂಧಿಸಿದಂತೆ ಭಾರಿ ಚರ್ಚೆ ಏರ್ಪಟ್ಟಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರು ಸಂಚಾಲಕ ಹುದ್ದೆಗೆ ನಿರಾಕರಿಸಿದಾಗ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಕೇಳಿ ಬಂದಿತ್ತು. ಆದರೆ ಇದೀಗ ಮುಂಬೈನಲ್ಲಿ ನಡೆಯಲಿರುವ ಈ ಸಭೆಯಲ್ಲಿ ಸಂಚಾಲಕ ಹುದ್ದೆಯ ಕುರಿತು ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ. ಬದಲಾಗಿ ಸಮಿತಿ ರಚಿಸಬಹುದು ಎಂದು ತಿಳಿದುಬಂದಿದೆ.

ಮೂಲಗಳ ಪ್ರಕಾರ ಇಂಡಿಯಾ ಮೈತ್ರಿಕೂಟದಲ್ಲಿ ಸಂಚಾಲಕ ಹುದ್ದೆಗೆ ಸಂಬಂಧಿಸಿದಂತೆ ಜಗಳ ಹೆಚ್ಚುತ್ತಿದೆ. ಸಂಚಾಲಕ ಹುದ್ದೆಯ ಬದಲಿಗೆ ಈಗ 11 ಜನರ ಸಮನ್ವಯ ಸಮಿತಿ ರಚಿಸಲು ನಿರ್ಧರಿಸಿದ್ದು ಇದು ಮೈತ್ರಿಯ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ.

ಕಾಂಗ್ರೆಸ್ ತನ್ನನ್ನು ಬಿಟ್ಟು ಬೇರೆಯವರ ನಾಯಕತ್ವವನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಲಾಗಿದೆ. ಆದ್ದರಿಂದ ಟಿಎಂಸಿ ಮತ್ತು ಆಮ್ ಆದ್ಮಿ ಪಕ್ಷವು ಭಾರತದ ನಾಯಕತ್ವವನ್ನು ಕಾಂಗ್ರೆಸ್‌ಗೆ ಹಸ್ತಾಂತರಿಸುವುದನ್ನು ವಿರೋಧಿಸಿದೆ. ಇದೇ ಕಾರಣಕ್ಕೆ ಈ ಹುದ್ದೆಗೆ ಸಂಬಂಧಿಸಿದಂತೆ ಜಟಾಪಟಿ ನಡೆಯುತ್ತಿದೆ.

ಲೋಕಸಭೆ ಚುನಾವಣೆ 2024 ರ ಮೊದಲು, ಅನೇಕ ವಿರೋಧ ಪಕ್ಷಗಳು ಒಗ್ಗೂಡಿ ಇಂಡಿಯಾ ಒಕ್ಕೂಟವನ್ನು ರಚಿಸಿದವು. ಈ ಗುಂಪಿನ ಎರಡು ಸಭೆಗಳನ್ನು ನಡೆಸಲಾಗಿದ್ದು, ಮೂರನೇ ಸಭೆಯು ಮುಂಬೈನಲ್ಲಿ ಆಗಸ್ಟ್ 31 ಮತ್ತು ಸೆಪ್ಟೆಂಬರ್ 1 ರಂದು ನಡೆಯಲಿದೆ. ಈ ಸಭೆಯಲ್ಲಿ ಭಾರತದ ಲೋಗೋ ಮತ್ತು ಧ್ವಜ ಅನಾವರಣ ಆಗಬಹುದು. ಶಿವಸೇನಾ, ಮಹಾರಾಷ್ಟ್ರ ಕಾಂಗ್ರೆಸ್ ಮತ್ತು ಎನ್‌ಸಿಪಿ ಈ ಸಭೆಯನ್ನು ಆಯೋಜಿಸುತ್ತಿದೆ.

ಇಂಡಿಯಾ ಮೈತ್ರಿಕೂಟದಲ್ಲಿ ಪ್ರಸ್ತುತ ಸುಮಾರು ಎರಡು ಡಜನ್ ಪಕ್ಷಗಳಿವೆ, ಈ ಸಭೆಯಲ್ಲಿ ಹೊಸ ಪಕ್ಷಗಳು ಸಹ ಸೇರಿಕೊಳ್ಳಬಹುದು. 2024 ರ ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಸೂತ್ರವನ್ನು ಇಲ್ಲಿಯವರೆಗೆ ನಿರ್ಧರಿಸಲಾಗಿಲ್ಲ, ಆದರೂ ಜಂಟಿ ಸಮಾವೇಶಗಳನ್ನು ಶೀಘ್ರದಲ್ಲೇ ಪ್ರಾರಂಭಿಸಬಹುದು. ಇದರಿಂದ ದೇಶಾದ್ಯಂತ ಪ್ರತಿಪಕ್ಷಗಳ ಒಗ್ಗಟ್ಟಿನ ಸಂದೇಶವನ್ನು ನೀಡಬಹುದು ಎಂಬುದು ಮೈತ್ರಿಕೂಟದ ಲೆಕ್ಕಾಚಾರ.

ಬಿಬಿಎಂಪಿ ಕಚೇರಿಯಲ್ಲಿ ಅಗ್ನಿ ಅವಘಡ

ಗಾಯಾಳು ಮುಖ್ಯ ಇಂಜಿನಿಯರ್ ಶಿವಕುಮಾರ್ ಸಾವು

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ಕಚೇರಿಯಲ್ಲಿ ಸಂಭವಿಸಿದ್ದ ಅಗ್ನಿ ಅವಘಡದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಮುಖ್ಯ



ಇಂಜಿನಿಯರ್ ಸಿಎಂ ಶಿವಕುಮಾರ್ ಅವರು ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಸಾವನ್ನಪ್ಪಿದ್ದಾರೆ.

ಬಿಬಿಎಂಪಿಯ ಕ್ವಾಲಿಟಿ ಅಶ್ಯೂರೆನ್ಸ್ ಲ್ಯಾಬ್‌ನಲ್ಲಿ ಆಗಸ್ಟ್ 11 ರಂದು ಸಂಭವಿಸಿದ್ದ ಅಗ್ನಿ ಅವಘಡದಲ್ಲಿ 45 ವರ್ಷದ ಶಿವಕುಮಾರ್ ಅವರು ಸೇರಿದಂತೆ 9 ನೌಕರರು ಗಾಯಗೊಂಡಿದ್ದರು.

ಶೇ. 25ರಷ್ಟು ಸುಟ್ಟಗಾಯಗಳಿಂದ ಬಳಲುತ್ತಿದ್ದ ಶಿವಕುಮಾರ್ ಅವರನ್ನು ಕಳೆದ ಕೆಲ ದಿನಗಳ ಹಿಂದೆ ಅಪೊಲೋ ಆಸ್ಪತ್ರೆ ದಾಖಲಿಸಲಾಗಿತ್ತು ಆದರೆ ಚಿಕಿತ್ಸೆ ಫಲಿಸದೇ ಇಂದು ಶಿವಕುಮಾರ್ ಅವರು ಕೊನೆಯುಸಿರೆಳೆದಿದ್ದಾರೆ ಎಂದು ಅಪೊಲೋ ಆಸ್ಪತ್ರೆ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಬಿಎಂಪಿ ಮುಖ್ಯ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಶಿವಕುಮಾರ್ ಅವರು ಮೈಸೂರು ಜಿಲ್ಲೆಯ ನಂಜನಗೂಡು ಮೂಲದವರಾಗಿದ್ದು, ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಧರ್ಮದ ಹೆಸರಿನಲ್ಲಿ ದೇಶ ಒಡೆಯುವುದನ್ನು ತಪ್ಪಿಸಲು ಒಗ್ಗಟ್ಟಿನಿಂದ ಪ್ರಶ್ನಿಸಬೇಕಿದೆ

ಮಾಜಿ ಶಿಕ್ಷಣ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್

ಮೈಸೂರು, ಆ.30(ಪಿಎಂ)– ಇಂದು ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆಯುವ ಪ್ರವೃತ್ತಿ ನಡೆಯುತ್ತಿದ್ದು, ಇದಕ್ಕೆ ಉತ್ತೇಜನ ನೀಡುವ ಪ್ರಭುತ್ವವನ್ನು ದಲಿತರು, ಮುಸಲ್ಮಾನರು, ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲಾ ಪ್ರಗತಿಪರರು ಒಂದಾಗಿ ಪ್ರಶ್ನೆ ಮಾಡಬೇಕಿದೆ ಎಂದು ಮಾಜಿ ಶಿಕ್ಷಣ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್ ಹೇಳಿದರು.



ಮೈಸೂರಿನ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಬುಧವಾರ ಅಭಿನಂದನಾ ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರಿನ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಮೈಸೂರು ವಿವಿ ರಾಜ್ಯಶಾಸ್ತ್ರ ವಿಭಾಗ, ಸಾರ್ವಜನಿಕ ಆಡಳಿತ ವಿಭಾಗದ ಜಂಟಿ ಆಶ್ರಯದಲ್ಲಿ ಪ್ರೊ.ಮುಜಾಫರ್ ಅಸ್ಸಾದಿ ಮತ್ತು ಪ್ರೊ.ಜಿ.ಟಿ.ರಾಮಚಂದ್ರಪ್ಪ ಅವರ ನಿವೃತ್ತಿ ಸಂದರ್ಭದ ಹಿನ್ನೆಲೆಯಲ್ಲಿ ಅವರ ಗೌರವಾರ್ಥ ಬುಧವಾರ ಹಮ್ಮಿಕೊಂಡಿದ್ದ 'ಜಾಗತೀಕರಣ, ಅಸ್ಮಿತೆ ಮತ್ತು ಪ್ರಜಾಪ್ರಭುತ್ವ ; ಒಂದು ಮುಖಾಮುಖಿ' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಅಭಿನಂದನಾ ಗ್ರಂಥಗಳ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ಸಿದ್ಧಾಂತ ಉತ್ತೇಜಿಸುತ್ತಿರುವ ಪ್ರಭುತ್ವವು ಹಿಂದುತ್ವದ ಪ್ರತಿಪಾದನೆ ಮಾಡುತ್ತಿದೆ. ಸಂವಿಧಾನ ಬದಲಾಯಿಸಿ, ಹಿಂದೂ ರಾಷ್ಟ್ರ ಮಾಡಬೇಕೆಂಬ ಉದ್ದೇಶವನ್ನೂ ಹೊಂದಿದೆ ಇದನ್ನು ವಿರೋಧಿಸಿ ಪ್ರಶ್ನೆ ಮಾಡಬೇಕು. ಅವರ ಮಾಡುತ್ತಿರುವ ತಪ್ಪನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕಿದೆ. ಆ ಮೂಲಕ ಬಹುತ್ವದ ಭಾರತವನ್ನು ನಾವು ನೀವೆಲ್ಲಾ ಸೇರಿ ಉಳಿಸಿಕೊಳ್ಳಬೇಕು ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದರು 'ಪ್ರತಿಯೊಬ್ಬರು ಒಂದೇ ಧರ್ಮಕ್ಕೆ ಸೇರಿ, ಒಂದೇ ಮಾರ್ಗ ಅನುಸರಿಸುವ ದುರ್ದಿನ ಪ್ರಪಂಚಕ್ಕೆ ಬಾರದಿರಲಿ, ಹಾಗಾದಲ್ಲಿ ಧರ್ಮ ಮತ್ತು ಆಧ್ಯಾತ್ಮಿಕ ಭಾವನೆ ನಾಶವಾಗಲಿದೆ' ಎಂಬ ಸಂದೇಶ ನೀಡಿದ್ದಾರೆ. 'ಮನುಷ್ಯ ಮನುಷ್ಯರ ನಡುವೆ ಸಹೋದರ ಭಾವನೆಗಳಿಗೆ ಎದುರಾಗುವ ಧಾರ್ಮಿಕತೆ ಹಿನ್ನೆಲೆಯ ಆತಂಕಗಳನ್ನು ಮುರಿಯಲು ಪ್ರಯತ್ನಿಸಬೇಕು. ಈ ಆತಂಕಗಳು ನಾಶಕಾರಕ ಶಕ್ತಿಯನ್ನು ಮಾತ್ರ ಹೊಂದಿವೆ. ನಮ್ಮಲ್ಲಿ ಅತ್ಯಂತ ಉತ್ತಮರಾದವರೂ ಅದರ ಭಯಂಕರ ಪ್ರಭಾವಕ್ಕೆ ಒಳಗಾಗಿ ಪಿಶಾಚಿಗಳಂತೆ ಆಗುತ್ತಾರೆ' ಎಂಬ ಮತ್ತೊಂದು ಸಂದೇಶವನ್ನೂ ನೀಡಿದ್ದಾರೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದರು.


ಅಂತೆಯೇ ರಾಷ್ಟ್ರಕವಿ ಕುವೆಂಪು ಅವರು 'ಬಹುಭಾಷೆ, ಬಹುಮತ, ಅನೇಕಾಚಾರ ಮೊದಲಾದ ಅಸಂಖ್ಯ ಭೇದಗಳಿಂದ ಕೂಡಿರುವ ನಮ್ಮ ರಾಷ್ಟ್ರವನ್ನು ರಕ್ಷಿಸಬೇಕಿದ್ದರೆ ವಿಜ್ಞಾನ ದೃಷ್ಟಿಯ ಮತ್ತು ವಿಚಾರಬುದ್ಧಿಯ ಆಧಾರದ ಮೇಲೆ ನಿಲ್ಲುವ ಮನುಜ ಮತಕ್ಕೂ ಮತ್ತು ವಿಶ್ವಪಥಕ್ಕೂ ನಮ್ಮ ಜನವನ್ನು ತಿರುಗಿಸುವುದು ಅವಶ್ಯವಾಗಿದೆ' ಎಂಬ ಮಹತ್ವದ ಸಂದೇಶ ನೀಡಿದ್ದಾರೆ. ಇಂತಹ ವಿಚಾರಗಳನ್ನು ನಾವು ತಿಳಿದುಕೊಳ್ಳಬೇಕು ಎಂದು ಹೇಳಿದರು.

ಮೊಘಲ್ ಸಾಮ್ರಾಜ್ಯದ ದಾರಾ ಶಿಕೋ ಎಂಬಾತ ರಾಮಾಯಣ ಮತ್ತು ಮಹಾಭಾರತವನ್ನು ಇಡೀ ಪ್ರಪಂಚಕ್ಕೆ ಪರಿಚಯಿಸುವ ಉದ್ದೇಶದಿಂದ ಸಂಸ್ಕೃತದಿಂದ ಪರ್ಷಿಯನ್ ಭಾಷೆಗೆ ಅನುವಾದ ಮಾಡಿಸುತ್ತಾನೆ. ಇಂತಹ ಸಾಮರಸ್ಯದ ಸಂಗತಿಗಳು ಎಷ್ಟು ಜನಕ್ಕೆ ಗೊತ್ತು. ನಾವೆಲ್ಲರೂ ದ್ವೇಷಿಗಳಾಗಿಯೇ ಬದುಕಬೇಕೇ ಎಂದು ವಿಷಾದಿಸಿದರು.

ಜಾಗತೀಕರಣವನ್ನು ಬೇರೆ ಬೇರೆ ಅರ್ಥ ಮತ್ತು ದೃಷ್ಟಿಕೋನದಲ್ಲಿ ನೋಡಲಾಗುತ್ತಿದೆ. ಪ್ರಾಚೀನ ಭಾರತದಲ್ಲೂ ಜಾಗತೀಕರಣದ ಪರಿಕಲ್ಪನೆ ಇತ್ತು. ಜಾಗತೀಕರಣ ಮತ್ತು ಆಧುನಿಕತೆಯನ್ನು ಬಹಳ ಮಂದಿ ಒಂದು ಮುಖ್ಯ ಅಂಶವೆಂದು ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿರುವ ಕಷ್ಟ ಕಾರ್ಪಣ್ಯಗಳನ್ನು ಪ್ರಶ್ನಿಸುವ ಪ್ರವೃತ್ತಿ ಜಾಗತೀಕರಣದಿಂದ ಬರುತ್ತದೆ ಎಂದೂ ಹೇಳುತ್ತಾರೆ. ಅಂದರೆ ಇದು ಪ್ರಜಾಪ್ರಭುತ್ವಕ್ಕೆ ಅತ್ಯಗತ್ಯವಾಗುತ್ತದೆ ಎಂದು ಹೇಳಿದರು.

ಇದಕ್ಕೂ ಮುನ್ನ ಪ್ರೊ.ಮುಜಾಫರ್ ಅಸ್ಸಾದಿ ಅವರ ಅಭಿನಂದನಾ ಗ್ರಂಥ 'ಸ್ಮೃತಿ' ಅನ್ನು ಸುಪ್ರೀಂಕೋರ್ಟ್ ಹಿರಿಯ ವಕೀಲ ಆದಿತ್ಯ ಸೋಂಧಿ ಹಾಗೂ ಪ್ರೊ.ಜಿ.ಟಿ. ರಾಮಚಂದ್ರಪ್ಪ ಅವರ ಅಭಿನಂದನಾ ಗ್ರಂಥ 'ಸ್ನೇಹಾದ್ರಿ' ಅನ್ನು ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಿದರು. ಅಲ್ಲದೆ, ಪ್ರೊ.ಮುಜಾಫರ್ ಅಸ್ಸಾದಿ, ಪ್ರೊ.ಜಿ.ಟಿ.ರಾಮಚಂದ್ರಪ್ಪ ಅವರನ್ನು ಅಭಿನಂದಿಸಲಾಯಿತು. ಮೈಸೂರು ವಿವಿ ರಾಜ್ಯಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥ ಪ್ರೊ.ಉಮಾಪತಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್.ಎಂ.ರಾಜಶೇಖರ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಕೃಷ್ಣ ಹೊಂಬಾಳ್ ಮತ್ತಿತರು ಹಾಜರಿದ್ದರು.

ಜಿಲ್ಲಾ ಪರಿಷತ್ ಮಾಜಿ ಸದಸ್ಯ ಮನೆಯಪಂಡ ರವಿ ಮೇದಪ್ಪ ನಿಧನ



ಗೋಣಿಕೊಪ್ಪ, ಆ.30– ಜಿಲ್ಲಾ ಪರಿಷತ್ ಮಾಜಿ ಸದಸ್ಯರು ಹಾಗೂ ದಕ್ಷಿಣ ಕೊಡಗಿನ ಸುಂಟಿಕೊಪ್ಪದ ಅರಯವ ತೊಕ್ಲು ಗ್ರಾಮದ ನಿವಾಸಿ ಮನೆಯಪಂಡ ರವಿ ಮೇದಪ್ಪ (84) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಗೋಣಿಕೊಪ್ಪಲಿನ ವಕ್ಕತೊಟುಂಗಲ ಗ್ರಾಮದಲ್ಲಿ ನಾಳೆ (ಗುರುವಾರ) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ವೈ.ಎನ್. ಶಂಕರೇಗೌಡ
ಹಿರಿಯ ಸಹಕಾರಿ
ಹಾಗೂ ಕಾಂಗ್ರೆಸ್ ಮುಖಂಡರು
ಕೆ. ವಜ್ರೇಗೌಡ
ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷರು
ಹಾಗೂ ಕಾಂಗ್ರೆಸ್ ಹಿರಿಯ ಮುಖಂಡರು
ಮಹದೇಶ್ವರ ಬಸ್ ಮಾಲೀಕರು
ಆರ್. ಚೆಲುವರಾಜು
ನಿರ್ದೇಶಕರು ಮೈಸೂರು ಜಿಲ್ಲಾ ಹಾಲು ಒಕ್ಕೂಟ
ಹಾಗೂ ತಾ.ಪಂ. ಮಾಜಿ ಅಧ್ಯಕ್ಷರು, ಟಿ. ನರಸೀಪುರ
ಎ.ಎನ್. ಸ್ವಾಮಿ
ಪ್ರಥಮ ದರ್ಜೆ ಗುತ್ತಿಗೆದಾರರು
ಹಿರಿಯ ಕಾಂಗ್ರೆಸ್ ಮುಖಂಡರು
ಮುನ್ನಾವರ್‌ಪಾಷ
ಬನ್ನೂರು ಟೌನ್ ಅಧ್ಯಕ್ಷರು
ಯುವ ನಾಯಕರು ಹಾಗೂ ಕೆ.ಡಿ.ಪಿ ಸದಸ್ಯರಾದ
ಶ್ರೀ ಸುನೀಲ್‌ಬೋಸ್‌ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
ಬೃಹತ್ ಉದ್ಯೋಗ ಮೇಳ-2023
ದಿನಾಂಕ: 31-08-2023ರ ಗುರುವಾರ
ಬೆಳಿಗ್ಗೆ : 10 ರಿಂದ
ಸ್ಥಳ: ಎ.ಪಿ.ಎಂ.ಸಿ ಆವರಣ, ಟಿ. ನರಸೀಪುರ
ಏಕದಂತ ಪ್ರಿಂಟರ್ಸ್, ಬನ್ನೂರು.
ಮೊ: 9986561991

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
NST, NTT Trained Teachers and female graduates for montessori pre school in bogadi
6364227636

ಬೇಕಾಗಿದ್ದಾರೆ
ಮಹಿಳಾ ಅಭ್ಯರ್ಥಿ, ಬಿಕಾಂ ಮತ್ತು ಕಂಪ್ಯೂಟರ್ ನಾಲೆಡ್ಜ್ ಇರುವವರು ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಕುವೆಂಪುನಗರ ಸುತ್ತ ಮುತ್ತ ಇರುವವರಿಗೆ ಆದ್ಯತೆ
9880692485

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಬಳ : 12000 ದಿಂದ 14000 ಬಿ.ಎನ್. ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್, ಮಂಡಿಮೊಹಲ್ಲಾ, ಮೈಸೂರು ಸಂದರ್ಶನಕ್ಕೆ ಸಂಪರ್ಕಿಸಿ:
9611431188

ಉತ್ತಮ ಗುಣಮಟ್ಟದ ಕಟ್ಟಡ ಸಾಮಾಗ್ರಿಗಳು ದೊರೆಯುತ್ತದೆ
ಎಂ. ಸ್ಯಾಂಡ್, 20MM, 40MM, ಇಟ್ಟಿಗೆ ಸ್ಲೇಬ್, ಬೋಡ್ಸ್
9886526009
9620467233

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಕಾಣ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿಯೊಂದಿಗೆ ನರ್ಸ್ ಸೌಲಭ್ಯವಿದೆ. ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

SITE FOR SALE
T.Narasipura Main Road, (North & East) Adjucent 30x40, 20x30, Site For Sale
9148711155

ಮನೆ ಭೋಗ್ಯಕ್ಕಿದೆ
ಒಂದು ರೂಂ ಇರುವ (Ist Floor) ಮನೆ ಕುವೆಂಪುನಗರದ ನಿಮಿಷಾಂಬ ಬಡಾವಣೆಯಲ್ಲಿ 13ನೇ ಕ್ರಾಸ್‌ನಲ್ಲಿ (Rs. 6,00,000/-)
9448092818
9342065833

MATCH MAKERS, BRIDE/ GROOMS
ವಧು/ವರರ ಮದುವೆ ಆಯ್ಕೆಗಾಗಿ
ಎಲ್ಲಾ ಜಾತಿಯ Govt Job, Private Jobs/ Factory Jobs | ಸ್ವಂತ ಪ್ರಗತಿಪರರು ಡಾಕ್ಟರ್ / ಇಂಜಿನಿಯರ್/ಎಲ್ಲ ಡಿಗ್ರಿ ಪದವೀಧರರು/ಇತರೆ ಕರ್ನಾಟಕಾದ್ಯಂತ ನಮ್ಮಲ್ಲಿರುವ ಲಕ್ಷಾಂತರ ವಧು/ವರರು, ಮೊದಲನೇ ಮದುವೆ/ಡೈವೋರ್ಸಿಗಳು/ವಿದುರರ/ಸ್ವತಂತ್ರರು 1) ವಧು 35 ಮನೆ ಅಳಿಯ ಬೇಕು. 2) ಒಂಟಿ ಇರುವ 348 ವಧುಗಳಿಗೆ ವರಬೇಕು. ಒಂಟಿ ಇರುವ 38 ವರ್ಷದ ವಧುಗೆ ಬ್ರಾಹ್ಮಣ ವರ ಬೇಕು. (cast no bar) ವಧು ವರರಿಗೆ ಬಡವರ ವಧುಗಳ ಮದುವೆಗೆ ನೇರ ಭೇಟಿ ನೀಡಿ
7975728012

ಜಮೀನು ಮಾರಾಟಕ್ಕಿದೆ
3.10 ಎಕರೆ, ಕ್ಯಾತನಹಳ್ಳಿ ಗೌರ್ನಮೆಂಟ್ ಸ್ಕೂಲ್ ಹತ್ತಿರ ಗದ್ದಿಗೆ ಮೇನ್ ರೋಡ್ ಯಿಂದ 2 ಕಿ.ಮೀ ಇದೆ. ಹೆಚ್.ಡಿ.ಕೋಟೆ ತಾಲ್ಲೂಕು
9845742311
9900114305

WANTED
Experienced Sales Boys and Sales Girls for Textile Shop. Attractive salary + ESI, PF + Incentive. Gandhi Circle, Mysore
Mob: 9740309995
Call after 10.30 am

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

WANTED
MALE SALES EXECUTIVE (Vehicle mandatory)
TELECALLING (FEMALE)
Qulification: 10th, PUC...
Salary, incentive 12 to 35K for MAAN CERAMICS TILES SHOWROOM, Opp. SBI Bank, Vidyaranyapuram, Mysore-570 008
9113998991, 9620967801

R.V.CONSTRUCTIONS
Sanction Plans, Sanction Plans Upload (E-Submission) Construction Plans (As per Vaastu), Estimations.
REASONABLE RATES.
D.Subbaiah Road, Mysuru-570004
0821-2002063
7975110915

WANTED
Wanted a male servant for domestic work in Siddartha Layout Lyout, Mysore, Age above 40 years, Accomodation will be provided.
8073412866

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಮತ್ತು ಹಿಮ್ಮಾವು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ: 16000/-
ಸಂಪರ್ಕಿಸಬೇಕಾದ ಸಂಖ್ಯೆ
9538567819
9620667819

For Sale
1) Future Commercial Sites 60FT Road Near Defence Apartment attch Brahmins layout 'E' Block attch HD Kote Road
2)20x30 House Ramakrishna Nagar Kuvempu Nagar
3)40x60 Commercial Hootagalli
4) 40x55 East Saraswathi Puram
Prakruthi Properties
9538690359,9035990359

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ
9663466548

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

SITE FOR SALE
VIJAYANAGAR 4TH STAGE 20X30 N/F
8792207164

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ ವಿದ್ಯಾರ್ಹತೆ : 7 ರಿಂದ PUC ಮತ್ತು ITI (Fitter)
9480404036

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000ರಿಂದ 20,000 ಸಂಪಾದಿಸಿ. (ಕೋರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

5ಲಕ್ಷ ರೂದಿಂದ 10 ಲಕ್ಷದವರೆಗೆ ಮನೆ ಭೋಗ್ಯಕ್ಕೆ ಬೇಕಾಗಿದೆ
ಮೈಸೂರಿನ ವಿಜಯನಗರ, ಹೂಟಗಳ್ಳಿ, ಹೆಬ್ಬಾಳ, ಮೇಟಗಳ್ಳಿ, ಶಾರದದೇವಿನಗರ, ರಾಮಕೃಷ್ಣನಗರ, ಜೆ.ಪಿ.ನಗರ, ಬೋಗಾದಿ ವಿವೇಕಾನಂದನಗರ, ಟಿ.ಕೆ.ಲೇಔಟ್ ಈ ಭಾಗದಲ್ಲಿ ಮನೆಯನ್ನು ಭೋಗ್ಯಕ್ಕೆ ಕೊಡುವವರು ನಮ್ಮನ್ನು ಸಂಪರ್ಕಿಸಿ
9206470833 ಸುರೇಶ್

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮನೆ ಬಾಡಿಗೆಗಿದೆ
30x40 ಅಳತೆ ಪೂರ್ವಕ್ಕೆ ಬಾಗಿಲು ಗ್ರೌಂಡ್ ಫ್ಲೋರ್ 2BHK ಸೋಲಾರ್ ನೀರು, ವಾಡ್ರೂಬ್ ವ್ಯವಸ್ಥೆಯಿದೆ. ಮನೆ ನಂ. 40, ಡಾ.ರಾಧಾಕೃಷ್ಣನಗರ, ಶಿಕ್ಷಕರ ಬಡಾವಣೆ, ಮೈಸೂರು
9035085532
9901259464

HOTEL FOR LEASE/SALE
GOOD LOCATION (50 Seats), Mysore
9535601201

ಬೇಕಾಗಿದ್ದಾರೆ
1) ಸಸ್ಯಾಹಾರಿ ಅಡುಗೆಯವರು.
2) ಎಲ್ಲಾ ತರಹದ ಸಿಹಿ ತಿಂಡಿ ಮಾಡುವವರು.
ಬ್ರಾಹ್ಮಣರಿಗೆ ಆದ್ಯತೆ. ಪಾರ್ಟ್ ಟೈಮ್ ಅಥವಾ ಫುಲ್ ಟೈಮ್. ಸ್ಥಳ: ಮೈಸೂರು. ಸಂಪರ್ಕಿಸಿ:
Mob: 9845009131

Document Lost
Loss of MUDA allotment certificate, hakkupatra, swadina patra, guttige kararu patra & khatha patra & moola patra and other documents of #33, 8th Main, 2nd Cross, Saraswathipuram, Mysore-9. *Finders please contact:*
Mob: 9900598134

HOUSE FOR RENT
2 BHK for a Vegetarian family (25x30), near Andolana Circle.
Contact:
9945901991 or 9632145537
BROKERS EXCUSE

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21–9–23: ನೇಪಾಳ್ ಮುಕ್ತಿನಾಥ್, ಕಠ್ಮಂಡು, ಮನೋಕಾಮನ, ಪೋಕ್ರ, ಲುಂಬಿನಿ, ಚೋಮೋ ಸೋಮ್, ಪಶುಪತಿನಾಥ್, ಸ್ವಯಂಭುನಾಥ್, ಅಯೋಧ್ಯೆ, ಗೋರಖ್‌ಪುರ್.
30–9–23: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
11–9–23: ಪುರಿ ಜಗನ್ನಾಥ್, ಕೋಣಾರ್ಕ್, ಚಂದ್ರಭಾಗ್ ಬೀಚ್, ಭುವನೇಶ್ವರ.
7–9–23: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ
9591017782, 9964527782

40x60 ಅಳತೆಯ DTCP 'ಎ' ಖಾತೆಯುಳ್ಳ ಸೊಸೈಟಿ ಸೈಟು ಮಾರಾಟಕ್ಕಿದೆ 23 ಲಕ್ಷಗಳು ನಂಜುಂಡೇಶ್ವರ ನಗರ ಟಿ.ವಿ.ಎಸ್.ಫ್ಯಾಕ್ಟರಿ ಹತ್ತಿರ, ಮೈಸೂರು
20x30 ಅಳತೆಯ KHB ಸೈಟು ಮಾರಾಟಕ್ಕಿದೆ 9 ಲಕ್ಷಗಳು ಇಲವಾಲದ ಹತ್ತಿರ, ಮೈಸೂರು
9742198093

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
ನಾವು ನ್ಯಾಷನಲೈಸ್ ಮತ್ತು ಎನ್.ಬಿ.ಎಫ್.ಸಿ. ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಕಟ್ಟಲು, ಸೈಟ್ ಖರೀದಿಸಲು, ಮನೆ ಮೇಲೆ ಸಾಲ, ಮನೆ ಖರೀದಿಸಲು ಸಾಲ ಸೌಲಭ್ಯ ಕೊಡಿಸಲಾಗುತ್ತದೆ. 11B, 9&11A, ಮುಡಾ ಮತ್ತು ಕಾರ್ಪೋರೇಷನ್ ಖಾತೆಗಳಿಗೆ ಲೋನ್ ಮಾಡಿಸಿ ಕೊಡಲಾಗುವುದು ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಕೂಡ ಮಾಡಿಸಲಾಗುವುದು.
8088647887

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. Property Services
(Opp. Kuvempu School), S.S. Puram
93421-25252

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

AFFIDAVIT
I, Declare that as i have entered the Religious order, my name has been changed from THERESIA P.R. (Birth Certificate) to SR. RASHMI from 01-05-1984 (in all other Documents)
I do swear on oath before Notary Sri. C.R. Seetharam, Mysore on 28-08-2023
Sd/- SR.RASHMI

ಮನೆಯಿಂದಲೇ ಕೆಲಸ
ಪಾರ್ಟ್ ಟೈಂ/ಫುಲ್ ಟೈಂ ಕನ್ನಡ, ಇಂಗ್ಲೀಷ್ ಬರವಣಿಗೆ ಮೊಬೈಲ್ ಟೈಪಿಂಗ್ ಹಾಗೂ ಮೆಹಂದಿ ಪ್ಯಾಕಿಂಗ್ ಕೆಲಸ ಗಳಿಸಿ 18000/– ದಿಂದ 35000/–
7022530827

FOR JOBS
On Banking Process
Qualf: 12th STD and above)
Contact:
9620198701

SITE FOR SALE
ವಿಜಯನಗರ 4ನೇ ಹಂತ 30x40
ಹಂಚ್ಯ ಸಾತಗಳ್ಳಿ 30x40
7483656875

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಖಾಲಿ ನಿವೇಶನಗಳು ಮಾರಾಟಕ್ಕೆ ಇದೆ
30x40, 20x40, 30x35 ಖಾಲಿ ನಿವೇಶನಗಳು ಮಾರಾಟಕ್ಕೆ ಇದೆ, ಗುರೂರು ಬಸ್ ನಿಲುಗಡೆ ಹತ್ತಿರ ರಮಾಬಾಯಿನಗರ, ಮೈಸೂರು. DTCP ಅನುಮೋದಿತ (ಕಾರ್ಪೋರೇಷನ್ ಮಿತಿ)
1.5 Kms from JP Nagar Ring Road
8660105902

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000/– *ಷರತ್ತು ಅನ್ವಯ
ಸ್ವಾಮಿ ಎಂ., ಸಿವಿಲ್ ಕಂಟ್ರಾಕ್ಟರ್
9945442361
9380885787

DTCP SITES FOR SALE
30x40, 30x50 Including Commercial Sites Attached To Mysore-Kushalnagar Highway Service Road Near Yelachalli Busstop. Ilavala, Mysore
9141512156

HOUSE FOR SALE
20X30 Ground Floor & 1st Floor Duplex Rs.65 Lkhs Negotiable # 21, 2nd Stage, Srirampura Opp. Ashokpuram Railwy Station, Mysore
9538123494
9632392367

SITE FOR SALE
50x80 Commercial SITE FOR SALE on Bogadi-Gaddige main road. Price: 1.20 Cr
9738404534

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
33X40 N/W Corner Gayathri Layout Ist Stage Oppostite University Layout Near R.T.Nagar, Mysore
9141512156

We are Hiring!
TELECALLERS FOR BANKING SECTOR
FRESHER | EXPERIENCE
FINWIZZ FINANCIAL
9113247870
9538123494

SITE FOR SALE
Sri Sai Chamundeshwari Layout Near Chikkalli Mysore T.Narasipura Main Road 30x40 S/F
6364501692

WANTED
Front Office Executive (Part-Time or Full Time)
Housekeeping Staff Male/Female (With Hotel Lodge Experience)
For a Hotel (lodge) with 30 Rooms near St. Philominas Church Mysore
9845682777,9538651845

ಬೇಕಾಗಿದ್ದಾರೆ
ಸರ್ಕಾರದಿಂದ ಮಾನ್ಯತೆ ಪಡೆದಿರುವ ಪದವಿ ಹೋಂ ನರ್ಸಿಂಗ್ ಸಂಸ್ಥೆಗೆ 24 ಗಂಟೆ ಅಥವಾ ಇದ್ದು ಅಥವಾ 8 ಗಂಟೆ ಸಮಯ ವಯಸ್ಸಾದವರನ್ನು, ನೋಡಿಕೊಳ್ಳಲು ಅನುಭವ ಇರುವ ಇಲ್ಲದ ಇರುವ ಮಹಿಳೆ ಹಾಗು ಹುಡುಗಿಯರು ಮಹಿಳೆಯರು ಹೋಂ ನರ್ಸ್ ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ ಇರುತ್ತದೆ ಸಂಪರ್ಕಿಸಿ
8123630683

SITE FOR SALE
Vijayanagar IV Stage, II Phase 20x30
Broker Excuse
8867641926

ಶಿರಡಿ ಯಾತ್ರೆ
ರೈಲಿನಲ್ಲಿ (AC & Non AC) ಶಿರಡಿ ಯಾತ್ರೆ ನಿಮಗೆ ಹೊಂದಿಕೆಯಗುವ ದಿನದಲ್ಲಿ ಶನಿ ಸಿಂಗನಪುರ, ಊಟ ದರ್ಶನ ಸೇರಿರುತ್ತದೆ. *ಷರತ್ತುಗಳು ಅನ್ವಯಿಸುತ್ತದೆ.
9483587373

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್. ಸ್ಥಳ, ದಿನಾಂಕ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
7795039992

DRIVERS WANTED
Driver required for eicher 6 wheel and Ashok Leyland 10 wheel heavy, regular route Mysore - Bangalore/ Hyderabad/Goa Heavy badge must and should
7204443459
9066186769

P.G.ಯಲ್ಲಿ ಅಡುಗೆ
ಮಾಡಲು ಭಟ್ಟರು ಬೇಕಾಗಿದ್ದಾರೆ ಮತ್ತು ಮಹಿಳೆಯರು ಕೆಲಸ ಮಾಡಿಕೊಂಡು P.G.ಯಲ್ಲಿ ಉಳಿದುಕೊಳ್ಳಲು ಬೇಕಾಗಿದ್ದಾರೆ.
9845367333

HOUSE FOR SALE
Mangalore Clay roofing 24x45=1080 sqft # 3428, 3428/ 1AM-7A, Situated @ 5th Main, Tilaknagar (1st Edag), Mysore
9845246977
9886756977

NEW HOUSE FOR SALE
2BHK Muda approved 30x40 near St. Joseph School Yelwal, Mysore
9483862050
7795316995

ಬೇಕಾಗಿದ್ದಾರೆ
ಟೀಮ್ ಲೀಡರ್ ಮತ್ತು ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ಇಂಗ್ಲೀಷ್, ಹಿಂದಿ) ಸ್ಥಳ : ಚಾಮುಂಡಿಪುರಂ ಮತ್ತು ವಿ.ಆರ್.ಮೊಹಲ್ಲಾ, ಸಂಬಳ: 8000 ರಿಂದ 11000 ರವರೆಗೆ
8150005111

We are Hiring!
Open Positions:
Data Entry Operator
Interview Timings:
10:00am to 3:00pm, Vacancy: 25
Vital Records Pvt Ltd
42, JCK Industrial Park, Hebbal Industrial Area, Metagalli, Mysore
hr@centuryvitalrecords.com
0821-2332005

ಸ್ವೀಟ್ಸ್ ಅಂಡ್ ಕಾಂಡಿಮೆಂಟ್ಸ್ ಅಂಗಡಿಯೊಂದಕ್ಕೆ
ಬಿಲ್ಲಿಂಗ್ ಕಮ್ ಕ್ಯಾಶಿಯರ್ ಡಿಲಿವರಿ ಬಾಯ್ (ಆಲ್‌ರೌಂಡರ್) ಚಾಟ್ಸ್ ಮಾಡಲು ಬೇಕಾಗಿದ್ದಾರೆ.
9606116663
9606116664

ಬೇಕಾಗಿದ್ದಾರೆ
ರಿಯಲ್ ಎಸ್ಟೇಟ್ ಕಛೇರಿ ಮತ್ತು ವಧು ವರರ ವೇದಿಕೆಯಲ್ಲಿ Part Time ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. Work From Homeಗೆ ಅವಕಾಶವಿದೆ. ವಿದ್ಯಾರ್ಹತೆ SSLC & PUC
8861042449

ಮುಡಾ ಖಾತಾ ಸೈಟ್ ಸೇಲ್
30x40, ಈಸ್ಟ್ ಫೇಸಿಂಗ್, ಜ್ಞಾನಭಾರತಿ ಲೇಔಟ್, ಈಸ್ಟ್ ಫೇಸಿಂಗ್ ಬೆಲೆ : 30 ಲಕ್ಷ
ಡೈರೆಕ್ಟ್ ಓನರ್
9342123373

IMMIDIATE REQUIREMENTS
SSLC & PUC PASS CANDIDATES
CHAMARAJANAGAR BADANAGUPPE-INDUSTRIAL AREA
7676928664
7795790081

WANTED
1. Principal (3 to 5 experience in CBSE School)
2. B.A. B.Sc./M.A, MSc. with B.Ed. (Social Science, English & Mathematics)
3. BCA, MCA/M.Sc in Computer & NTT
FREE ACCOMMODATION
8722073456,8722093456
nalandakrn@gmail.com
web:sainalanda.com

ಮನೆ ಮಾರಾಟಕ್ಕಿದೆ
ನಂ.1926/ಕೆ, ಹುಲ್ಲಿನಬೀದಿ, ವಾಣಿವಿಲಾಸ ಮಾರ್ಕೆಟ್ ಹಿಂಭಾಗ, ಕೆ.ಆರ್.ಮೊಹಲ್ಲಾ, ಮೈಸೂರು ಅಳತೆ : 19x42 ಅಡಿಗಳುಳ್ಳ ಅಗ್ರಹಾರ, ಮದ್ರಾಸ್ ತಾರಸಿ
9980661768

ಮನೆಯನ್ನು ಕಟ್ಟಿಕೊಡಲಾಗುವುದು
ಒಂದು ಚದುರಕ್ಕೆ ರೂ.1,70,000/– ನಂತೆ ಎಲ್ಲಾ ನಗರ (ಸಿಟಿ) ಹಾಗೂ ಎಲ್ಲಾ ಹಳ್ಳಿಗಳಲ್ಲಿ ಕಟ್ಟಿಕೊಡಲಾಗುವುದು
9620377533

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಡಾ. ಗುರೂಜಿ
9448229184
7899625268

ಉದ್ಯೋಗವಕಾಶ
ನಿಮ್ಮ ಅದ್ಭುತ ಜೀವನಕ್ಕೆ ಒಂದು ಸುವರ್ಣಾವಕಾಶ ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿರುವ ರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗವಕಾಶವಿದೆ. ರಾಜ್ಯ ಸರ್ಕಾರಿ/ಕೇಂದ್ರಸರ್ಕಾರಿ ನಿವೃತ್ತ/ಸ್ವಯಂ ನಿವೃತ್ತಿ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ, ಆಸಕ್ತಿಯುಳ್ಳ ಅಭ್ಯರ್ಥಿಗಳಿಗೆ ಅವಕಾಶವಿದೆ.
9110676257
9739239004

ಬೇಕಾಗಿದೆ
ಹೆಸರಾಂತ ಕೊರಿಯರ್ ಸಂಸ್ಥೆಯಲ್ಲಿ ಪಾರ್ಸಲ್ ಡೆಲಿವರಿ ಮಾಡಲು ಕ್ಲೋಸಿಂಗ್ ಬಾಡಿ ಹೊಂದಿರುವ TATA-ACE ವಾಹನ ಬೇಕಾಗಿರುತ್ತದೆ.

ಬೇಕಾಗಿದ್ದಾರೆ
ಬೆಳಿಗ್ಗೆ 9.00am to 2pm ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಹೊಂದಿರುವ ಒಬ್ಬ ಹುಡುಗ ಬೇಕಾಗಿದ್ದಾರೆ.
9449870898
9449871790

ಸುವರ್ಣ ಯಾತ್ರ
1) ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು 8/09/23
2) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 21/09/23
3) 2 ಜ್ಯೋತಿರ್ಲಿಂಗ ಸೇರಿ ಕಾಶಿ ಪ್ರವಾಸ 7 ದಿನಗಳು 07/10/23
4) ಭೂತಾನ್ ಪ್ರವಾಸ 6 ದಿನಗಳು 12/10/23
9008381022
9019462508

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಇಂದು ಕೆಡಿಪಿ ಸದಸ್ಯ ಸುನೀಲ್ ಬೋಸ್ ಜನುಮ ದಿನ

ಬೃಹತ್ ಉದ್ಯೋಗ ಮೇಳ, ಆರೋಗ್ಯ ತಪಾಸಣಾ ಶಿಬಿರ

ತಿ.ನರಸೀಪುರ,ಆ.30– ಕಾಂಗ್ರೆಸ್ ಯುವ ಮುಖಂಡರಾದ ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರ 41ನೇ ವರ್ಷದ ಹುಟ್ಟುಹಬ್ಬವನ್ನು ಗುರುವಾರ(ಆ.31) ಬೃಹತ್ ಉದ್ಯೋಗ ಮೇಳ ಹಾಗೂ ಆರೋಗ್ಯ ತಪಾಸಣೆಯೊಂದಿಗೆ ಆಚರಿಸಲಾಗುತ್ತಿದ್ದು, ಉದ್ಯೋಗ ಮೇಳಕ್ಕೆ ಎಪಿಎಂಸಿ ಆವರಣ ಹಾಗೂ ಆರೋಗ್ಯ ತಪಾಸಣೆ ಶಿಬಿರಕ್ಕೆ ಗುರು ಭವನ ಸಿದ್ಧಗೊಂಡಿದೆ.

ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಕೇಂದ್ರೀಕರಿಸಿ ತಾಲೂಕು ಕೇಂದ್ರವಾದ ನರಸೀಪುರ ಪಟ್ಟಣದಲ್ಲಿ ಗ್ರಾಮೀಣ ಪ್ರದೇಶಗಳ ವಿದ್ಯಾವಂತ ಯುವಕ, ಯುವತಿಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ರಾಜಕೀಯ ಮುಖಂಡರೊಬ್ಬರ ಹುಟ್ಟುಹಬ್ಬದ ಪ್ರಯುಕ್ತ ಪ್ರಥಮ ಬಾರಿಗೆ ಉದ್ಯೋಗ ಮೇಳವನ್ನು ಉದ್ಯೋಗಧಾತ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಲಾಗಿದೆ.

ನಂಜನಗೂಡು ರಸ್ತೆಯಲ್ಲಿರುವ ಎಪಿಎಂಸಿ ಆವರಣದಲ್ಲಿನ ವಿಶಾಲವಾದ ಪ್ರದೇಶದಲ್ಲಿ ಬೃಹತ್ ಉದ್ಯೋಗ ಮೇಳಕ್ಕೆ ಭವ್ಯವಾದ ವೇದಿಕೆಯನ್ನು ಹಾಕಲಾಗಿದೆ. ನೂರಾರು ಪ್ರತಿಷ್ಠಿತ ಉದ್ಯೋಗ ನೀಡುವ ಸಂಸ್ಥೆಗಳು ನೇಮಕಾತಿ ಪ್ರಕ್ರಿಯೆಯನ್ನು ನಡೆಸುವುದರಿಂದ ನೂರಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಅಣಿಗೊಳಿಸಲಾಗಿದೆ. ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಎರಡು ಜಿಲ್ಲೆಗಳ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರು ಮತ್ತು ಗಣ್ಯರು ಭಾಗವಹಿಸಲಿದ್ದಾರೆ.



ಸುನೀಲ್ ಬೋಸ್ ಯುವ ಬ್ರಿಗೇಡ್ ವತಿಯಿಂದಲೂ ನೆಚ್ಚಿನ ಯುವ ನಾಯಕನ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲು ಯುವಕರ ತಂಡ ಸಿದ್ಧತೆ ಮಾಡಿಕೊಂಡಿದ್ದು, ಗುರುಭವನದಲ್ಲಿ ಆ.31ರ ಬೆಳಗ್ಗೆ 9 ಗಂಟೆಗೆ ಸಾಮಾನ್ಯ ಆರೋಗ್ಯ ತಪಾಸಣೆ ಸೇರಿದಂತೆ ಬೃಹತ್ ಕಣ್ಣಿನ ತಪಾಸಣಾ, ಮೂಳೆ ಮತ್ತು ಎಲುಬು ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಎ.ಆರ್ ಮತ್ತು ಕೆಆರ್. ಆಸ್ಪತ್ರೆಯ ನುರಿತ ವೈದ್ಯರ ತಂಡದ ಸಹಯೋಗದೊಂದಿಗೆ ಬೃಹತ್ ಆರೋಗ್ಯ ತಪಾಸಣೆ ಶಿಬಿರವನ್ನು ನಡೆಸಲಾಗುತ್ತಿದೆ.

ಲೋಕಸಭೆ ಪ್ರಬಲ ಆಕಾಂಕ್ಷಿ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪುತ್ರರಾಗಿರುವ ಸುನೀಲ್ ಬೋಸ್ ಅವರು ಮುಂಬರುವ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸಲು ಆಕಾಂಕ್ಷೆ ಹೊಂದಿದ್ದು, ರಾಜಕೀಯವಾಗಿ ಸಂಘಟನೆಯ ಶಕ್ತಿ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಲು ಹುಟ್ಟುಹಬ್ಬದ ನಿಮಿತ್ತ ಉದ್ಯೋಗ ಮೇಳ ಹಾಗೂ ಆರೋಗ್ಯ ತಪಾಸಣೆ ಶಿಬಿರದಂತಹ ಸಮಾಜ ಸೇವಾ ಕಾರ್ಯಕ್ರಮಗಳನ್ನು ಬೃಹತ್ ಮಟ್ಟದಲ್ಲಿ ಹಮ್ಮಿಕೊಂಡಿದ್ದಾರೆ ಎನ್ನಲಾಗಿದೆ. ನಂಜನಗೂಡು ಉಪಚುನಾವಣೆ ಹಾಗೂ ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ನರಸೀಪುರ ಕ್ಷೇತ್ರದಲ್ಲಿ ಟಿಕೆಟ್ ಕೈತಪ್ಪಿರುವ ಹಿನ್ನೆಲೆಯಲ್ಲಿ ಮುಂದಿನ ಲೋಕಸಭೆ ಚುನಾವಣೆಯಲ್ಲಿ ವರಿಷ್ಠರು ಕೈ ಹಿಡಿದು ಚಾಮರಾಜನಗರದಲ್ಲಿ ಕಣಕ್ಕಿಳಿಸುವರು ಎಂಬ ವಿಶ್ವಾಸವನ್ನು ಹೊಂದಿರುವ ಸುನಿಲ್ ಬೋಸ್ 8 ತಿಂಗಳು ಮುಂಚಿತವಾಗಿಯೇ ಚುನಾವಣೆ ಅಖಾಡಕ್ಕಿಳಿಯಲು ಸಜ್ಜಾಗಿದ್ದಾರೆ. ಯುವ ನಾಯಕನನ್ನು ಸಂಭಾವ್ಯ ಲೋಕಸಭಾ ಸದಸ್ಯರನ್ನಾಗಿ ಮಾಡಲು ಬೆಂಬಲಿಗರು ಹಾಗೂ ಪಕ್ಷದ ಕಾರ್ಯಕರ್ತರು ಹಗಲಿರುಳು ದುಡಿಯುತ್ತಿದ್ದಾರೆ.

ಉದ್ಯೋಗ ಮೇಳ ಯುವ ಜನತೆಗೆ ಉಪಯೋಗವಾಗಲಿ



ಗ್ರಾಮೀಣ ಪ್ರದೇಶಗಳ ವಿದ್ಯಾವಂತ ಯುವ ಜನತೆಗೆ ಉದ್ಯೋಗವಕಾಶಗಳನ್ನು ಕಲ್ಪಿಸುವ ಉದ್ಯೋಗ ಮೇಳ ಸುನಿಲ್ ಬೋಸ್ ಹುಟ್ಟುಹಬ್ಬಕ್ಕೂ ಮಿಗಿಲಾದದ್ದು. ನಗರ ಪ್ರದೇಶಗಳಲ್ಲಿರುವ ಪ್ರತಿಷ್ಠಿತ ಖಾಸಗಿ ವಲಯದ ಕಂಪನಿಗಳು ತಾಲೂಕು ಮಟ್ಟಕ್ಕೆ ಆಗಮಿಸಿ ಸ್ಥಳೀಯವಾಗಿ ನೇಮಕಾತಿ ಮಾಡಿಕೊಳ್ಳುವುದು ಬಹಳ ಉಪಯುಕ್ತವಾದ ಕೆಲಸವಾಗಿದೆ ಆದ್ದರಿಂದ ಉದ್ಯೋಗ ಮೇಳ ಯುವ ಜನತೆಗೆ ಸದ್ಬಳಕೆಯಾಗಲಿ.

–**ಡಾ.ಹೆಚ್.ಸಿ.ಮಹದೇವಪ್ಪ,** ಜಿಲ್ಲಾ ಉಸ್ತುವಾರಿ ಸಚಿವ

ಪ್ರತಿಯೊಬ್ಬರಿಗೂ ಉದ್ಯೋಗ ಲಭ್ಯವಿದೆ



ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಬಿಇ, ಬಿ.ಫಾರ್ಮ, ಡಿ.ಫಾರ್ಮ, ನರ್ಸಿಂಗ್, ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎಂ, ಎಂಬಿಎ, ಎಂಕಾಂ, ಎಂಎಸ್‌ಸಿ, ಎಂಎಸ್‌ಡಬ್ಲ್ಯೂ ಹಾಗೂ ಇನ್ನಿತರ ಯಾವುದೇ ಪದವಿ ಪಡೆದಿರುವ ಯುವಕ, ಯುವತಿಯರು ಉದ್ಯೋಗ ಆಕಾಂಕ್ಷಿಗಳಾಗಿ ಭಾಗವಹಿಸಿ ಉದ್ಯೋಗ ಮೇಳವನ್ನು ಯಶಸ್ವಿಗೊಳಿಸಬೇಕು.

–**ಸುನೀಲ್ ಬೋಸ್,** ಕೆಡಿಪಿ ಸದಸ್ಯ

ಹುಣಸೂರು ಪಿಎಲ್‌ಡಿ ಬ್ಯಾಂಕಿಗೆ 11 ಮಂದಿ ಅವಿರೋಧ ಆಯ್ಕೆ



ಹುಣಸೂರು, ಅ.30– ತಾಲೂಕಿನ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಎಂಬ ಹೆಗ್ಗಳಿಕೆ ಹೊಂದಿರುವ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ (ಪಿಎಲ್‌ಡಿ) ಬ್ಯಾಂಕಿಗೆ 11 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿ ಚುನಾವಣೆಯಲ್ಲಿ ಉಳಿದ ಮೂರು ಸ್ಥಾನಗಳಿಗೆ ಚುನಾಯಿತರಾಗಿದ್ದಾರೆ.

ಬ್ಯಾಂಕಿನ ಮುಂದಿನ ಐದು ವರ್ಷಗಳ ಆಡಳಿತ ಮಂಡಳಿಯ 14 ನಿರ್ದೇಶಕರ ಆಯ್ಕೆಗೆ ಆ.25 ರಂದು ಚುನಾವಣೆ ನಿಗದಿಯಾಗಿತ್ತು. ಮೂರು ಕ್ಷೇತ್ರಗಳಲ್ಲಿ ಮಾತ್ರ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಚೆಲ್ಲಹಳ್ಳಿ ಕ್ಷೇತ್ರದಿಂದ ರುದ್ರೇಗೌಡ 44 ಪಡೆದು ಜಯಶಾಲಿಯಾದರೆ, ಪ್ರತಿಸ್ಪರ್ಧಿ ತಿಪ್ಪೂರು ನಾಗೇಗೌಡ 26 ಮತಗಳನ್ನು ಪಡೆದು ಪರಾಭವಗೊಂಡರು.

ಬಿಳಿಕೆರೆ ಕ್ಷೇತ್ರದಿಂದ ದೇವರಾಜ್ 30 ಮತ ಪಡೆದು ಜಯಗಳಿಸಿದರೆ ಆದರೆ ರಾಮೇಗೌಡ 28 ಮತ ಪಡೆದು ಪರಾಭವಗೊಂಡರು. ವಾರಂಚಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ ಹೆಚ್.ಎಂ. ಚಂದ್ರಶೇಖರ್ ಹಾಗೂ ದೊಡ್ಡಹೆಜ್ಜೂರು ನಟರಾಜ್ ಸ್ಪರ್ಧೆ ಮಾಡಿದ್ದು ಶಾಸಕ ಜಿ.ಡಿ.ಹರೀಶ್‌ಗೌಡರು ಮಾತನಾಡಿ ನಟರಾಜ್ ತಟಸ್ಥವಾಗಿ ಉಳಿಯುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಚಲಾವಣೆಗೊಂಡ 24 ಮತ ಚಂದ್ರಶೇಖರ್ ಪಡೆದುಕೊಂಡು ಜಯಶಾಲಿಯಾದರು.

ಹನಗೋಡು ಕ್ಷೇತ್ರದಿಂದ ಶ್ರೀನಿವಾಸ್, ಹಿರಿಕ್ಯಾತನಹಳ್ಳಿ ಕ್ಷೇತ್ರದಿಂದ ಗಾಯಿತ್ರಿ, ಧರ್ಮಾಪುರದಿಂದ ಲಕ್ಷ್ಮಮ್ಮ ನರಸೇಗೌಡ, ಕೊಮ್ಮೇಗೌಡನಕೊಪ್ಪಲು ಮಹೇಂದ್ರ, ಹುಣಸೂರು ಟೌನ್ ಕುಮಾರ್, ಗವಡಗೆರೆ ರಾಮಕೃಷ್ಣೇಗೌಡ, ತೆಂಕಲ ಕೊಪ್ಪಲು ಹೇಮಂತ್ ಕುಮಾರ್, ಕಸಬಾ ಕ್ಷೇತ್ರದಿಂದ ಉದಯ್, ರಂಗಯ್ಯನಕೊಪ್ಪಲು ಸತ್ಯನಾರಾಯಣ್, ಹಂದನಹಳ್ಳಿ ಬಿ.ಎಸ್.ಚಿಕ್ಕಣ್ಣ, ಸಾಲಗಾರರಲ್ಲದ ಕ್ಷೇತ್ರದಿಂದ ನಗರಸಭಾ ಮಾಜಿ ಸದಸ್ಯರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಸಹಕಾರ ಸಹಾಯಕ ನಿಬಂಧಕ ಹರೀಶ್ ಕರ್ತವ್ಯ ನಿರ್ವಹಿಸಿದರು.

ಶಾಸಕ ಹರೀಶ್‌ಗೌಡ ಮಾತನಾಡಿ ಬ್ಯಾಂಕ್‌ನಲ್ಲಿ ಚುನಾವಣೆ ನಡೆಸದೆ ಅವಿರೋಧವಾಗಿ ಆಯ್ಕೆ ಮಾಡಬೇಕು ಎಂದು ನನ್ನ ಅಭಿಪ್ರಾಯವಾಗಿತ್ತು. ಕೆಲವು ಆಕಾಂಕ್ಷಿಗಳ ಒಪ್ಪದ ಕಾರಣ ಚುನಾವಣೆ ನಡೆಸಬೇಕಾಯಿತು. ಸೋಲು-ಗೆಲುವು ಸಾಮಾನ್ಯ ಯಾರು ಬೇಸರಿಸದೆ ಬ್ಯಾಂಕ್ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಹೇಳಿದರು. ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಸತೀಶ್ ಪಾಪಣ್ಣ, ಜಿಪಂ ಮಾಜಿ ಸದಸ್ಯ ಸುರೇಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಕೆಂಪೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಬಿಳಿಕೆರೆ ಮಧು ಮತ್ತಿತರರು ಉಪಸ್ಥಿತರಿದ್ದರು



ಹಾಡ್ಯ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೀಲಕಂಠಪ್ಪ ಉಪಾಧ್ಯಕ್ಷ

ಮಲ್ಕುಂಡಿ, ಆ.30– ಸಮೀಪದ ಹಾಡ್ಯ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಎಂ.ಪಿ.ನೀಲಕಂಠಪ್ಪ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಮುದ್ದಣ್ಣ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಕಡ್ಡಜಟ್ಟಿ ಗ್ರಾಮದ ಎಂ.ಪಿ.ನೀಲಕಂಠಪ್ಪ ಒಬ್ಬರೇ ನಾಮಪತ್ರ ಸಲ್ಲಿಸಿದ್ದು ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಸಾದ್ ಘೋಷಣೆ ಮಾಡಿದರು.

ಅಧ್ಯಕ್ಷ ಶಂಕರ್, ಬಸವರಾಜ್, ಶೇಖರಪ್ಪ, ಪುಟ್ಟದಾಸಯ್ಯ, ತಡೂರು ನಾಯಕ, ನಾಗಣ್ಣ, ಶಿವಣ್ಣ, ದೊಡ್ಡಸಿದ್ದೇಗೌಡ, ನಾಗಮ್ಮ, ಪದ್ಮ, ಸಿಇಓ ವೆಂಕಟರಾಜಯ್ಯ ಹಾಜರಿದ್ದರು

ಚೆನ್ನಮ್ಮ ನಿಧನ



ನಗರ್ಲೆ, ಆ.30– ನಂಜನಗೂಡು ತಾಲೂಕು ನಗರ್ಲೆ ಗ್ರಾಮದ ಗುರುಕಾರ್ ಲೇ॥ ಎನ್.ಎಸ್. ನಂಜಪ್ಪರವರ ಧರ್ಮಪತ್ನಿ ಶ್ರೀಮತಿ ಚೆನ್ನಮ್ಮ(97)ರವರು ಬುಧವಾರ ಸ್ವಗೃಹದಲ್ಲಿ ನಿಧನರಾದರು.

ಮೃತರು 7 ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ನಗರ್ಲೆ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ವಸಂತಕ್ಕೆ ಕಾಲಿಡುತ್ತಿರುವ ಸ್ನೇಹಜೀವಿ, ಸಮಾಜ ಸೇವಕ, ತಿ.ನರಸೀಪುರ
ವಿಧಾನಸಭಾ ಕ್ಷೇತ್ರದ ಯುವನೇತಾರ, ಕಾಂಗ್ರೆಸ್ ಯುವಮುಖಂಡರಾದ
41 ನೇ
ಸುನೀಲ್ ಬೋಸ್
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ದೇವರು ಇವರಿಗೆ ಇನ್ನೂ ಹೆಚ್ಚಿನ ಅಧಿಕಾರ ಸ್ಥಾನ ದೊರಕಿಸಿ
ಕೊಡಲಿ ಹಾಗೂ ಅವರಿಗೆ ಆರೋಗ್ಯ ಭಾಗ್ಯ ಕರುಣಿಸಲಿ ಎಂದು
ಪ್ರಾರ್ಥಿಸುತ್ತೇವೆ.
ಎ.ಎನ್. ಸ್ವಾಮಿ
ಉಪಾಧ್ಯಕ್ಷರು, ಕಾಂಗ್ರೆಸ್ ಹಿಂದುಳಿದ ವರ್ಗಗಳ
ವಿಭಾಗ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರರು, ಚಾಮನಹಳ್ಳಿ
ಟಿ.ಎಸ್. ಚೇತನ್


ಸುನೀಲ್ ಬೋಸ್ ರವರಿಗೆ
ಹುಟ್ಟು ಹಬ್ಬದ
ಶುಭಾಶಯಗಳು
ರಾಕೇಶ್ ಪಾಪಣ್ಣ
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು,
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
9060363617

ಮೈಸೂರು ಮಿತ್ರ

ಎಕ್ಸ್‌ಟ್ರಾ ಇನ್ನಿಂಗ್ಸ್

ಗುರುವಾರ 31 ಆಗಸ್ಟ್ 2023

ಮೈಸೂರಲ್ಲಿ 'ಗೃಹಲಕ್ಷ್ಮಿ'ಯರ ಸಡಗರ

ಸಾಂಸ್ಕೃತಿಕ ನಗರಿಯಲ್ಲಿ ಹಬ್ಬದ ವಾತಾವರಣ



ಮೈಸೂರು, ಆ.30(ಜಿಎ)–ಗೃಹಲಕ್ಷ್ಮೀ ಯೋಜನೆ ಚಾಲನೆ ಕಾರ್ಯಕ್ರಮದಲ್ಲಿ ಭಾಗ ವಹಿಸಲು ಮೈಸೂರಿಗೆ ಲಕ್ಷಾಂತರ ಮಹಿಳೆಯರು ಆಗಮಿಸಿದ್ದರು. ನಗರದ ಹೃದಯ ಭಾಗದಲ್ಲಿ ಎಲ್ಲಿ ನೋಡಿದರೂ ಮಹಿಳೆಯರೇ ತಂಡೋಪ ತಂಡವಾಗಿ ಕಣ್ಣಿಗೆ ಬೀಳುತ್ತಿದ್ದರು. ಕಾರ್ಯಕ್ರಮ ನಡೆದ ಮಹಾರಾಜ ಕಾಲೇಜು ಮೈದಾನದ ಅಜು ಬಾಜಲ್ಲಿ, ರಸ್ತೆ, ವೃತ್ತಗಳಲ್ಲಿ ತಂಡೋಪ ತಂಡವಾಗಿ ನೆರೆದಿದ್ದರು.

ತೀವ್ರ ತಪಾಸಣೆ: ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಸೇರಿದಂತೆ ರಾಜ್ಯ ವಿವಿಧ ಭಾಗಗಳಿಂದ ಸರ್ಕಾರ ವ್ಯವಸ್ಥೆ ಮಾಡಿದ್ದ ಎರಡು ಸಾವಿರ ಬಸ್‌ಗಳಲ್ಲಿ ಆಗಮಿಸಿ, ಮೈದಾನದ ಮುಂಭಾಗ ಇಳಿದು, ವೇದಿಕೆಯತ್ತ ಬರುತ್ತಿದ್ದಂತೆ ವೇದಿಕೆಯ ಎರಡು ದ್ವಾರಗಳಲ್ಲಿ ಪೊಲೀಸ್ ಇಲಾಖೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಪ್ರತಿಯೊಬ್ಬರನ್ನು ತೀವ್ರ ತಪಾಸಣೆ ನಡೆಸಿ, ವೇದಿಕೆಯತ್ತ ಕಳುಹಿಸುತ್ತಿದ್ದರು. ಈ ವೇಳೆ ಪುರುಷರು ತಮ್ಮ ಜೇಬುಗಳಲ್ಲಿಟ್ಟು ಕೊಂಡಿದ್ದ ಬೀಡಿ, ಸಿಗರೇಟ್ ಮತ್ತು ಬೆಂಕಿ ಪೊಟ್ಟಣಗಳನ್ನು ಪೊಲೀಸರು ವಶಪಡಿಸಿಕೊಂಡರು.

ಆಕರ್ಷಕ ಮುಖ್ಯ ದ್ವಾರ: ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲರೂ ಪ್ರವೇಶಿಸುವ ಪ್ರವೇಶ ದ್ವಾರವನ್ನು ಮೈಸೂರು ಅಂಬಾವಿಲಾಸ ಅರಮನೆ ಮಾದರಿಯಲ್ಲಿ ನಿರ್ಮಿಸಿದ್ದು, ಎಲ್ಲರನ್ನು ಆಕರ್ಷಿಸಿತು. ವೇದಿಕೆಯ ಮುಖ್ಯ ದ್ವಾರ ಬಳಿ ಆಗಮಿಸಿದ್ದ ಮಹಿಳೆಯರು ಮತ್ತು ಪುರುಷರು ಫೋಟೋ ಕ್ಲಿಕಿಸಿಕೊಳ್ಳುವ ಮೂಲಕ ಸಂತಸಪಟ್ಟರು.

ಸೂಕ್ತ ವ್ಯವಸ್ಥೆ: ಗೃಹಲಕ್ಷ್ಮೀ ಯೋಜನೆ ಚಾಲನೆಯ ಕಾರ್ಯಕ್ರಮವೂ ಅಚ್ಚುಕಟ್ಟಾಗಿ ನೆರವೇರಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ರಾಜ್ಯ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸೂಕ್ತ ವ್ಯವಸ್ಥೆ ಕಲ್ಪಿಸಲು ಸೂಚಿಸಿದ್ದರು ಅದರಂತೆ ಇಂದಿನ ಕಾರ್ಯಕ್ರಮದಲ್ಲಿ ತಾತ್ಕಾಲಿಕ ಶೌಚಾಲಯ, ಕುಡಿಯುವ ನೀರಿನ ಘಟಕ, ಆಂಬುಲೆನ್ಸ್ ಮತ್ತು ಅಗ್ನಿಶಾಮಕ ದಳದ ವಾಹನ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಲಾಗಿತು.

ಕಾರ್ಯಕ್ರಮ ವೀಕ್ಷಿಸಲು ಹರಸಾಹಸ: ನಗರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ವೀಕ್ಷಿಸಲು 1.50 ಲಕ್ಷ ಮಂದಿಗೆ ಆಸನ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳಲು ರಾಜ್ಯ ವಿವಿಧ ಭಾಗಗಳಿಂದ ಆಸನ ವ್ಯವಸ್ಥೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಜನರು ಆಗಮಿಸಿದ್ದ ಹಿನ್ನೆಲೆಯಲ್ಲಿ ಆಸನ ಭರ್ತಿಯಾದ ನಂತರ ಪೊಲೀಸರು ಮೈದಾನದ ಗೇಟ್‌ಗಳನ್ನು ಬಂದ್ ಮಾಡಿದ್ದರು. ತಮ್ಮ ನೆಚ್ಚಿನ ನಾಯಕರ ಭೇಟಿಗೆ ಜನರು ಹರಸಾಹಸಪಟ್ಟರು. ಬಹುತೇಕ ಮಹಿಳೆಯರು ಮೈದಾನದ ಸುತ್ತಲೂ ಇದ್ದ ರಸ್ತೆಗಳಲ್ಲಿ ಕುಳಿತುಕೊಂಡರೆ, ಪುರುಷರು ಮೈದಾನದ ಸುತ್ತಲೂ ಇದ್ದ ಕಬ್ಬಿಣದ ತಡೆಗೋಡೆಯನ್ನು ಏರಿ ವೇದಿಕೆಗೆ ಧಾವಿಸಿ, ಕಾರ್ಯಕ್ರಮ ವೀಕ್ಷಿಸಿದರು.

ಮಹಿಳೆಯರ ಭರ್ಜರಿ ಡಾನ್ಸ್: ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಲು ಡೋಳು ಕುಣಿತ ಏರ್ಪಡಿಸಲಾಗಿತ್ತು ಬಸ್‌ಗಳ ಮೂಲಕ ಆಗಮಿಸಿ, ವೇದಿಕೆಯತ್ತ ಬರುತ್ತಿದ್ದಂತೆ ಡೋಳು ಕುಣಿತದ ಜೋಶ್‌ನಿಂದ ಅವರೊಡನೆ ಸೇರಿಕೊಂಡು ಭರ್ಜರಿ ಡಾನ್ಸ್ ಮಾಡಿದ್ದು, ಎಲ್ಲರ ಗಮನ ಸೆಳೆಯಿತು.

ಶಿಸ್ತು ಪಾಲನೆ: ಸುಮಾರು ಎರಡು ಸಾವಿರ ಬಸ್‌ಗಳ ಮೂಲಕ ಮೈಸೂರಿಗೆ ತಂಡೋಪ ತಂಡವಾಗಿ ಆಗಮಿಸಿದ್ದ ಮಹಿಳೆಯರು ಯಾವುದೇ ಗೊಂದಲವಿಲ್ಲದೆ, ಮಾಡಿಕೊಳ್ಳದೆ. ತಮ್ಮ ತಂಡಕ್ಕೆ ನೇಮಿಸಿದ್ದ ನೋಡಲ್ ಅಧಿಕಾರಿಗಳ ಸೂಚನೆಯಂತೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮವರು ಗುಂಪಿನಿಂದ ತಪ್ಪಿಸಿಕೊಳ್ಳದಂತೆ ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡು ರಕ್ಷಣೆ ಮಾಡಿಕೊಳ್ಳುತ್ತ ಶಿಸ್ತು ಪಾಲನೆ ಮಾಡಿದರು. ಅಂತೂ ಬಹು ನಿರೀಕ್ಷಿತ 'ಗೃಹಲಕ್ಷ್ಮಿ' ಕಾರ್ಯಕ್ರಮ ನಿರೀಕ್ಷೆಗೂ ಮೀರಿ ಯಶಸ್ವಿಯಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕರು ಹರ್ಷಚಿತ್ತರಾಗಿದ್ದರು.

ಮೈಸೂರು ಮಲ್ಲಿಗೆ ಸುವಾಸನೆಗೆ ಫಿದಾ ಆದ ರಾಹುಲ್ ಗಾಂಧಿ

ಮೈಸೂರು, ಆ.30(ಎಂಟಿವೈ)– ಗೃಹಲಕ್ಷ್ಮಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಸಂಸದ ಹಾಗೂ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, 'ಮೈಸೂರು ಮಲ್ಲಿಗೆ' ಸುವಾಸನೆಗೆ ಫಿದಾ ಆದರು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಮುಖ ಗಣ್ಯರಿಗೆ ಮೈಸೂರು ಮಲ್ಲಿಗೆಯ ಹಾರವನ್ನು ಹಾಕಿ ಸ್ವಾಗತಿಸಲಾಯಿತು. ವೇದಿಕೆಯಲ್ಲಿ ಮೊದಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸ್ವಾಗತ ಕೋರಲಾಯಿತು. ಈ ವೇಳೆ ಖರ್ಗೆ ಅವರಿಗೆ ಮಲ್ಲಿಗೆ ಹಾರ ಹಾಕಲಾಯಿತು. ಸನ್ಮಾನ ಮಾಡುವಾಗ ಪಕ್ಕದಲ್ಲಿಯೇ ನಿಂತಿದ್ದ ರಾಹುಲ್ ಗಾಂಧಿ, ಸ್ವಲ್ಪ ಹೊತ್ತಿನ ನಂತರ ಖರ್ಗೆ ಅವರಲ್ಲಿ ಸುವಾಸನೆ ಕಂಪಿನ ಬಗ್ಗೆ ಪ್ರಸ್ತಾಪಿಸಿದರು. ಖರ್ಗೆ ಅವರು ಮಲ್ಲಿಗೆ ಹೂವಿನ ಬಗ್ಗೆ ವಿವರಿಸಿ, ಹಾರವನ್ನು ರಾಹುಲ್ ಗಾಂಧಿ ಅವರ ಮೂಗಿನ ಬಳಿ ಕೊಂಡೊಯ್ದರು. ಈ ವೇಳೆ ಮಲ್ಲಿಗೆಯ ಸುವಾಸನೆಗೆ ಫಿದಾ ಆದ ರಾಹುಲ್ ಗಾಂಧಿ, ಎರಡು ಬಾರಿ ಕಂಪು ಆಸ್ವಾದಿಸಿ ತಲೆದೂಗಿದರು.

ಸಿದ್ದರಾಮಯ್ಯ ಕೈಗೆ ಮುತ್ತಿಟ್ಟ ಫಲಾನುಭವಿ ಮಹಿಳೆ

ಮೈಸೂರು,ಆ.30 (ಎಂಟಿವೈ)– 'ಗೃಹಲಕ್ಷ್ಮಿ' ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ 10 ಆಯ್ದ ಮಹಿಳಾ ಫಲಾನುಭವಿಗಳಿಗೆ ಸಾಂಕೇತಿಕವಾಗಿ 2 ಸಾವಿರ ರೂ. ಚೆಕ್ ವಿತರಿಸಲಾಯಿತು. ಈ ವೇಳೆ ವೇದಿಕೆಯಲ್ಲಿದ್ದ ಗಣ್ಯರೊಂದಿಗೆ ಫೋಟೋ ತೆಗೆಸಿಕೊಳ್ಳಲು ಗೃಹಿಣಿಯರು ಸಾಲುಗಟ್ಟಿ ನಿಂತಿದ್ದರು. ವಾಪಸಾಗುವ ವೇಳೆ ಇಬ್ಬರು ಫಲಾನುಭವಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈಗೆ ನಮಸ್ಕರಿಸಿದರೆ, ಮತ್ತೊರ್ವ ಫಲಾನುಭವಿ ಮಹಿಳೆ, ಸಿದ್ದರಾಮಯ್ಯ ಅವರ ಕೈಗೆ ಮುತ್ತಿಟ್ಟು ಕೃತಜ್ಞತೆ ಸಲ್ಲಿಸಿದರು.

ಸಿದ್ದರಾಮಯ್ಯ ಹೆಸರೇಳಿದಾಗಲೆಲ್ಲಾ ಸಿಳ್ಳೆ, ಹರ್ಷೋದ್ಗಾರ

ಮೈಸೂರು,ಆ.30(ಎಂಟಿವೈ)– ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಹೆಸರು ಹೇಳುತ್ತಿದ್ದಂತೆ ಸಭಿಕರು ಸಿಳ್ಳೆ, ಕರತಾಡನ, ಘೋಷಣೆ, ಹರ್ಷೋದ್ಗಾರದ ಮೂಲಕ ತಮ್ಮ ನಿಷ್ಠೆ ಮೆರೆದರು.

ಕಾರ್ಯಕ್ರಮದಲ್ಲಿ ಸ್ವಾಗತ ಕೋರುವ ವೇಳೆಯೂ ವಿವಿಧ ಗಣ್ಯರ ಹೆಸರು ಹೇಳಿದಾಗ ಸಭಿಕರಿಂದ ಚಪ್ಪಾಳೆ ಸದ್ದು ಕೇಳಿ ಬಂದರೂ, ಸಿದ್ದರಾಮಯ್ಯ ಅವರ ಹೆಸರು ಹೇಳುತ್ತಿದ್ದಂತೆ ಚಪ್ಪಾಳೆಯೊಂದಿಗೆ ಕೇಕೆ ಹಾಗೂ ಸಿಳ್ಳೆಯ ಸದ್ದು ಕಿವಿಗಡಚಿಕ್ಕುವಂತಿತ್ತು. ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದ ನಂತರ ಕಾರ್ಯಕ್ರಮದ ಅಂತಿಮ ಘಟ್ಟದಲ್ಲಿ ಮಾತನಾಡಲು ಸಿಎಂ ಸಿದ್ದರಾಮಯ್ಯ ಅವರನ್ನು ಆಹ್ವಾನಿಸುತ್ತಿದ್ದಂತೆ ಮತ್ತೆ ಚಪ್ಪಾಳೆ, ಶಿಳ್ಳೆ ಹಾಗೂ ಕೇಕೆಯ ಭೋರ್ಗರೆತವಾಯಿತು. ಈ ವೇಳೆ ಸಿದ್ದರಾಮಯ್ಯ ಎಂದಿನಂತೆ ತಮ್ಮದೇ ಶೈಲಿಯಲ್ಲಿ ಸಿಳ್ಳೆ ಹೊಡೆಯುವವರನ್ನು ಸುಮ್ಮನಿರಿಸಿ, ಮಾತು ಮುಂದುವರೆಸಿದರು.

ಅತ್ತ ಕಾರ್ಯಕ್ರಮ, ಇತ್ತ 'ಗೃಹಲಕ್ಷ್ಮಿ'ಯರ ನಿರ್ಗಮನ

ಮೈಸೂರು,ಆ.30(ಪಿಎಂ)– ಮಹಾರಾಜ ಕಾಲೇಜು ಮೈದಾನದಲ್ಲಿ ಅತ್ತ ಕಾರ್ಯಕ್ರಮ ಉದ್ಘಾಟನೆಯಾಗುತ್ತಿದ್ದರೆ, ಸ್ಥಳಾವಕಾಶವಿಲ್ಲದ ಕಾರಣ ಅದಾಗಲೇ ಸಾಕಷ್ಟು ಮಹಿಳೆಯರು ಸ್ಥಳದಿಂದ ನಿರ್ಗಮಿಸುತ್ತಿದ್ದ ದೃಶ್ಯ ಕಂಡಿತು. ಮಧ್ಯಾಹ್ನ 1ಕ್ಕೆ ಸಮಾರಂಭ ಚಾಲನೆ ಪಡೆಯುತ್ತಿತ್ತು. ಆದರೆ ಕಾರ್ಯಕ್ರಮ ಸ್ಥಳದಲ್ಲಿ ಆಸನಗಳು ಭರ್ತಿಯಾಗಿದ್ದ ಹಿನ್ನೆಲೆಯಲ್ಲಿ ಬಿಸಿಲಿನ ತಾಪದಿಂದ ಬಸವಳಿದಿದ್ದ ಸಾಕಷ್ಟು 'ಗೃಹಲಕ್ಷ್ಮಿ'ಯರು ತಮ್ಮ ತಮ್ಮ ಊರುಗಳ ದಾರಿ ಹಿಡಿದಿದ್ದರು. ತಮ್ಮನ್ನು ಕರೆತಂದ ಬಸ್‌ಗಳು ನಿಂತಿರುವತ್ತ ಹೆಜ್ಜೆ ಹಾಕುತ್ತಿದ್ದರು.

'ಗೃಹಲಕ್ಷ್ಮಿ' ಚಾಲನಾ ಕಾರ್ಯಕ್ರಮಕ್ಕೆ ಇನ್ನಿಲ್ಲದ ಪೊಲೀಸ್ ಭದ್ರತೆ



ಮೈಸೂರು, ಆ.30(ಆರ್‌ಕೆ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ನಡೆದ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮಕ್ಕೆ ಇನ್ನಿಲ್ಲದ ಭದ್ರತೆಯೊಂದಿಗೆ ಒದಗಿಸಿ ಕಟ್ಟೆಚ್ಚರ ವಹಿಸಲಾಗಿತ್ತು.

ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಭಾಗವಹಿಸಿದ್ದ ಕಾರಣ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ನೇತೃತ್ವದಲ್ಲಿ ಸಿವಿಲ್ ಪೊಲೀಸ್, ಸಿಎಆರ್, ಕೆಎಸ್‌ಆರ್‌ಪಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿತ್ತು.

ಮಹಾರಾಜ ಕಾಲೇಜು ಮೈದಾನದ ಪೆಂಡಾಲ್, ವೇದಿಕೆ, ಕೆ.ಆರ್.ಬುಲೇವಾರ್ಡ್ ರಸ್ತೆ, ಫಲಾನುಭವಿಗಳನ್ನು ಕರೆತಂದ ಕೆಎಸ್‌ಆರ್‌ಟಿಸಿ ಬಸ್ ಮಾರ್ಗ, ನಿಲುಗಡೆ ಸ್ಥಳಗಳು, ರಾಹುಲ್ ಗಾಂಧಿ ಅವರು ವಿಮಾನದಲ್ಲಿ ಆಗಮಿಸಿ ನಿರ್ಗಮಿಸಿದ ಮಂಡಕಳ್ಳಿ ವಿಮಾನ ನಿಲ್ದಾಣ, ಅವರು ಸಂಚರಿಸಿದ ಮಾರ್ಗಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಬಹುತೇಕ ಮಹಿಳೆಯರೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರಿಂದ ನಗರ ಘಟಕದ ಪೊಲೀಸರಲ್ಲದೇ ಜಿಲ್ಲಾ ಘಟಕದ ಮಹಿಳಾ ಸಿಬ್ಬಂದಿಗಳನ್ನು 'ಗೃಹಲಕ್ಷ್ಮಿ' ಚಾಲನೆ ಕಾರ್ಯಕ್ರಮಕ್ಕೆ ನಿಯೋಜಿಸಿ, ಎಎಸ್‌ಐ ಮೇಲ್ಪಟ್ಟ ಮಹಿಳಾ ಪೊಲೀಸ್ ಅಧಿಕಾರಿಗಳನ್ನು ಬಂದೋಬಸ್ತ್‌ಗಾಗಿ ಬಳಸಿಕೊಂಡು ನೂಕು–ನುಗ್ಗಲನ್ನು ಅತ್ಯಂತ ಯಶಸ್ವಿಯಾಗಿ ನಿಯಂತ್ರಿಸಲಾಯಿತು. ಮಹಾರಾಜ ಕಾಲೇಜು ಸುತ್ತಮುತ್ತಲ ರಸ್ತೆ, ಜಂಕ್ಷನ್, ವೃತ್ತಗಳಲ್ಲಿ ವಾಹನಗಳ ಸಂಚಾರ ಮತ್ತು ನಿಲುಗಡೆ ನಿರ್ಬಂಧಿಸಿದ್ದರಿಂದ ಬದಲಿ ಮಾರ್ಗಗಳಲ್ಲಿ ವಾಹನ ಸಂಚಾರ ದಟ್ಟಣೆ ಉಂಟಾಗಿ ಬೆಳಗ್ಗೆ ಮತ್ತು ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಅಲ್ಲಲ್ಲಿ ಟ್ರಾಫಿಕ್ ಜಾಮ್ ಆಗಿ ವಾಹನ ಸವಾರರು ಪರದಾಡುವಂತಾಗಿ ದ್ದರಿಂದ ಸಂಚಾರ ಸುಗಮಗೊಳಿಸಲು ಪೊಲೀಸರು ಹರಸಾಹಸ ಪಟ್ಟರು. ಅಂತೇ, ಕೆಲವೇ ಸಮಯದಲ್ಲಿ ಸಂಚಾರ ವ್ಯವಸ್ಥೆ ಮಾಮೂಲಿ ಸ್ಥಿತಿಗೆ ಮರಳಿ, ವಾಹನಗಳು ಸುಗಮ ರೀತಿ ಸಂಚರಿಸಿದವು. ಎಲ್ಲಾ ಉಪ ವಿಭಾಗಗಳ ಎಸಿಪಿಗಳು, ಇನ್ಸ್‌ಪೆಕ್ಟರ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳೂ ಸಹ ಕರ್ತವ್ಯ ನಿರ್ವಹಿಸಿದ್ದರಿಂದ ಇಂದಿನ ಕಾರ್ಯಕ್ರಮವು ಯಾವುದೇ ಅಹಿತಕರ ಘಟನೆಗಳು ಸಂಭವಿಸದೇ ಶಾಂತಿಯುತವಾಗಿ ಮುಕ್ತಾಯವಾಯಿತು.



ಭಾರಿ ಸಂಖ್ಯೆಯ ಬ್ಯಾನರ್, ಫ್ಲೆಕ್ಸ್‌ಗಳು

ಮೈಸೂರು,ಆ.30(ಪಿಎಂ)– ಗೃಹಲಕ್ಷ್ಮಿ ಯೋಜನೆ ಚಾಲನೆ ಸಮಾರಂಭದ ಹಿನ್ನೆಲೆಯಲ್ಲಿ ಮಹಾರಾಜ ಕಾಲೇಜು ಮೈದಾನದ ಸುತ್ತಮುತ್ತಲ ರಸ್ತೆಗಳೂ ಸೇರಿದಂತೆ ನಗರದ ವಿವಿಧ ರಸ್ತೆಗಳಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳು ರಾರಾಜಿಸಿದವು. ವಿವಿಧ ವಿನ್ಯಾಸ ಹಾಗೂ ಆಕರ್ಷಕ ಬಣ್ಣಗಳಿಂದ ಕೂಡಿದ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳು ಬೃಹತ್ ಗಾತ್ರ ಹಾಗೂ ಸಂಖ್ಯೆಯಲ್ಲಿ ಕಂಡು ಬಂದವು. ಬಹುತೇಕ ಫ್ಲೇಕ್ಸ್‌ಗಳಲ್ಲಿ ಮುಖ್ಯವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಫೋಟೋಗಳು ಕಂಡು ಬಂದವು. ಮಹಾರಾಜ ಕಾಲೇಜು ಮೈದಾನ ಬಳಿಯ ಏಕಲವ್ಯ ವೃತ್ತದಲ್ಲಿ ಭಾರೀ ಸಂಖ್ಯೆ ಬ್ಯಾನರ್‌ಗಳು ಕಂಡುಬಂದರೆ, ವೃತ್ತದಲ್ಲಿನ ನಾಮಫಲಕವನ್ನೇ ಮರೆ ಮಾಡಿ ಬ್ಯಾನರ್‌ಗಳನ್ನು ನಿಲ್ಲಿಸಲಾಗಿತ್ತು.



ಅತ್ತ ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಮಕೃಷ್ಣನಗರ ನಿವಾಸದ ಬಳಿ ರಸ್ತೆ ಹಾಗೂ ವೃತ್ತಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಭಾರೀ ಪ್ರಮಾಣದಲ್ಲಿ ಫ್ಲೆಕ್ಸ್‌ಗಳನ್ನು ನಾನಾ ರೀತಿಯಲ್ಲಿ ಅಳವಡಿಸಿ, ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ.

ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಹೃದಯಾಂತರಾಳದಿಂದ ಧನ್ಯವಾದ ಅರ್ಪಿಸಿದ 'ಗೃಹಲಕ್ಷ್ಮಿ'ಯರು

ಮೈಸೂರು,ಆ.30(ಪಿಎಂ)– ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ 4ನೇ ಯೋಜನೆ ಗೃಹಲಕ್ಷ್ಮೀ ಬಗ್ಗೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಹೃದಯಾಂತ ರಾಳದ ಧನ್ಯವಾದ ಹೇಳುತ್ತೇವೆ ಎಂದು ಕೃತಜ್ಞತೆಯ ಭಾವ ವ್ಯಕ್ತಪಡಿಸಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಗೃಹಲಕ್ಷ್ಮಿ ಯೋಜನೆ ಚಾಲನೆಯ ಬೃಹತ್ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಹಲವು ಮಹಿಳೆಯರು ಪತ್ರಿಕೆಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. 'ಗೃಹಲಕ್ಷ್ಮೀ' ಮಹಿಳೆಯರಲ್ಲಿ ಭರವಸೆ ಮೂಡಿಸಿದೆ. ಬಡ ಹೆಣ್ಣು ಮಕ್ಕಳಿಗೆ ಇದು ಉಪಯೋಗ ಆಗಲಿದೆ. 150 ರೂ. ಕೂಲಿಗೆ ಸಂಜೆಯ ವರೆಗೆ ದುಡಿಯುವ ಮಹಿಳೆಯರಿದ್ದಾರೆ. ಹಾಗಾಗಿ ಈ 2 ಸಾವಿರ ಅಂತಹ ಮಹಿಳೆಯರಿಗೆ ಹೆಚ್ಚಿನ ಪ್ರಯೋಜನ ಆಗಲಿದೆ ಎಂದು ಫಲಾನುಭವಿ ಮಹಿಳೆಯರು ತಿಳಿಸಿದರು. ಇಂದಿನ ಕಾಲದಲ್ಲಿ ಬಹುತೇಕ ಮಹಿಳೆಯರಿಗೆ ಬಿಪಿ, ಶುಗರ್ ಇದ್ದೇ ಇದೆ. ಅಂತಹ ಬಡ ಮಹಿಳೆಯರಿಗೆ ಇದು ಅನುಕೂಲಕ್ಕೆ ಬರಲಿದೆ. ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯೊಂದಿಗೆ ಗೃಹಲಕ್ಷ್ಮೀ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಮುಂದಾಗಿರುವ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಹೃದಯಾಂತರಾಳದಿಂದ ಧನ್ಯವಾದ ಹೇಳುತ್ತೇವೆ ಎಂದು ಹೇಳಿದರು.

ಬಸ್‌ಗಳಲ್ಲೂ ರಾರಾಜಿಸಿದ 'ಗೃಹಲಕ್ಷ್ಮಿ' ಜಾಹೀರಾತು



ಮೈಸೂರು,ಆ.30(ಪಿಎಂ)– ಗೃಹಲಕ್ಷ್ಮೀ ಯೋಜನೆ ಚಾಲನೆ ಸಮಾರಂಭಕ್ಕೆ ಫಲಾನುಭವಿ ಮಹಿಳೆಯರನ್ನು ಕರೆತಂದಿದ್ದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲೂ ಗೃಹಲಕ್ಷ್ಮೀ ಯೋಜನೆಯ ಜಾಹೀರಾತು ರಾರಾಜಿಸುತ್ತಿದ್ದವು. ಗುಲಾಬಿ ಬಣ್ಣದ ಹಿನ್ನೆಲೆಯಲ್ಲಿ ಮೂಡಿಬಂದಿದ್ದ ಜಾಹೀರಾತಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರಗಳಿದ್ದರೆ 'ಗೃಹಲಕ್ಷ್ಮೀ–ನುಡಿದಂತೆ ನಡೆದಿದ್ದೇವೆ' ಶೀರ್ಷಿಕೆಯೊಂದಿಗೆ ಸದರಿ ಯೋಜನೆಯ ವಿವರಗಳು ಸದರಿ ಜಾಹೀರಾತಿನಲ್ಲಿ ಕಂಡು ಬಂದಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಫೋಟೋ ಜಾಹೀರಾತಿನಲ್ಲಿ ಇತ್ತು. ಬಹುತೇಕ ಬಸ್‌ಗಳಲ್ಲಿ ಈ ಜಾಹೀರಾತು ಕಂಡುಬಂದರೆ, ಅನೇಕ ಬಸ್‌ಗಳಲ್ಲಿ ಈ ಯೋಜನೆಯ ಗುಲಾಬಿ ಬಣ್ಣದ ಬ್ಯಾನರ್ ಅಳವಡಿಸಿದ್ದು ಕಂಡಿತು.

'ಆಸನ ಭಾಗ್ಯ' ಇಲ್ಲದೆ ರಸ್ತೆಗಳಲ್ಲೇ ಕಾಲ ಕಳೆದ ಯಜಮಾನಿಯರು!

ಮೈಸೂರು,ಆ.30(ಪಿಎಂ)– ಗೃಹಲಕ್ಷ್ಮೀ ಯೋಜನೆ ಅನುಷ್ಠಾನದ ಬೃಹತ್ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಗರೋಪಾದಿಯಲ್ಲಿ ಬಂದಿದ್ದ ಮಹಿಳೆಯರಲ್ಲಿ ಸಾವಿರಾರು ಮಂದಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದ ಅಕ್ಕಪಕ್ಕದ ರಸ್ತೆಗಳಲ್ಲೇ ಕುಳಿತು ಕಾಲ ಕಳೆಯುವಂತಾಯಿತು.

ಪೆಂಡಾಲ್‌ನಲ್ಲಿ ಲಕ್ಷಕ್ಕೂ ಅಧಿಕ ಮಂದಿ ಆಸೀನರಾಗಲು ವ್ಯವಸ್ಥೆ ಮಾಡಲಾಗಿತ್ತು. ಅಂತೆಯೇ ಇಲ್ಲಿನ ಎಲ್ಲಾ ಆಸನಗಳು ಭರ್ತಿಯಾಗಿದ್ದ ಹಿನ್ನೆಲೆಯಲ್ಲಿ ಭಾರೀ ಸಂಖ್ಯೆಯಲ್ಲಿ ಮಹಿಳೆಯರು ರಸ್ತೆಗಳಲ್ಲೇ ಉಳಿಯುವಂತಾಯಿತು. ಇಲ್ಲಿನ ಕೃಷ್ಣ–ಬುಲೇವಾರ್ಡ್ ರಸ್ತೆ, ರೈಲ್ವೆ ಸೇತುವೆ ರಸ್ತೆಗಳಲ್ಲಿ ತಂಡೋಪ ತಂಡವಾಗಿ ನೆರೆದಿದ್ದ ಮಹಿಳೆಯರು ಕಂಡು ಬಂದರು. ಮೈಸೂರು, ಮಂಡ್ಯ, ಹಾಸನ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಲಕ್ಷಾಂತರ ಮಹಿಳೆಯರು ಸಮಾರಂಭಕ್ಕೆ ಆಗಮಿಸಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಗಳ ಸಹಯೋಗದಲ್ಲಿ ಫಲಾನುಭವಿ ಮಹಿಳೆಯರನ್ನು ಕರೆತಂದು ಮರಳಿ ಕರೆದೊಯ್ಯುವ ವ್ಯವಸ್ಥೆ ಮಾಡಲಾಗಿತ್ತು. ಅಂತೆಯೇ ಬಂದಿದ್ದ ಮಹಿಳೆಯರಲ್ಲಿ ಭಾರೀ ಸಂಖ್ಯೆಯ ಮಂದಿ ಸಮಾರಂಭದಿಂದ ಹೊರಗೆ ಉಳಿಯುವಂತಾಯಿತು.

ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಗಳಿಂದ ಬಂದಿದ್ದ ಸಾಕಷ್ಟು ಮಹಿಳೆಯರು ಸಮಾ ರಂಭದ ಸ್ಥಳಕ್ಕೆ ಹೋಗುವ ಪ್ರಯತ್ನ ನಡೆಸಿ ಸಾಧ್ಯವಾಗದೇ ಹಿಂತಿರುಗಿದರು. ಸಮಾರಂಭದ ಸ್ಥಳಕ್ಕೆ ಹೋಗುವ ಎಲ್ಲಾ ಗೇಟ್‌ಗಳನ್ನು ಪೊಲೀಸರು ಬಂದ್ ಮಾಡಿದ್ದಾರೆ ಎಂದು ಬೇಸರದಿಂದ ವಾಪಸ್ಸಾಗುತ್ತಿದ್ದ ದೃಶ್ಯ ಕಂಡು ಬಂದಿತು. ಈ ಸಂದರ್ಭದಲ್ಲಿ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯ ರೈಲ್ವೆ ಸೇತುವೆ ರಸ್ತೆಯಂತೂ ಮಹಿಳೆಯರಿಂದಲೇ ತುಂಬಿ ಹೋಗಿತ್ತು. ರಸ್ತೆಯೇ ಕಾಣದಂತೆ ಎಲ್ಲೆಲ್ಲೂ ಮಹಿಳೆಯರೇ ಕಾಣುತ್ತಿದ್ದರು.



ಪೆಂಡಾಲ್ ಒಳಗೆ ಸ್ಥಳಾವಕಾಶವಿಲ್ಲದೆ ಮಹಾರಾಜ ಕಾಲೇಜು ಮೈದಾನದ ಪಕ್ಕದ ರೈಲ್ವೆ ಸೇತುವೆ ರಸ್ತೆಯಲ್ಲಿ ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಮಹಿಳೆಯರು.



ಮೈಸೂರಿನ ಹೆಬ್ಬಾಳು – ವಿಜಯನಗರ ಬ್ರಾಹ್ಮಣ ಸಂಘದ ಆಶ್ರಯದಲ್ಲಿ 2023 ನೇ ಸಾಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭ ನಡೆಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂತ ಕುಮಾರ್, ಸಮಿತಿ ಸದಸ್ಯ ಶಂಕರ ನಾರಾಯಣ, ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಉಪಾಧ್ಯಕ್ಷ ಗುರುಪ್ರಸಾದ್, ಕಾರ್ಯದರ್ಶಿ ಎಂ.ಎನ್.ಶ್ರೀನಿವಾಸ್ ಜೋಯಿಸ್, ಸೋಮಸುಂದರ್, ಶಕುಂತಲಾ ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ. ಗಾಯಿತ್ರಿ ಅವರಿಂದ ತಮ್ಮ ಸಹೋದರ ಕೆ.ಎಂ.ನಾಗರಾಜು ಅವರಿಗೆ ರಕ್ಷಾ ಬಂಧನ



ಎಲ್‌ಎಲ್‌ಬಿಯಲ್ಲಿ ರಾಜ್ಯಕ್ಕೆ ನಾಲ್ಕನೇ ಸ್ಥಾನ



ಮೈಸೂರು, ಆ. 30– ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಸಿದ್ದರಾಮಯ್ಯ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ವಿದ್ಯಾವರ್ಧಕ ಕಾನೂನು ಕಾಲೇಜಿನ ವಿದ್ಯಾರ್ಥಿನಿ ಎಸ್. ದೀಪಿಕಾ ಬಿ.ಎ. ಎಲ್.ಎಲ್.ಬಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ 4ನೇ ಸ್ಥಾನ ಪಡೆದಿರುತ್ತಾರೆ. ಇವರಿಗೆ ಮೈಸೂರು ಕಾಗಿನೆಲೆ ಮಹಾಸಂಸ್ಥಾನ ಶಾಖಾಮಠ ಶ್ರೀ ಶಿವಾನಂದಪುರಿ ಸ್ವಾಮೀಜಿ, ಎಂ ರಾಮಯ್ಯ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿಗಳು, ಎಂ ಪುಟ್ಟಬಸವೇಗೌಡ, ಸಿದ್ದರಾಮಯ್ಯ ವಸತಿ ನಿಲಯದ ಕಾರ್ಯದರ್ಶಿಗಳು ಹಾಗೂ ವಸತಿ ನಿಲಯದ ಆಡಳಿತ ಮಂಡಳಿಯ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.



ಮೈಸೂರಿನ ನೂತನ ಅಪರ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಪಿ. ಶಿವರಾಜು ಅವರನ್ನು ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ಅಭಿನಂದಿಸಲಾಯಿತು. ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಕಾರ್ಯದರ್ಶಿ ಡಾ.ಬಿ. ಬಸವರಾಜು, ಪದಾಧಿಕಾರಿಗಳಾದ ಕೆ.ಎಸ್.ಸತೀಶ್‌ಕುಮಾರ್, ಚಂದ್ರಶೇಖರ ಮಾದರಹಳ್ಳಿ, ಸತೀಶ್ ಉಪಸ್ಥಿತರಿದ್ದರು.

ಬರಗಾಲ ಬವಣೆ ನಡುವೆ ಕಾಂಗ್ರೆಸ್ ಸಂಭ್ರಮಾಚರಣೆ

ಬಿಜೆಪಿಯಿಂದ ಕಾಂಗ್ರೆಸ್ ಸರ್ಕಾರಕ್ಕೆ 100 ದಿನ ಪೂರೈಸಿದ ಹಿನ್ನೆಲೆ 'ಹಳಿ ತಪ್ಪಿದ ಆಡಳಿತ' ಕೃತಿ ಬಿಡುಗಡೆ



ಮೈಸೂರು, ಆ.30(ಎಸ್‌ಪಿಎನ್)– ಕಾಂಗ್ರೆಸ್ ಅಧಿಕಾರಕ್ಕೆ ಬಂದು ನೂರು ದಿನಗಳ ಪೂರೈಸುತ್ತಿದೆ. ಈ ಅವಧಿಯಲ್ಲಿ ಅದರ ನಿರೂಪಣೆ ಚಾರ್ವಾಕ ಋಷಿಯ ನೀತಿಯಂತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚಾರ್ವಾಕ ಸಿದ್ಧಾಂತದ ಪ್ರತಿಪಾದಕ ಎಂಬಂತೆ ವರ್ತಿಸುತ್ತಿದೆ ಎಂದು ಬಿಜೆಪಿ ಮುಖಂಡರೂ ಆದ ಮಾಜಿ ಸಚಿವ ಸಿ.ಟಿ.ರವಿ ಮಾರ್ಮಿಕವಾಗಿ ನುಡಿದರು.

ಮೈಸೂರು ಚಾಮರಾಜಪುರಂನಲ್ಲಿರುವ ಭಾರತೀಯ ಜನತಾ ಪಾರ್ಟಿ ಮೈಸೂರು ಘಟಕದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ 'ಹಳಿ ತಪ್ಪಿದ ಆಡಳಿತ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರದ ಪ್ರತಿಯೊಂದು ವಿಷಯದಲ್ಲೂ ಚಾರ್ವಾಕ ಋಷಿಯ ನೀತಿಯನ್ನು ಅನುಸರಿಸುತ್ತಿದೆ. ಅದು ಮೈಸೂರು ದಸರಾ ಉದ್ಘಾಟಕರ ಹೆಸರು, ಆಡಳಿತ ನೀತಿ ನಿರೂಪಣೆಯಲ್ಲೂ ವಿಭಜಕ ನೀತಿ ಅನುಸರಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಬರಗಾಲದಲ್ಲಿ ನೂರರ ಸಂಭ್ರಮ: ಕರ್ನಾಟಕದ ರೈತರು ಬರಗಾಲದ ಬವಣೆಯಲ್ಲಿ ಬೇಯುತ್ತಿರುವಾಗ ಕಾಂಗ್ರೆಸ್ ಸರ್ಕಾರವು ನೂರು ದಿನದ ಸಂಭ್ರಮದಲ್ಲಿ ತೇಲುತ್ತಿದೆ. ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿದೆ. ಈ ಯೋಜನೆ ಜಾರಿಗೊಳಿಸಲು ಕರ್ನಾಟಕದ ಪುರುಷರು ಬೀದಿಪಾಲಾಗುವ ಸಂದರ್ಭವನ್ನು ಸೃಷ್ಟಿಸುತ್ತಿದ್ದಾರೆ ಕುಟುಕಿದರು.

ಯಾಕೆ ಬಿಡಬೇಕಿತ್ತು: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ತೀರ್ಮಾನಕ್ಕೂ ಮುನ್ನವೇ ತಮಿಳುನಾಡಿಗೆ ನೀರು ಹರಿಸಿ ರೈತರಿಗೆ ದ್ರೋಹ ಮಾಡಿದೆ. ಅಲ್ಲದೆ, ಐ.ಎನ್.ಡಿ.ಐ.ಎ(ಇಂಡಿಯಾ) ಮೈತ್ರಿಕೂಟದ ಒಡಕು ತಪ್ಪಿಸಲು ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಮೆಚ್ಚಿಸಲು ಕಾವೇರಿ ನೀರು ಹರಿಸಿ ರಾಜ್ಯ ರೈತರ ಹಿತ ಬಲಿಕೊಡಲಾಗಿದೆ ಎಂದರು.

ವೈಫಲ್ಯ ಮರೆಮಾಚಲು ಹಿಂದಿನ ವಿವಾದಗಳನ್ನು ಕೆದಕುತ್ತಿದ್ದಾರೆ. ಬಿಜೆಪಿ ಜನಪರ ಯೋಜನೆಗಳನ್ನು ರದ್ದು ಮಾಡಲಾಗಿದೆ. ಶಕ್ತಿ ಯೋಜನೆ ಮೂಲಕ ಬಸ್ ದರ ಏರಿಸಿ ಪುರುಷರಿಗೆ ಬರೆ ಹಾಕಿದೆ. ಗೃಹ ಜ್ಯೋತಿ ಯೋಜನೆಯಡಿ ದುಪ್ಪಟ್ಟು ವಿದ್ಯುತ್ ಬಿಲ್ ಬಂದಿದೆ. ಮಳೆಗಾಲದಲ್ಲಿಯೇ ಅನಿಯಮಿತ ಲೋಡ್ ಶೆಡ್ಡಿಂಗ್ ಜಾರಿಗೊಳಿಸಿದೆ. ವಿದ್ಯುತ್ ದರ ಹೆಚ್ಚಿಸಲಾಗಿದೆ ಎಂದು ಕಟುವಾಗಿ ಟೀಕಿಸಿದರು.

12 ಸಾವಿರ ಕೋಟಿ: ಮದ್ಯದ ದರ ಏರಿಸಿ ಗೃಹಲಕ್ಷ್ಮಿ ಗ್ಯಾರಂಟಿಗೆ ಹಣ ಹೊಂದಿಸಲಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಸಂಬಳ, ನಿವೃತ್ತರಿಗೆ ವೇತನ, ಗ್ಯಾರಂಟಿ ಯೋಜನೆಗೆ ಮಾಸಿಕ 14,500 ಕೋಟಿ ಬೇಕು. ಸರ್ಕಾರದ ಆದಾಯವೇ? 12 ಸಾವಿರ ಕೋಟಿ ಇರುವಾಗ ಉಳಿಕೆ ಹಣಕ್ಕೆ ಹೊಂದಿಸಲು ಸಾಲ ಮಾಡಬೇಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಲ ಮಾಡಿಯಾದರೂ ತುಪ್ಪ ತಿನ್ನಿ ಎನ್ನುವ ನೀತಿ ಅನುಸರಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಮೀಸಲು ಹಣ ದುರ್ಬಳಕೆ: ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಲಾಗಿದೆ. ಫ್ಯಾಕ್ಟ್‌ಚೆಕ್ ಹೆಸರಿನಲ್ಲಿ ಜನರ ಅಭಿವ್ಯಕ್ತಿ ದಮನಿಸಲು ಸುಳ್ಳು ಪ್ರಕರಣ ದಾಖಲಿಸಲಾಗುತ್ತಿದೆ. ಬೆಲೆ ಏರಿಕೆ ಸಂಭ್ರಮಿಸಲು ರಾಹುಲ್ ಗಾಂಧಿ ಕರೆಸಿರುವುದಷ್ಟೇ ಸಾಧನೆಯಾಗಿದೆ. ಕಲುಷಿತ ನೀರು ಸೇವನೆಯಿಂದ ಚಿತ್ರದುರ್ಗ, ಕೋಲಾರ, ಯಾದಗಿರಿ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಅನೇಕರು ಅಸ್ವಸ್ಥರಾಗಿದ್ದಾರೆ. ಕೆಲವರು ಬಲಿಯಾಗಿದ್ದಾರೆ ಎಂದರು. ಮಾಜಿ ಸಚಿವ ಎಸ್.ಟಿ. ಸೋಮಶೇಖರ್ ಸೇರಿದಂತೆ ಬಾಂಬೆ ಬಾಯ್ಸ್ ಕಾಂಗ್ರೆಸ್ ಪಕ್ಷಕ್ಕೆ ಹೋಗುತ್ತಾರೆ ಎನ್ನುವ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷದಿಂದ ಹೊರ ಹೋಗುವವರನ್ನು ತಡೆಯಲಾಗುವುದೇ? ಕಾಂಗ್ರೆಸ್ ಪಕ್ಷದ 30 ಶಾಸಕರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಅಸಮಾಧಾನ ಹೊರ ಹಾಕಿದ್ದಾರೆ. ಪ್ರಸ್ತುತ ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ಸರ್ಕಾರದ ವಿರುದ್ಧ ನೇರ ಮೂಲಸೌಕರ್ಯ ಒದಗಿಸುವ ವಿಚಾರದಲ್ಲಿ ಅಸಮಾಧಾನ ಹೊರಹಾಕಿದ್ದಾರೆ ಎಂದರು.

ಎಲ್ಲವೂ ತಿಳಿಯುತ್ತದೆ: ಹಾಗಾಗಿ ಕಾಂಗ್ರೆಸ್ ಪಕ್ಷದ ಅಸಮಾಧಾನಿತ ಶಾಸಕರ ಭಾರ ತಡೆದುಕೊಳ್ಳುವುದೇ ಕಷ್ಟ, ನಮ್ಮಿಂದ ಹೋದವರ ಭಾರವನ್ನು ತಡೆಯುವರೇ? ಬಿಜೆಪಿಯಲ್ಲಿ 66 ಶಾಸಕರು ಪಕ್ಷ ನಿಷ್ಠರಿದ್ದಾರೆ. ಅವರು, ಸಮೃದ್ಧಿಯ ಕಾಲದಲ್ಲಿ ಮಾತ್ರವಲ್ಲ, ಕಷ್ಟ ಬಂದಾಗ ಎಲ್ಲರ ನಿಷ್ಠೆಯೂ ಗೊತ್ತಾಗುತ್ತದೆ ಹಾಗೂ ಕಾಲ ಬಂದಾಗ ಎಲ್ಲವೂ ತಿಳಿಯುತ್ತದೆ ಎಂದರು.

ಬಿಜೆಪಿ ಯೋಜನೆಗಳಿಗೆ ಕೊಕ್: ರೈತ ಸಮ್ಮಾನ್, ಕಿಸಾನ್ ಸ್ಮಾನ್, ರೈತ ವಿದ್ಯಾನಿಧಿ ಸೇರಿದಂತೆ 15ಕ್ಕೂ ಹೆಚ್ಚು ರೈತರು, ಬಡವರು, ಕಾರ್ಮಿಕರ ಕುಟುಂಬಗಳ ಏಳಿಗೆಗಾಗಿ ಜಾರಿಗೊಳಿಸಿದ್ದ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿದೆ. ಬಿಪಿಎಲ್ ಕಾರ್ಡ್‌ಗಳಿಗೆ ಕೇಂದ್ರ ಸರ್ಕಾರ ನೀಡುತ್ತಿದ್ದ ಐದು ಕೆಜಿ ಅಕ್ಕಿಯಲ್ಲಿ 2 ಕೆಜಿ ಕಡಿತಗೊಳಿಸಲಾಗಿದೆ. ಅಂತೆಯೆ ನನಗಿರುವ ಮಾಹಿತಿ ಪ್ರಕಾರ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೈನುಗಾರಿಕೆಗೆ ನೀಡುತ್ತಿದ್ದ ಐದು ರೂ ಪ್ರೋತ್ಸಾಹ ಧನವನ್ನು ನಿಲ್ಲಿಸುವ ಯೋಚನೆಯೂ ಸರ್ಕಾರದ ಮಂದಿದ್ದು, ಸರ್ಕಾರ ನೂರು ಸಂಭ್ರಮದಲ್ಲಿ ನೂರು ತಪ್ಪುಗಳನ್ನು ಮಾಡಿದೆ ಎಂದು ಕೈಪಿಡಿಯನ್ನೇ ಬಿಡುಗಡೆಗೊಳಿಸಿದರು.

ತನಿಖೆ ನೆಪ: ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳು ಪೂರೈಸಿದ್ದು, ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ನೀಡಬೇಕಿದ್ದ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿರುವುದರಿಂದ ಗುತ್ತಿಗೆದಾರರನ್ನು ಸುಮ್ಮನಿರಿಸಲು ತನಿಖೆಯ ನೆಪವೊಡ್ಡುತ್ತಿದೆ ಅಷ್ಟೆ, ಇದರಲ್ಲಿ ಯಾವುದೇ ಭ್ರಷ್ಟಾಚಾರದ ಹುರುಳಿಲ್ಲ ಎಂದು ತಿಳಿಸಿದರು.

ನಾನು ರಾಜ್ಯಾಧ್ಯಕ್ಷ ಸ್ಥಾನಕ್ಕೆ: ನಿಮಗೆ ರಾಜ್ಯಾಧ್ಯಕ್ಷ ಸ್ಥಾನ ಕೊಟ್ಟರೆ ನಿಭಾಯಿಸುತ್ತಿರಾ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಿ.ಟಿ.ರವಿ, ಪಕ್ಷನಿಷ್ಠೆ ಈಗಾಗಲೇ ನಾನು ಪ್ರದರ್ಶಿಸಿದ್ದೇನೆ. ಪಕ್ಷ ಯಾವುದೇ ಸ್ಥಾನ ಕೊಟ್ಟರೂ, ಕೊಡದಿದ್ದರೂ ಸಾಮಾನ್ಯ ಕಾರ್ಯಕರ್ತನಾಗಿ ದುಡಿಯುತ್ತೇನೆ. ವಿಪಕ್ಷ ನಾಯಕ ಸ್ಥಾನ ಮತ್ತು ರಾಜ್ಯಾಧ್ಯಕ್ಷ ಸ್ಥಾನದ ಆಯ್ಕೆ ವಿಳಂಬವಾದರೂ ಸೂಕ್ತ ವ್ಯಕ್ತಿಗಳನ್ನು ಹೈಕಮಾಂಡ್ ಆಯ್ಕೆ ಮಾಡುತ್ತದೆ ಎಂದರು.

ಮಹಿಷಾ ದಸರಾ ಆಚರಣೆಯಲ್ಲಿ ಕಾಂಗ್ರೆಸ್‌ನವರೇ ಹೆಚ್ಚು: ಮಹಿಷಾ ದಸರಾ ಆಚರಣೆ ವಿಷಯದಲ್ಲಿ ನಮ್ಮ ಪಕ್ಷ ಆಡಳಿತವಿದ್ದಾಗ ಕಡಿವಾಣ ಹಾಕಲಾಗಿತ್ತು ಮತ್ತು ಈ ಬಾರಿ ಮಹಿಷಾ ದಸರಾ ಅದ್ದೂರಿಯಾಗಿ ಆಚರಿಸುತ್ತಿರುವವರ ಹಿಂದೆ ಕಾಂಗ್ರೆಸ್ ಪಕ್ಷದ ಬೆಂಬಲಿತರೇ ಹೆಚ್ಚಾಗಿದ್ದಾರೆ. ಇದರ ಬಗ್ಗೆ ಆಡಳಿತ ಪಕ್ಷ ಯಾವ ರೀತಿ ನಡೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕು ಹಾಗೂ ದಸರಾ ಉದ್ಘಾಟನೆಗೆ ಸಂಗೀತ ನಿರ್ದೇಶಕ ಹಂಸಲೇಖ ಆಯ್ಕೆ ವಿಚಾರ ಸರ್ಕಾರಕ್ಕೆ ಬಿಟ್ಟಿದ್ದು, ನಮ್ಮ ನಿಲುವು ನಮ್ಮ ಪರಂಪರೆಗೆ ವಿರುದ್ಧ ಇರುವವರಿಂದ ಉದ್ಘಾಟನೆ ಮಾಡಿಸಬೇಡಿ ಎಂಬುದಾಗಿದೆ. ಸರ್ಕಾರ ಅವರನ್ನೇ ಉದ್ಘಾಟನೆಗೆ ಆಯ್ಕೆ ಮಾಡಿಕೊಂಡಿದ್ದರೆ ಏನು ಮಾಡುವುದು ಎಂದು ಮಾಧ್ಯಮದವರನ್ನೇ ಪ್ರಶ್ನಿಸಿದರು,

ಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ ಮಿರ್ಲೆ ಶ್ರೀನಿವಾಸಗೌಡ, ಮುಖಂಡರಾದ ಮೋಹನ್, ಕೇಬಲ್ ಮಹೇಶ್, ಗಿರಿಧರ್, ಮಹೇಶ್ ರಾಜೇ ಅರಸ್, ಸೋಮಸುಂದರ್ ಸೇರಿದಂತೆ ಅನೇಕರಿದ್ದರು.

ಸೆ.30ರಿಂದ ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಜ್ಯೋತಿಷ್ಯ ಮಹಾ ಸಮ್ಮೇಳನ

ಮೈಸೂರು, ಆ.30(ಜಿಎ)–ಸೆಪ್ಟೆಂಬರ್ 30 ರಿಂದ ಅಕ್ಟೋಬರ್ ಎರಡರವರೆಗೆ ಬೆಂಗಳೂರಿನ ಕೆ.ಜಿ. ರಸ್ತೆಯ ಕಾವೇರಿ ಭವನದ ಎದುರಿನ ಶಿಕ್ಷಕರ ಸದನದಲ್ಲಿ ಅಂತಾರಾಷ್ಟ್ರೀಯ ಜ್ಯೋತಿಷ್ಯ ಮಹಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ದಿವ್ಯಜ್ಯೋತಿ ಜ್ಯೋತಿಶ್ಯಾಸ್ತ್ರ ಕಾಲೇಜಿನ ಪ್ರಧಾನ ಕಾರ್ಯದರ್ಶಿ ಪ್ರೊ.ಎಚ್. ಚಂದ್ರಶೇಖರ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ರಾಜ್ಯ, ರಾಷ್ಟ್ರಮಟ್ಟದ ಅನುಭವಿ ಜ್ಯೋತಿಷ್ಯರು, ಭಾರತೀಯ ಖಗೋಳ ಶಾಸ್ತ್ರ, ಹಸ್ತ ಸಾಮುದ್ರಿಕ ಕುರಿತ ಚರ್ಚೆಗಳಲ್ಲಿ ಪಾಲ್ಗೊಳ್ಳುವರು. ಈ ವೇಳೆ ಜ್ಯೋತಿಶಾಸ್ತ್ರ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಅನುಮಾನಗಳಿಗೆ ಉತ್ತರ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಶಿವರುದ್ರ ಸ್ವಾಮೀಜಿ ಆಶೀರ್ವದಿಸುವರು, ಬೇಬಿ ಕಾಂತಾ ಕನ್ವರ್, ಚಂದ್ರಶೇಖರ್ ಇನ್ನಿತರ ಗಣ್ಯರು ಉಪಸ್ಥಿತರಿರಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶಿವಣ್ಣ ಗೊಟ್ಟಿಗೆರೆ, ಹೊನ್ನಯ್ಯ, ಡಾ. ವೆಂಕಟೇಶ್ ಇದ್ದರು.

ಗಾಯತ್ರಿ ಜಪ ಅನುಷ್ಠಾನ ಆಚರಣೆಯಿಂದ ಬದುಕಿನಲ್ಲಿ ಸಾಧನೆ ಸನ್ಮಾರ್ಗ



ಮೈಸೂರು, ಆ. 30– ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ ಹಾಗೂ ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಜಯನಗರದಲ್ಲಿರುವ ರಾಮಮಂದಿರದಲ್ಲಿ ಯಜುರ್ವೇದದ ಯಜುರ್ ಉಪಾಕರ್ಮವನ್ನು ಸಾಮೂಹಿಕವಾಗಿ ಬ್ರಾಹ್ಮಣರು ಯಜ್ಞೋಪವೀತಂ ಜನಿವಾರ ಬದಲಾಯಿಸಿಕೊಂಡು ಸಂಧ್ಯಾವಂದನೆ, ಗಾಯತ್ರಿ ಜಪ ಹೋಮವನ್ನು ವೇದಬ್ರಹ್ಮ ಅರುಣ್ ಕುಮಾರ್ ಶರ್ಮ ನೇತೃತ್ವದಲ್ಲಿ ಆಚರಿಸಲಾಯಿತು.

ಯಜುರ್ ಉಪಾಕರ್ಮದ ಅಂಗವಾಗಿ ಜನಿವಾರ ಧಾರಣೆ ಮಾಡಿದ ಸಮಾಜದ ಬ್ರಾಹ್ಮಣರಿಗೆ ಸಂಧ್ಯಾವಂದನೆ ಪುಸ್ತಕ ಹಾಗೂ ಗಾಯತ್ರಿ ಮಂತ್ರದ ಪುಸ್ತಕ ನೀಡಿ ಯಜುರ್ ಉಪಾಕರ್ಮ ಶುಭಾಶಯ ಕೋರಿ ಮಾತನಾಡಿದ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಗಾಯತ್ರಿ ಮಂತ್ರ ಅತ್ಯಂತ ಪ್ರಭಾವಶಾಲಿಯಾದುದು. ತೇಜಸ್ಸು, ಬುದ್ಧಿಶಕ್ತಿ ಮತ್ತು ಚಿತ್ತವೃತ್ತಿಯನ್ನು ಪಾವನಗೊಳಿಸುವುದೇ ಗಾಯತ್ರಿ ಮಂತ್ರ, ಗಾಯತ್ರಿ ಮಂತ್ರದಿಂದ ಉತ್ತಮ ಸಂಸ್ಕಾರ ಬ್ರಹ್ಮ ಪವಿತ್ರವಾದ ಸೂರ್ಯನಾರಾಯಣನಿಂದ ಉದ್ಭವಿಸಲ್ಪಟ್ಟ ಗಾಯತ್ರಿ ಮಂತ್ರ, ಅತ್ಯಂತ ಪ್ರಭಾವಶಾಲಿಯಾದುದು. ಈ ಮಂತ್ರವು 'ನನಗೆ ತೇಜಸ್ಸನ್ನು ಕೊಡು, ನನ್ನ ಬುದ್ಧಿಶಕ್ತಿಯನ್ನು ಅರಳಿಸು, ಮತ್ತು ಚಿತ್ತವೃತ್ತಿಯನ್ನು ಪಾವನಗೊಳಿಸು' ಎನ್ನುವ ಅರ್ಥದೊಂದಿಗೆ ಎಲ್ಲರಿಗೂ ಶುಭವಾಗಲಿ ಎನ್ನುವ ಪರ್ಯಾಯ ಸಂದೇಶವನ್ನು ನೀಡುತ್ತದೆ. ಸ್ವಸ್ತಿಕ ಮುದ್ರೆಯಲ್ಲಿ ಅಡ್ಡಗೆರೆ ಮತ್ತು ಉದ್ದಗೆರೆಯು ಸಮಾನವಾಗಿದ್ದು, ಕ್ರಮವಾಗಿ ಧರ್ಮದ ಪಾಲನೆ ಮತ್ತು ಬ್ರಹ್ಮಜ್ಞಾನದ ಸಂಪಾದನೆ ಎತ್ತರಕ್ಕೆ ಬೆಳೆಯಲಿ ಎಂದು ತಿಳಿಸುತ್ತದೆ. ಪ್ರತಿದಿನದ ಸೂರ್ಯೋದಯವನ್ನು ನೋಡಿ ಅನುಭವಿಸಿದರೆ, ಅದೇ ಶುಭ ಘಳಿಗೆಯಾಗಿ ಪವಿತ್ರವೆನಿಸುವುದು ಎಂದು ಹೇಳಿದರು.

ಜಯನಗರ ಶ್ರೀರಾಮ ಮಂದಿರ ಅಧ್ಯಕ್ಷ ವೇದ ಬ್ರಹ್ಮ ಅರುಣ್‌ಕುಮಾರ ಶರ್ಮ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿಟಿ. ಪ್ರಕಾಶ್, ಗಾಯಕ ಶ್ರೀಹರ್ಷ, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಪುನೀತ್ ಜಿ ಕೂಡ್ಲೂರು, ವೆಂಕಟೇಶ್, ಸೀತರಾಮು, ಶ್ರೀವಾಸ ವಿಠ್ಠಲ್, ವಿಷ್ಣು, ರಾಕೇಶ್, ನಾಗರಾಜು, ರಮೇಶ್, ರವಿಶಂಕರ್, ಆನಂದರಾಮು ಇನ್ನಿತರರು ಇದ್ದರು.

ಮೀನು ಮಾರಾಟ ಮಳಿಗೆಯಲ್ಲಿ 11.50 ಲಕ್ಷ ನಗದು ಕಳವು

ಮೈಸೂರು, ಆ. 30– ಸಗಟು ಮೀನು ಮಾರಾಟ ಅಂಗಡಿಯ ಶೆಟರ್ ಬೀಗ ಮುರಿದು 11.50 ಲಕ್ಷ ರೂ. ಕಳವು ಮಾಡಲಾಗಿದ್ದು, ಈ ಘಟನೆ ಮೈಸೂರಿನ ಮಂಡಿಮೊಹಲ್ಲಾದಲ್ಲಿ ನಡೆದಿದೆ.

ಅಲ್ಲಿನ ಪುಲಿಕೇಶಿ ರಸ್ತೆಯಲ್ಲಿರುವ ಜಮ್ ಜಮ್ ಮೀನಿನ ಅಂಗಡಿ ಮಾಲೀಕ ಅಮ್ಜದ್ ಪಾಷಾ(42) ಹಣ ಕಳೆದುಕೊಂಡವರಾಗಿದ್ದು, ಇವರು ಆಗಸ್ಟ್ 27ರಂದು ರಾತ್ರಿ ಅಂಗಡಿಯ ಕ್ಯಾಷ್ ಡ್ರಾಯರ್‌ನಲ್ಲಿ 11.50 ಲಕ್ಷ ರೂ. ಇಟ್ಟು ಹೋಗಿದ್ದರು. ಮರುದಿನ ಬೆಳಗ್ಗೆ ಅಂಗಡಿ ಬಾಗಿಲು ತೆರೆದಾಗ ದುಷ್ಕರ್ಮಿಗಳು ಅಂಗಡಿಯ ಹಿಂಬದಿಯಲ್ಲಿರುವ ರೋಲಿಂಗ್ ಶೆಟರ್ ಬೀಗ ಮುರಿದು ಒಳನುಗ್ಗಿ ಕ್ಯಾಶ್ ಡ್ರಾಯರ್‌ನಲ್ಲಿದ್ದ ಹಣ ಮತ್ತು ಸಿಸಿ ಕ್ಯಾಮರಾ ಹಾಗೂ ಡಿವಿಆರ್ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಸರಾ ಉದ್ಘಾಟನೆಗೆ ಹಂಸಲೇಖ: ಸಿಎಂ ಸಿದ್ದರಾಮಯ್ಯರಿಗೆ ಅಭಿನಂದನೆ



ಮೈಸೂರು, ಆ.30– ಈ ಬಾರಿಯ ದಸರಾ ಮಹೋತ್ಸವದ ಉದ್ಘಾಟನೆಗೆ ಖ್ಯಾತ ಸಂಗೀತ ನಿರ್ದೇಶಕ, ನಾದಬ್ರಹ್ಮ ಡಾ. ಹಂಸಲೇಖ ಅವರನ್ನು ಆಯ್ಕೆ ಮಾಡಿರುವುದಕ್ಕೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಅ.15 ರಂದು ಹಂಸಲೇಖ ಅವರು ಈ ಬಾರಿಯ ದಸರಾವನ್ನು ಉದ್ಘಾಟಿಸಲಿದ್ದಾರೆ. 1993ರಲ್ಲಿ ವರನಟ ಡಾ.ರಾಜ್‌ಕುಮಾರ್ ಅವರು ದಸರಾ ಉದ್ಘಾಟನೆ ನೆರವೇರಿಸಿದ್ದರು. ಗಿರೀಶ್ ಕಾರ್ನಾಡ್, ಬರಗೂರು ರಾಮಚಂದ್ರಪ್ಪ ಅವರು ಸೇರಿದಂತೆ ಹಲವು ಗಣ್ಯರು ದಸರಾಗೆ ಚಾಲನೆ ನೀಡಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಹಂಸಲೇಖ ಅವರ ಆಯ್ಕೆ ಔಚಿತ್ಯ, ದಯಾಧರೆ ಎಂಬ ಮಹಾಕಾವ್ಯ ಬರೆಯುತ್ತಿರುವ ಹಂಸ ಅವರ ವಾಕ್ಯ ನುಡಿಗೆ ಮೈಸೂರು ದಸರಾ ಸಾಕ್ಷಿಯಾಗಲಿದೆ. ಐದು ದಶಕದ ಸಂಗೀತ ಸಾಧನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಕ್ತ ಗೌರವ ನೀಡಿರಲಿಲ್ಲ. ಪ್ರಶಸ್ತಿ ಲಾಬಿ ಕಾರಣ ಈವರೆಗೂ ಹಂಸಲೇಖ ಅವರಿಗೆ ಪದ್ಮ ಪ್ರಶಸ್ತಿ ಲಭಿಸಿಲ್ಲ. ಸಿದ್ದರಾಮಯ್ಯ ಸರ್ಕಾರ ಉನ್ನತ ಗೌರವ ನೀಡಿರುವ ಪ್ರವೃತ್ತಿಯನ್ನು ಕೇಂದ್ರ ಕೂಡ ಪುರಸ್ಕರಿಸಿ ಮುಂದಿನ ದಿನಗಳಲ್ಲಾದರೂ ಪದ್ಮ ಪ್ರಶಸ್ತಿಗೆ ಹಂಸಲೇಖ ಅವರನ್ನು ಆಯ್ಕೆ ಮಾಡಿ ಕನ್ನಡ ನಾಡಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಕೋರುತ್ತೇವೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕುರಿ ವಿತರಣೆ ಕಾರ್ಯಕ್ರಮ

ಮೈಸೂರು, ಆ.30–ನಗರದ ಜೆ.ಎಲ್.ಬಿ. ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಎಸ್ ಪ್ರಕಾಶ್ ಪ್ರಿಯದರ್ಶನ ಸ್ನೇಹ ಬಳಗದ ವತಿಯಿಂದ 10ನೇ ಉಚಿತ ಕುರಿ ನೀಡುವ ಕಾರ್ಯಕ್ರಮದ ಮೂಲಕ ಕುರಿ ವಿತರಿಸಲಾಯಿತು.

'ಕುರುಬರಿಂದ ಕುರುಬರಿಗಾಗಿ' 'ಉಳ್ಳವರಿಂದ ಅವಶ್ಯಕತೆ ಇರುವವರಿಗಾಗಿ' ಕಾರ್ಯಕ್ರಮದಡಿ ಉಚಿತ ಕುರಿ ನೀಡುವ ಯೋಜನೆಯ 10ನೇ ಕಾರ್ಯಕ್ರಮದಲ್ಲಿ ಗಣ್ಯರು ಲಾಟರಿ ಎತ್ತುವ ಮೂಲಕ ಫಲಾನುಭವಿಗಳಿಗೆ ಉಚಿತ 6 ಕುರಿ ಮರಿಗಳನ್ನು ಹಾಗೂ ಹಣ್ಣಿನ ಗಿಡವನ್ನು, ವಾಟರ್ ಕ್ಯಾನ್‌ಗಳನ್ನು, 50 ವರ್ಷ ಮೇಲ್ಪಟ್ಟ ಮಾತೆಯರಿಗೆ ಉಚಿತ ಸೀರೆಯನ್ನು ವಿತರಿಸಿದರು. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಹೊಂಭಯ್ಯ, ಬಿ.ರಮೇಶ್, ನಂಜನಗೂಡಿನ ಸಿದ್ದರಾಮು, ಹುಣಸೂರಿನ ಬಸವೇಗೌಡ, ವರುಣ ಕ್ಷೇತ್ರದ ಮಂಜುನಾಥ್ ಹಾಗೂ ಕುನ್ನೆಗೌಡರಿಗೆ ಉಚಿತ ಕುರಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬೆಂಗಳೂರಿನ ಕನಕವಾಣಿ ಸಂಪಾದಕ ಹನುಮಂತಪ್ಪ, ಬೆಂಗಳೂರಿನ ವಿಶ್ವಚೇತನ ಬಳಗದ ಅಧ್ಯಕ್ಷ ಶಿವಸ್ವಾಮಿ, ಪ್ರಕಾಶ್ ಪ್ರಿಯಾದರ್ಶನ್, ಬಿಜೆಪಿ ಮುಖಂಡ ರಾಜೇಶ್ ಜಾದವ್, ವಕೀಲ ಶಿವರಾಜ್, ಭೈರತಿ ಲಿಂಗರಾಜ್, ಹೇಮಂತ್, ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ರಾಜು.ಎಂ, ಮಾದೇವಿ, ರಾಜು ಬಂಡೆಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಭಾರತೀಯ ಸಂಸ್ಕೃತಿ ಜಗತ್ತಿನಲ್ಲೇ ಶ್ರೇಷ್ಠವಾದದ್ದು

ಸಾಹಿತಿ ಬನ್ನೂರು ರಾಜು ಅಭಿಮತ




ಮೈಸೂರು, ಆ. 30– ಮಾತೃದೇವೋಭವ ಪಿತೃದೇವೋಭವ ಎನ್ನುತ್ತಾ ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ಎಂದು ಜೀವನ ಪರ್ಯಂತ ನಮಿಸುತ್ತಲೇ ಬದುಕುವ ನಮ್ಮ ಭಾರತೀಯ ಸಂಸ್ಕೃತಿ ಅದರಲ್ಲೂ ವಿಶೇಷವಾಗಿ ನಮ್ಮ ಕನ್ನಡ ಸಂಸ್ಕೃತಿ ಜಗತ್ತಿನಲ್ಲಿ ಶ್ರೇಷ್ಠೋತ್ತಮವಾದದ್ದೆಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಕ್ಯಾತನಹಳ್ಳಿಯ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ, ಮೈಸೂರಿನ ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗ ಸಂಯುಕ್ತವಾಗಿ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಸಂಸ್ಕೃತಿ ಸಂಭ್ರಮ ಮತ್ತು ಪ್ರಸ್ತುತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಂದೆ–ತಾಯಿಯರಲ್ಲಿ, ಗುರು–ಹಿರಿಯರಲ್ಲಿ, ಪ್ರಕೃತಿಯಲ್ಲಿ, ಅಷ್ಟೇ ಏಕೆ ಗೋಮಾತೆಯೆಂದು ಪ್ರಾಣಿಗಳಲ್ಲೂ ಪೂಜನೀಯ ದೇವರನ್ನು ಕಾಣುವ ಸಂಸ್ಕಾರ, ಸಂಸ್ಕೃತಿ ನಮ್ಮದಾಗಿದ್ದು ಹಾಗೆಯೇ ಇದೆಲ್ಲಕ್ಕೂ, ಇದೆಲ್ಲರಿಗೂ ಪ್ರಾಚೀನ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ಬಹು ಮಹತ್ವದ ಸ್ಥಾನ ನೀಡಲಾಗಿದೆಯೆಂದರು.

ಸ್ಮರಣೀಯ ಸುಬ್ಬಣ್ಣ: ಅಚ್ಚರಿ ಎಂದರೆ ಇಲ್ಲಿ ಕಲಿತವರ್‍ಯಾರೂ ಖಾಲಿ ಕುಳಿತಿಲ್ಲ. ಎಲ್ಲರೂ ಒಳ್ಳೊಳ್ಳೆಯ ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿ, ಖಾಸಗಿ ಸಂಸ್ಥೆಗಳಲ್ಲೂ ಉತ್ತಮ ಉದ್ಯೋಗಗಳನ್ನು ಪಡೆದು ಜೀವನದಲ್ಲಿ ಯಶಸ್ಸು ಕಂಡು ಸಾಧಕರಾಗಿದ್ದಾರೆ. ಇವರೆಲ್ಲರೂ ಸುಬ್ಬಣ್ಣನವರನ್ನು ನಿತ್ಯ ನೆನೆಯಬೇಕು. ಬದುಕು ಕೊಟ್ಟವರನ್ನು ಹೀಗೆ ಸ್ಮರಿಸಿಕೊಂಡು ಸಂಭ್ರಮಿಸುವುದೇ ನಮ್ಮ ಸಂಸ್ಕೃತಿ ಎಂದ ಅವರು,ಸಮಯ ಪ್ರಜ್ಞೆ, ಆತ್ಮಸ್ಥೈರ್ಯ, ಆತ್ಮವಿಶ್ವಾಸ, ಆಲೋಚನಾ ಶಕ್ತಿ, ಅಧ್ಯಯನಶೀಲತೆ, ಏಕಾಗ್ರತೆ, ಜ್ಞಾನ ದಾಹ, ಕನಸುಗಾರಿಕೆ, ಉತ್ಸಾಹ, ಸೃಜನಶೀಲತೆ, ಕ್ರಿಯಾತ್ಮಕತೆ, ಅವಿರತ ಪರಿಶ್ರಮ ಇವುಗಳೆಲ್ಲವೂ ವಿದ್ಯಾರ್ಥಿಗಳಲ್ಲಿರಬೇಕಾದ ಬಹುಮುಖ್ಯ ಗುಣಾಂಶಗಳು. ಇವುಗಳೆಲ್ಲವನ್ನೂ ಕಲಿಕೆಯ ಮಾರ್ಗದಲ್ಲಿ ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಯಶಸ್ಸು ಸಾಧಿಸಬಹುದೆಂದು ಕಿವಿಮಾತು ಹೇಳಿದರು.


ವಿಶ್ರಾಂತ ಶಿಕ್ಷಕಿಯೂ ಆದ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಅವರು ಶಾಲೆಯ ಉನ್ನತ ಶ್ರೇಣಿ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಕು.ಚೈತನ್ಯ ಮತ್ತು ಕು.ವರ್ಷಿತಾ ಹಾಗೂ ಕು.ಸಹನಾ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದರು.ಹಾಗೆಯೇ ಗುರು–ಹಿರಿಯರನ್ನು ಗೌರವಿಸುವ ಕೈಂಕರ್ಯವೇ ನಮ್ಮ ಸಂಸ್ಕೃತಿ ಎಂಬ ಮಾತಿಗೆ ಅನ್ವರ್ಥವಾಗಿ ಶಾಲೆ ಮತ್ತು ಶಾಲೆಯ ವಿದ್ಯಾರ್ಥಿಗಳ ಹಿತೈಷಿಗಳಾದ ಊರಿನ ಹಿರಿಯರಾದ ಚಿಕ್ಕನಾಯಕ, ಜಗನ್ನಾಥ್, ಕುಮಾರ್ ಹಾಗೂ ನಾಗರತ್ನ ಅವರುಗಳನ್ನು ಕಾವೇರಿ ಮತ್ತು ಹಿರಣ್ಮಯಿ ಎರಡೂ ಸಂಸ್ಥೆಗಳ ವತಿಯಿಂದ ಸನ್ಮಾನಿಸಲಾಯಿತು. ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ವಿಶ್ರಾಂತ ಶಿಕ್ಷಕ ಎ.ಸಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಶಿಕ್ಷಕ ಬಿಳಿಕೆರೆ ಬಿ.ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಡಯಟ್‌ನ ಉಪನ್ಯಾಸಕ ಆರ್. ತಮ್ಮಯ್ಯ, ಶಿಕ್ಷಕರಾದ ಬಿ.ಎಸ್.ತಿರುಮಲ್ಲೇಶ್, ಎಂ.ರಾಘವೇಂದ್ರ, ಪ್ರಕಾಶ್ ಚಾಮಲಾಪುರ, ಹೆಚ್.ಎಂ. ಶೋಭಾ, ಸುಧಾ ಪೂಜಾರ್ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸಿಎಂ ಕುಮಾರಸ್ವಾಮಿ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲು



ಬೆಂಗಳೂರು, ಆ.30(ಕೆಎಂಶಿ)–ತೀವ್ರ ಜ್ವರದಿಂದ ಬಳಲುತ್ತಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ನಗರದ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್ಚಿನ ಚಿಕಿತ್ಸೆ ಸಲುವಾಗಿ ಅವರನ್ನು ತೀವ್ರ ನಿಗಾ ಘಟಕದಲ್ಲಿರಿಸಿದ್ದು, ಕುಮಾರಸ್ವಾಮಿ ಅವರ ಆರೋಗ್ಯದ ಮೇಲೆ ತೀವ್ರ ನಿಗಾ ವಹಿಸಲಾಗಿದೆ ಎಂದು ಆಸ್ಪತ್ರೆ ಪ್ರಕಟಣೆ ತಿಳಿಸಿದೆ. ಅಸ್ವಸ್ಥತೆ ಮತ್ತು ಬಳಲಿಕೆಯಿಂದ ಇಂದು ಬೆಳಗಿನ ಜಾವ ಆಸ್ಪತ್ರೆಗೆ ದಾಖಲಾದರು. ಕೂಡಲೇ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಾಗಿದೆ. ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಿದೆ.

ಸಾಮೂಹಿಕ ಯಜುರುಪಾಕರ್ಮ



ಮೈಸೂರು, ಆ. 30– ಮೈಸೂರಿನ ಶ್ರೀರಾಮಚಂದ್ರಾಪುರ ಮಠದ ಹವ್ಯಕ ಮಹಾಮಂಡಲದ ಮೈಸೂರು ವಲಯದ ವತಿಯಿಂದ ನಗರದ ಬೋಗಾದಿಯ ಸಾಯಿ ಸರಸ್ವತಿ ವಿದ್ಯಾ ಕೇಂದ್ರದ ಆವರಣದಲ್ಲಿ ಸಾಮೂಹಿಕ ಯಜುರುಪಾಕರ್ಮವನ್ನು ಹಮ್ಮಿಕೊಳ್ಳಲಾಗಿತ್ತು.

ವಲಯದ ವೈದಿಕ ವಿಭಾಗದ ಮುಖ್ಯಸ್ಥರಾದ ಶಂಭು ಉಪಾಧ್ಯಾಯ ಹಾಗೂ ಶ್ರೀಪಾದ ಭಟ್ ನೇತೃತ್ವದಲ್ಲಿ ಕಾರ್ಯಕ್ರಮ ನೆರವೇರಿತು. ಉತ್ಸರ್ಜನ ಅಂಗವಾಗಿ ಬಲಿ, ಮಾತ–ಪಿತೃ, ಗುರುಗಳ ಸ್ಮರಿಸಿ ಹೋಮ, ಉಪಾಕರ್ಮ ಅಂಗವಾಗಿ ನೂತನ ಯಜ್ಞೋಪವೀತ ಧಾರಣೆ, ವಿಸರ್ಜನೆ ಹಾಗೂ ಮಹಾ ತರ್ಪಣ ನಡೆಯಿತು. ಕಾರ್ಯಕ್ರಮದಲ್ಲಿ ಮೈಸೂರು ವಲಯದ ಅಧ್ಯಕ್ಷರಾದ ಜಿ.ಆರ್.ಮೋಹನ್ ಮಂಕಾಳ, ಕಾರ್ಯದರ್ಶಿ ರಾಕೇಶ್ ಭಟ್, ಸಂಘಟನಾ ಕಾರ್ಯದರ್ಶಿ ಸಂಪ ಕೃಷ್ಣಮೂರ್ತಿ, ಕೋಶಾಧಿಕಾರಿ ಪಡಾರು ರಾಮಕೃಷ್ಣ ಭಟ್, ಮುಖಂಡರಾದ ಸದಾಶಿವ, ಗಿರಿಜಾಶಂಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಬಸ್ಸಿನಲ್ಲಿ ಸಿಕ್ಕ ಚಿನ್ನದ ಬ್ರೇಸ್‌ಲೆಟ್ ವಾರಸುದಾರರಿಗೆ ಒಪ್ಪಿಸಿ ಪ್ರಾಮಾಣಿಕತೆ ಮೆರೆದರು



ಮಡಿಕೇರಿ, ಆ.30– ಪ್ರಯಾಣಿಕರೋರ್ವರು ಕಳೆದುಕೊಂಡಿದ್ದ ಚಿನ್ನದ ಬ್ರೇಸ್ ಲೆಟ್ ಅನ್ನು ವಾರಸುದಾರರಿಗೆ ತಲುಪಿಸಿ ನಗರ ಠಾಣೆಯ ಸಿಬ್ಬಂದಿ ಪ್ರಾಮಾಣಿಕತೆ ಮೆರೆದಿದ್ದಾರೆ.

ಸೋಮವಾರಪೇಟೆ ನಿವಾಸಿ ಪತ್ರಕರ್ತ ತೇಲಪಂಡ ಕವನ್ ಕಾರ್ಯಪ್ಪ ಅವರು ಆ.29ರಂದು ಕುಶಾಲನಗರದಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಮಡಿಕೇರಿಗೆ ತೆರಳುತ್ತಿದ್ದ ಸಂದರ್ಭ ಬ್ರೇಸ್ ಲೆಟ್ ಕಳೆದುಕೊಂಡಿದ್ದರು. ಇದೇ ಸಂದರ್ಭ ಬಸ್‌ನಲ್ಲಿದ್ದ ಪ್ರಯಾಣಿಕರೋರ್ವರು ಬ್ರೇಸ್ ಲೆಟ್ ಅನ್ನು ಚಾಲಕರಿಗೆ ನೀಡಿ ಪ್ರಾಮಾಣಿಕತೆ ಮೆರೆದಿದ್ದಾರೆ. ಆಗ ಚಾಲಕ ಮಡಿಕೇರಿ ಬಸ್ ನಿಲ್ದಾಣದಲ್ಲಿ ಕರ್ತವ್ಯದಲ್ಲಿದ್ದ ಮಹಿಳಾ ಪೊಲೀಸ್ ಸಿಬ್ಬಂದಿ ಪ್ರೀತಿ ಘಾಟಗೆ ಅವರಿಗೆ ಮಾಹಿತಿ ನೀಡಿದ್ದರು.

ತಕ್ಷಣವೇ ಅವರು ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಪ್ರಾಮಾಣಿಕತೆ ಮೆರೆದಿದ್ದಾರೆ. ಬುಧವಾರದಂದು ನಗರ ಠಾಣೆಯಲ್ಲಿ ಕವನ್ ಕಾರ್ಯಪ್ಪ ಅವರು ಪ್ರೀತಿ ಘಾಟಗೆ ಅವರಿಂದ ಬ್ರೇಸ್ ಲೆಟ್ ಅನ್ನು ಪಡೆದುಕೊಂಡರು. ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಠಾಣಾಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರೀತಿ ಅವರ ಪ್ರಾಮಾಣಿಕತೆಗೆ ಪ್ರಶಂಶೆ ವ್ಯಕ್ತಪಡಿಸಿದ್ದಾರೆ.

ಡಿಪೋ ವ್ಯವಸ್ಥಾಪಕಿ ಕಿರುಕುಳದಿಂದ ಸಿಬ್ಬಂದಿ ಆತ್ಮಹತ್ಯೆಗೆ ಯತ್ನ ಆರೋಪ

ಕೆಎಸ್‌ಆರ್‌ಟಿಸಿ ನೌಕರರ ಪ್ರತಿಭಟನೆ



ಮಡಿಕೇರಿ, ಆ.30– ಮಡಿಕೇರಿ ಕೆಎಸ್ ಆರ್‌ಟಿಸಿ ಡಿಪೋ ಘಟಕ ವ್ಯವಸ್ಥಾಪಕಿ ಕಿರುಕುಳದಿಂದ ಅಲ್ಲಿನ ಸಿಬ್ಬಂದಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು, ತಕ್ಷಣವೇ ವ್ಯವಸ್ಥಾಪಕಿಯನ್ನು ಅಮಾನತು ಮಾಡುವಂತೆ ಆಗ್ರಹಿಸಿ ಕೆಎಸ್‌ಆರ್‌ಟಿಸಿ ನೌಕರರು ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಡಿಪೋದಲ್ಲಿ ಪ್ರತಿಭಟನೆ ನಡೆಸಿದ ನೌಕರರು, ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಮಡಿಕೇರಿ ಡಿಪೋದಲ್ಲಿ ಬಸ್‌ಗಳನ್ನು ಸ್ವಚ್ಛ ಮಾಡಲು ಯಂತ್ರಗಳಿವೆ. ಇದಕ್ಕಾಗಿಯೇ ಲಕ್ಷಾಂತರ ರೂ.ಗಳನ್ನು ಇಲಾಖೆಯಿಂದ ವ್ಯಯಿಸಲಾಗುತ್ತಿದೆ. ಹೀಗಿದ್ದರೂ ಸಿಬ್ಬಂದಿಗಳ ಕೈಯಿಂದಲೇ ಬಸ್‌ನ ಸ್ವಚ್ಛಗೊಳಿಸಲಾಗುತ್ತಿದೆ ಎಂದು ಆರೋಪಿಸಿದರು. ಹೆಚ್ಚುವರಿಯಾಗಿ ಮಾಡಿದ ಕೆಲಸಕ್ಕೆ ಯಾವುದೇ ಹೆಚ್ಚುವರಿ ಸಂಬಳ ನೀಡುತ್ತಿಲ್ಲ ಈ ಅವ್ಯವಸ್ಥೆ ಕೇವಲ ಪುತ್ತೂರು ಡಿಪೋ ವಿಭಾಗಗಳಲ್ಲಿ ಹೆಚ್ಚು ಕಂಡು ಬರುತ್ತಿದೆ ಎಂದು ಆರೋಪಿಸಿದರು. ಬಳಿಕ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಪುತ್ತೂರು ಡಿಪೋ ವಿಭಾಗೀಯ ನಿಯಂತ್ರಣಾಧಿಕಾರಿ ಜಯಕರ ಶೆಟ್ಟಿ ಅವರಿಗೆ ನೀಡಲಾಯಿತು.


ಬಳಿಕ ಮಾತನಾಡಿದ ಕೆಎಸ್‌ಆರ್‌ಟಿಸಿ ನೌಕರರ ಸಂಘದ ರಾಜ್ಯಾಧ್ಯಕ್ಷ ಜಗದೀಶ್, ನಿನ್ನೆ ದಿನ ತನ್ನ ಕೈಕೆಳಗಿನ ಸಿಬ್ಬಂದಿಗೆ ಕಿರುಕುಳ ನೀಡಿದ ಡಿಪೋ ವ್ಯವಸ್ಥಾಪಕಿಯನ್ನು ಅಮಾನತು ಮಾಡಬೇಕೆಂದು ಒತ್ತಾಯಿಸಲಾಗಿದೆ. ಇದೀಗ ಬೆಂಗಳೂರು ಕೇಂದ್ರ ಕಚೇರಿಯ ಅಧಿಕಾರಿಗಳು ಮಡಿಕೇರಿ ಡಿಪೋ ವ್ಯವಸ್ಥಾಪಕಿಯನ್ನು ವರ್ಗಾವಣೆ ಮಾಡಿದ್ದಾರೆ. ಪ್ರಕರಣದ ತನಿಖಾ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಮಡಿಕೇರಿ ಡಿಪೋದಲ್ಲಿ ಸಿಬ್ಬಂದಿಗಳ ಮೇಲೆ ದೌರ್ಜನ್ಯ ನಡೆಸಲಾಗುತ್ತಿದ್ದು, ವಿಭಾಗೀಯ ನಿಯಂತ್ರಕರು ಇದಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿದರು.

ಪುತ್ತೂರು ಡಿಪೋ ವಿಭಾಗೀಯ ನಿಯಂತ್ರಣಾಧಿಕಾರಿ ಜಯಕರ ಶೆಟ್ಟಿ ಮಾತನಾಡಿ, ಕೆಎಸ್‌ಆರ್‌ಟಿಸಿ ನೌಕರರ ಸಂಘದ ರಾಜ್ಯಾಧ್ಯಕ್ಷರು ಮತ್ತು ಪದಾಧಿಕಾರಿಗಳ ಜೊತೆಯಲ್ಲಿ ಸೌಹಾರ್ದಯುತವಾಗಿ ಚರ್ಚೆ ನಡೆಸಲಾಗಿದೆ. ಈ ವೇಳೆ ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ತನ್ನ ಕಾರ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಬೇಡಿಕೆಗಳನ್ನು ಈಡೇರಿಸಲಾಗುತ್ತದೆ ಎಂದು ಭರವಸೆ ನೀಡಿದರು. ಮಡಿಕೇರಿ ಡಿಪೋ ವ್ಯವಸ್ಥಾಪಕರನ್ನು ರಾಮನಾಥಪುರಕ್ಕೆ ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದರು. ಪ್ರತಿಭಟನೆಯ ಸಂದರ್ಭ ನಗರ ಪೊಲೀಸರು ಬಂದೋಬಸ್ತ್ ಕಲ್ಪಿಸಿದ್ದರು.

ಇಂದು ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆ

ಮಡಿಕೇರಿ, ಆ.30– ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ಆ.31 ರಂದು ಬೆಳಗ್ಗೆ 11.30 ಗಂಟೆಗೆ ನಗರ ಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ವಿಜಯ ಅವರು ತಿಳಿಸಿದ್ದಾರೆ.

ಜಿಲ್ಲಾ ಪರಿಷತ್ ಮಾಜಿ ಸದಸ್ಯ ಮನೆಯಪಂಡ ರವಿ ಮೇದಪ್ಪ ನಿಧನ



ಗೋಣಿಕೊಪ್ಪ, ಆ.30– ಜಿಲ್ಲಾ ಪರಿಷತ್ ಮಾಜಿ ಸದಸ್ಯರು ಹಾಗೂ ದಕ್ಷಿಣ ಕೊಡಗಿನ ಸುಂಟಿಕೊಪ್ಪದ ಅರಯವತೊಕ್ಲು ಗ್ರಾಮದ ನಿವಾಸಿ ಮನೆಯಪಂಡ ರವಿ ಮೇದಪ್ಪ (84) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಗೋಣಿಕೊಪ್ಪಲಿನ ವಕ್ಕ ತೂಟುಂಗಲ ಗ್ರಾಮದಲ್ಲಿ ನಾಳೆ (ಗುರುವಾರ) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರಣ್ಯ ಇಲಾಖೆ ಮಹಿಳಾ ಅಧಿಕಾರಿ ನೇಣಿಗೆ ಶರಣು

ಮಡಿಕೇರಿ, ಆ.30– ಅರಣ್ಯ ಇಲಾಖೆಯ ಮಹಿಳಾ ಕಿರಿಯ ಅಧಿಕಾರಿಯೋರ್ವರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಮಡಿಕೇರಿಯಲ್ಲಿ ನಡೆದಿದೆ.



ಮಂಡ್ಯ ಮೂಲದ ರಶ್ಮಿ(27) ಎಂಬವರೇ ಮೃತ ದುರ್ದೈವಿಯಾಗಿದ್ದಾರೆ. ಮಡಿಕೇರಿಯ ಅರಣ್ಯ ಇಲಾಖೆಯ ಸಂಶೋಧನೆ ವಿಭಾಗದಲ್ಲಿ ಡಿಆರ್‌ಎಫ್‌ಓ ಆಗಿ ಕಳೆದ 2 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ರಶ್ಮಿ ಅವರು ಅರಣ್ಯ ಇಲಾಖೆಯ ವಸತಿ ಗೃಹದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಂಗಳವಾರ ರಾತ್ರಿಯೇ ಈ ಘಟನೆ ನಡೆದಿರಬಹುದು ಎಂದು ಶಂಕಿಸಲಾಗಿದ್ದು, ಬುಧವಾರ ಬೆಳಗ್ಗೆ ಪ್ರಕರಣ ಬೆಳಕಿಗೆ ಬಂದಿದೆ. ಸ್ಥಳಕ್ಕೆ ಪೊಲೀಸ್ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಹಜರು ನಡೆಸಿ ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಮೃತ ದೇಹದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಆತ್ಮಹತ್ಯೆ ಘಟನೆ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಮಡಿಕೇರಿಯ ಅರಣ್ಯ ಇಲಾಖೆಯ ಡಿ.ಎಫ್.ಓ ಎ.ಟಿ.ಪೂವಯ್ಯ, ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ರಶ್ಮಿ ಸಾವಿಗೆ ಸಂತಾಪ ಸೂಚಿಸಿದ್ದಾರೆ.

ನಾಳೆ ಸಿಎನ್‌ಸಿಯಿಂದ 'ಕೈಲ್ ಪೊಳ್ದ್' ಆಚರಣೆ

ಮಡಿಕೇರಿ, ಆ.30– ಪ್ರಕೃತಿಯ ಆರಾಧಕರಾದ ಕೊಡವ ಬುಡಕಟ್ಟು ಜನಾಂಗ ಆಚರಿಸಿಕೊಂಡು ಬರುತ್ತಿರುವ 'ಕೈಲ್ ಪೊಳ್ದ್' ಹಬ್ಬವನ್ನು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕಳೆದ 28 ವರ್ಷಗಳಿಂದ ಸಾರ್ವತ್ರಿಕವಾಗಿ ಆಚರಿಸಿಕೊಂಡು ಬರುತ್ತಿದೆ. 29 ನೇ ವರ್ಷದ 'ಕೈಲ್ ಪೊಳ್ದ್' ಅನ್ನು ಈ ಬಾರಿ ಸೆ.1 ರಂದು ಆಚರಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು ಮಡಿಕೇರಿ ಸಮೀಪ ಕ್ಯಾಪಿಟಲ್ ವಿಲೇಜ್‌ನ ಮಂದ್‌ನಲ್ಲಿ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಸಾಂಪ್ರದಾಯಿಕ ಕೈಲ್ ಪೊಳ್ದ್ ಹಬ್ಬವನ್ನು ಆಚರಿಸಲಾಗುವುದು ಎಂದು ಹೇಳಿದ್ದಾರೆ. ಗುರು ಹಿರಿಯರು, ಕಾವೇರಿ ಮಾತೆ, ಭೂತಾಯಿ, ಬೆಟ್ಟ ಗುಡ್ಡಗಳು ಮತ್ತು ಸೂರ್ಯಚಂದ್ರರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿ ಮೀಧಿ ಅರ್ಪಿಸಲಾಗು ವುದು. ಸಾಂಪ್ರದಾಯಿಕ ಕೋವಿಗಳನ್ನು ಥೋಕ್ ಪೂಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಗುವುದು. ಅಲ್ಲದೆ ಗಾಳಿಯಲ್ಲಿ ಗುಂಡು ಹಾರಿಸಿ ಕೋವಿ ಹಕ್ಕನ್ನು ಪ್ರತಿಪಾದಿಸಲಾಗುವುದು.

'ಕೈಲ್ ಪೊಳ್ದ್' ಪ್ರಯುಕ್ತ ಕೊಡವ ಸಾಂಪ್ರದಾಯಿಕ ಊಟ ಮತ್ತು ಖಾದ್ಯದ ವ್ಯವಸ್ಥೆಯನ್ನು ಮಾಡಲಾಗಿದೆ. ಹಬ್ಬದಲ್ಲಿ ಪಾಲ್ಗೊಳ್ಳುವವರು ತಮ್ಮ ತಮ್ಮ ಕೋವಿಗಳೊಂದಿಗೆ ಆಗಮಿಸುವಂತೆ ಅವರು ಮನವಿ ಮಾಡಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಕಾವೇರಿದ ಪ್ರತಿಭಟನೆ

ಮಂಡ್ಯ, ಆ.30– ತಮಿಳುನಾಡಿಗೆ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡುವಂತೆ ನೀಡಿರುವ ಆದೇಶವನ್ನು ಖಂಡಿಸಿ ಜಿಲ್ಲೆಯಾದ್ಯಂತ ರೈತರು ಮತ್ತು ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರು ಬೀದಿಗಿಳಿದು ಪ್ರತಿಭಟನೆ ಆರಂಭಿಸಿದ್ದಾರೆ. ಕೆಆರ್‌ಎಸ್‌ನಲ್ಲಿ ಅಹೋರಾತ್ರಿ ಧರಣಿ ಆರಂಭವಾದರೆ, ಮಂಡ್ಯದಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಪ್ರತಿಭಟನೆ ನಡೆಸಲಾಗಿದೆ. ಇದೇ ರೀತಿ ರೈತರು ಗುರುವಾರ ಬೃಹತ್ ಪ್ರತಿಭಟನೆಗೆ ಮುಂದಾಗಿದ್ದು, ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಪ್ರತಿಭಟನೆ ಕಾವೇರುತ್ತಿದೆ.

ಕೆಆರ್‌ಎಸ್ ಬಳಿ ಅಹೋರಾತ್ರಿ ಧರಣಿ ಆರಂಭ



ಶ್ರೀರಂಗಪಟ್ಟಣ, ಆ.30– ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಮೇಲುಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತಸಂಘದಿಂದ ಅಹೋರಾತ್ರಿ ಧರಣಿ ಆರಂಭಿಸಲಾಯಿತು.

ಕೆಆರ್‌ಎಸ್ ಬೃಂದಾವನ ಗಾರ್ಡನ್‌ಗೆ ತೆರಳುವ ರಸ್ತೆಯಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದ ದರ್ಶನ್ ಪುಟ್ಟಣ್ಣಯ್ಯ ಹಾಗೂ ರೈತರ ಸಂಘದ ಕಾರ್ಯಕರ್ತರು ಸರ್ಕಾರ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿದರು.

ಸಂಕಷ್ಟದ ಪರಿಸ್ಥಿತಿಯಲ್ಲೂ ತಮಿಳುನಾಡಿಗೆ ನೀರು ಬಿಡುಗಡೆ ಮಾಡುತ್ತಿರುವುದು ಖಂಡನೀಯ. ವಾಸ್ತದ ಪರಿಸ್ಥಿತಿ ಅರ್ಥ ಮಾಡಿಕೊಳ್ಳದೆ ಪ್ರಾಧಿಕಾರಿ ಈ ರೀತಿ ಆದೇಶ ನೀಡಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಪ್ರಸ್ತುತ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹದ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಸಂಪೂರ್ಣವಾಗಿ ವಿಫಲವಾದ ಕಾರಣ ಈ ರೀತಿ ರಾಜ್ಯದ ರೈತರಿಗೆ ಅನ್ಯಾಯವಾಗಿದ್ದು, ರೈತರ ಹಿತ ಬಲಿಕೊಟ್ಟು ನೀರು ಬಿಟ್ಟಿದೆ ಎಂದು ಕಿಡಿಕಾರಿದರು. ತಕ್ಷಣವೇ ತಮಿಳುನಾಡಿಗೆ ಹರಿದು ಬಿಟ್ಟಿರುವ ನೀರನ್ನ ನಿಲ್ಲಿಸಬೇಕು, ಇಲ್ಲದಿದ್ದರೆ ನೀರು ನಿಲ್ಲಿಸುವವರೆಗೂ ಪ್ರತಿಭಟನೆ ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು.

ಧರಣಿಯಲ್ಲಿ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಕೆಂಪುಗೌಡ, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಕೃಷ್ಣೇಗೌಡ, ಪಾಂಡವಪುರ ತಾಲೂಕು ಅಧ್ಯಕ್ಷ ಪಿ.ನಾಗರಾಜು, ಕಾರ್ಯದರ್ಶಿ ವಿಜಿಕುಮಾರ್, ಪಾಲಹಳ್ಳಿ ರಾಮಣ್ಣ, ಕಡತನಾಳು ಬಾಲು, ಬಲರಾಮು, ಕಟ್ಟೇರಿ ಮಹಾದೇವು ಸೇರಿದಂತೆ ವಿವಿದೆಡೆಗಳಿಂದ ನೂರಾರು ರೈತರು ಭಾಗವಹಿಸಿದ್ದರು.

ತಮಿಳುನಾಡಿಗೆ ನೀರು ಬಿಡುತ್ತಿರುವ ಕ್ರಮ ಖಂಡಿಸಿ ಪ್ರತಿಭಟನೆಗೆ ನಿರ್ಧಾರ


ಮಂಡ್ಯ : ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಾಳೆ (ಗುರುವಾರ) ಪ್ರತಿಭಟನೆಗೆ ಕರೆ ನೀಡಿದೆ. ನಗರದ ಗಾಂಧಿ ಭವನದಲ್ಲಿ ನಡೆದ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳ ಸಭೆಯ ನಂತರ ನಾಳೆಯಿಂದಲೇ ಪ್ರತಿಭಟನೆಗೆ ಕರೆ ನೀಡಿದ್ದು, ಎಲ್ಲ ಸಂಘ ಸಂಸ್ಥೆಗಳೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ನಿರ್ದೇಶನದಂತೆ 5 ಸಾವಿರ ಕ್ಯೂಸೆಕ್ಸ್ ನೀರನ್ನು ಯಾವುದೇ ಕಾರಣಕ್ಕೂ ಬಿಡುಗಡೆ ಮಾಡದಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದರೂ, ಸರ್ಕಾರ ನೀರು ಹರಿಸುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿ ಆ. 31ರಂದು ನಗರದ ವಿಶ್ವೇಶ್ವರಯ್ಯ ಪ್ರತಿಮೆ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದ್ದು, ಧರಣಿ ಸತ್ಯಾಗ್ರಹಕ್ಕೆ ಜಿಲ್ಲಾ ರೈತ ಬಾಂಧವರು, ಪ್ರಗತಿಪರ ಸಂಘಟನೆಗಳು, ಸಂಘ ಸಂಸ್ಥೆಗಳು, ಕನ್ನಡ ಸಂಘಟನೆಗಳು ಎಲ್ಲರೂ ಭಾಗವಹಿಸುವಂತೆ ಒತ್ತಾಯಿಸಿದರು.

ಮಾಜಿ ಶಾಸಕ ಎಂ.ಎಸ್. ಆತ್ಮಾನಂದ, ಮುಖಂಡರಾದ ಜಿ.ಬಿ. ಶಿವಕುಮಾರ್, ಮಲ್ಲನಾಯಕನಕಟ್ಟೆ ಬೋರೇಗೌಡ, ಸುನಂದ ಜಯರಾಂ, ಪ್ರಶಾಂತ್ ಬಾಬು ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೆಆರ್‌ಎಸ್ ಡ್ಯಾಂನಿಂದ ಮತ್ತೆ ತಮಿಳುನಾಡಿಗೆ ನೀರು



ಮಂಡ್ಯ, ಆ.30– ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶಕ್ಕೆ ಮಣಿದ ರಾಜ್ಯ ಸರ್ಕಾರ ಕೆಆರ್‌ಎಸ್ ಡ್ಯಾಂನಿಂದ ಮತ್ತೆ ತಮಿಳುನಾಡಿಗೆ ಕಳೆದ ಮಂಗಳವಾರ ರಾತ್ರಿಯಿಂದಲೇ ಕಾವೇರಿ ನದಿ ಮೂಲಕ ನೀರು ಬಿಡುಗಡೆ ಮಾಡುತ್ತಿದೆ.

ಪ್ರಾಧಿಕಾರದ ಆದೇಶದಂತೆ 5 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡುತ್ತಿದ್ದು, ಡ್ಯಾಂನ ಗೇಟ್‌ಗಳ ಮೂಲಕ ನೀರು ಹೊರಕ್ಕೆ ಹೋಗುತ್ತಿದೆ. ರೈತರ ವಿರೋಧಕ್ಕೂ ಬಗ್ಗದೆ ರಾಜ್ಯ ಸರ್ಕಾರ ನೀರು ಬಿಡುತ್ತಿದ್ದು, ಕುಡಿಯುವ ಉದ್ದೇಶಕ್ಕೆ ಹಾಗೂ ತಮಿಳುನಾಡಿಗೆ ಸೇರಿ 7380 ಕ್ಯೂಸೆಕ್ ನೀರನ್ನು ಈಗಾಗಲೇ ಬಿಡುಗಡೆ ಮಾಡಲಾಗುತ್ತಿದೆ.

ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ಮತ್ತೆ ಅನ್ಯಾಯ: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಮಂಡ್ಯ ರೈತರಿಗೆ ಮರಣ ಶಾಸನ ಬರೆದಂತಾಗಿದ್ದು, ಪ್ರಾಧಿಕಾರದ ನಿರ್ದೇಶನದಂತೆ 15 ದಿನ ತಮಿಳುನಾಡಿಗೆ 5 ಸಾವಿರ ಕ್ಯೂಸೆಕ್ ಬಿಟ್ಟರೆ ಮಂಡ್ಯ ಜಿಲ್ಲೆಯ ರೈತರ ಸ್ಥಿತಿ ಚಿಂತಾಜನಕವಾಗಲಿದೆ.

ತಮಿಳುನಾಡಿಗೆ ನೀರು ಬಿಟ್ಟಿರುವುದರಿಂದ ಮಂಡ್ಯ ಜಿಲ್ಲೆಗೆ ಕಟ್ಟು ಪದ್ಧತಿಯಲ್ಲೂ ನೀರು ಸಿಗದಂತಾಗಲಿದ್ದು, ಕಾವೇರಿ ನೀರನ್ನೇ ನಂಬಿರುವ ಮಂಡ್ಯ ಜನರ ಸ್ಥಿತಿ ಚಿಂತಾಜನಕವಾಗಲಿದೆ. 15 ದಿನ 5 ಸಾವಿರ ಕ್ಯೂಸೆಕ್ ಬಿಟ್ಟರೆ ಡ್ಯಾಂನಲ್ಲಿರುವ 7 ಟಿಎಂಸಿ ನೀರು ಖಾಲಿಯಾಗಲಿದ್ದು, ಸದ್ಯ ಇರುವ 24 ಟಿಎಂಸಿಯಿಂದ 17 ಟಿಎಂಸಿಗೆ ನೀರು ಕುಸಿಯಲಿದೆ.

17 ಟಿಎಂಸಿ ಪೈಕಿ 5 ಟಿಎಂಸಿ ಡೆಡ್ ಸ್ಟೋರೇಜ್ ಆಗಿದ್ದು, ಅಲ್ಲಿಗೆ ಉಳಿಯೋದು ಕೇವಲ 12 ಟಿಎಂಸಿ ನೀರು ಮಾತ್ರ 12 ಟಿಎಂಸಿಯಲ್ಲಿ ಮಂಡ್ಯ ಜಿಲ್ಲೆಯ ರೈತರ ಬೆಳೆಗೆ ನೀರು ಕೊಡೋದು ಅಸಾಧ್ಯವಾಗಲಿದ್ದು, ನಾಲೆಗಳಿಗೆ ನೀರು ಬಿಡದಿದ್ದರೆ ಬೆಳೆದ ಕಬ್ಬು, ಬಿತ್ತಿರುವ ಭತ್ತದ ಒಣಗಲಿದೆ. ಸರ್ಕಾರ ಹಾಗೂ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಮಂಡ್ಯದಲ್ಲಿ ಅನ್ನದಾತ ದಂಗೆ ಹೇಳೋ ಸಾಧ್ಯತೆ ಇದ್ದು, ಪ್ರತಿಭಟನೆ ಗಳು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಕಣ್ಣಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಪ್ರತಿಭಟನೆ



ಮಂಡ್ಯ, ಆ.30– ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ಕತ್ತಲ ನ್ಯಾಯ ದೊರಕುತ್ತಿದೆ ಎಂದು ವಿರೋಧಿಸಿ ಮಂಡ್ಯ ಯೂತ್ ಗ್ರೂಪ್ ಸಂಘಟನೆಯ ಪದಾಧಿಕಾರಿಗಳು ಅಧ್ಯಕ್ಷ ಡಾ.ಅನಿಲ್ ಆನಂದ್ ನೇತೃತ್ವದಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಗರದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಮಹಾವೀರ ವೃತ್ತದಿಂದ ಕಾವೇರಿಗೆ ಅನ್ಯಾಯ ಘೋಷ ವಾಕ್ಯದೊಂದಿಗೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ವಿ.ವಿ.ರಸ್ತೆ, ನೂರಡಿ ರಸ್ತೆ ಮೂಲಕ ಜಾಥಾ ನಡೆಸಿದರು. ಜಯಚಾಮ ರಾಜೇಂದ್ರಒಡೆಯರ್ ವೃತ್ತಕ್ಕೆ ಆಗಮಿಸಿ ಕೆಲಕಾಲ ತಮಿಳುನಾಡಿಗೆ ನೀರು ಬಿಡುಗಡೆ ವಿರೋಧಿಸಿ ಪ್ರತಿಭಟನೆ ನಡೆಸಿದರು.

ಮಂಡ್ಯ ಯೂತ್ ಗ್ರೂಪ್ ಅಧ್ಯಕ್ಷ ಡಾ.ಅನಿಲ್ ಆನಂದ್ ಮಾತನಾಡಿ, ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗಲು ರಾಜಕೀಯ ಪಕ್ಷಗಳೇ ಕಾರಣ. ನದಿ ನೀರಿನ ವಿಚಾರದಲ್ಲಿ ಒಗ್ಗಟ್ಟಿನಿಂದ ಹೋರಾಟಕ್ಕಿಳಿಯದಿರುವುದು ತಮಿಳುನಾಡಿಗೆ ಅನುಕೂಲಕರ ವಾತಾವರಣ ಕಲ್ಪಿಸಿಕೊಟ್ಟಿದೆ ಎಂದು ಹೇಳಿದರು. ಪ್ರತಿಭಟನೆಯಲ್ಲಿ ದರ್ಶನ್, ನವೀನ್, ಪ್ರವೀಣ್, ಸೈಯದ್ ಇಮ್ರಾನ್, ಅರ್ಷದ್, ಖಾಸಿಂ, ವಿನಯ್ ಗೌಡ, ಮಂಜು, ವಿನಯ್, ಪ್ರತಾಪ್, ದೀಪು ಇತರರಿದ್ದರು.

ಸೆ.25ಕ್ಕೆ ಮ.ಮ.ಬೆಟ್ಟದಲ್ಲಿ ಸಾಮೂಹಿಕ ವಿವಾಹ ನಿಗದಿ

ಚಾಮರಾಜನಗರ, ಆ.30– ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮುಂದೂಡಲಾಗಿದ್ದ ಉಚಿತ ಸಾಮೂಹಿಕ ವಿವಾಹವನ್ನು ಸೆ.25ಕ್ಕೆ ನಿಗದಿಪಡಿಸಲಾಗಿದೆ.

ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಉಚಿತ ಸಾಮೂಹಿಕ ವಿವಾಹವನ್ನು ಆ.28ರಂದು ನಿಗದಿಪಡಿಸಲಾಗಿತ್ತು. ಈಗಾಗಲೇ ಪ್ರಾಧಿಕಾರದ ಕಚೇರಿಯಿಂದ 100ಕ್ಕೂ ಅಧಿಕ ಅರ್ಜಿಗಳನ್ನು ವಿತರಿಸಲಾಗಿದ್ದು, ಈ ಪೈಕಿ ವಿವಿಧ ದಾಖಲಾತಿಗಳನ್ನು ಒಳಗೊಂಡ 65 ಅರ್ಜಿಗಳು ಸ್ವೀಕೃತವಾಗಿದೆ. ಉಳಿದ ಅರ್ಜಿದಾರರು ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಲು ಕಾಲಾವಕಾಶ ಕೋರಿದ್ದಾರೆ.

ಕಳೆದ ಸಾಲಿನಲ್ಲಿ ವರನಿಗೆ ಪಂಚೆ, ಷರ್ಟು, ಟವಲ್ ಹಾಗೂ ವಧುವಿಗೆ 2 ಗ್ರಾಂ ಚಿನ್ನದ ತಾಳಿಯನ್ನು ನೀಡಲಾಗಿತ್ತು. ಇದು ಹೆಚ್ಚಿನ ದಿನಗಳು ಬಾಳಿಕೆ ಬಾರದೆ ಇರುವುದನ್ನು ಮನಗಂಡು ಈ ಬಾರಿ 4 ಗ್ರಾಂ ತೂಕವುಳ್ಳ ಚಿನ್ನದ ತಾಳಿ ನೀಡಲು ಉದ್ದೇಶಿಸಲಾಗಿದೆ. ಇನ್ನೂ ಅರ್ಜಿಗಳು ಬರುತ್ತಿರುವುದರಿಂದ ಉಚಿತ ಸಾಮೂಹಿಕ ವಿವಾಹವನ್ನು ಸೆಪ್ಟೆಂಬರ್ 25ಕ್ಕೆ ನಿಗದಿಪಡಿಸಲಾಗಿದೆ.

ಮಹದೇವಪ್ಪ ನಿಧನ



ಚಾಮರಾಜನಗರ, ಆ30– ತಾಲೂಕು ಕಳ್ಳಿಪುರ ಗ್ರಾಮದ ಮಹದೇವಪ್ಪ (58) ಬುಧವಾರ ನಿಧನರಾದರು.

ಮೃತರು ಪತ್ನಿ, ಪುತ್ರಿ ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಗುರುವಾರ ಮಧ್ಯಾಹ್ನ ಅವರ ಸ್ವಗ್ರಾಮ ಕಳ್ಳಿಪುರದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮತಾಂತರಗೊಂಡವರಿಗೆ ಮೀಸಲಾತಿ ಬೇಡ

ಮೀಸಲಾತಿ ಸಂರಕ್ಷಣಾ ಒಕ್ಕೂಟ ನಿರ್ಣಯ



ಚಾಮರಾಜನಗರ, ಆ.30– ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮಗಳಿಗೆ ಮತಾಂತಗೊಂಡಿರುವ ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ವಿಸ್ತರಣೆ ಮಾಡುವುದು ಬೇಡ ಎಂದು ಪರಿಶಿಷ್ಟ ಜಾತಿ ಮೀಸಲಾತಿ ಸಂರಕ್ಷಣಾ ಒಕ್ಕೂಟ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಬುಧವಾರ ಪರಿಶಿಷ್ಟ ಜಾತಿ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ನಡೆದ ಪ್ರಗತಿಪರ ಸಂಘಟನೆಗಳನ್ನೊಳಗೊಂಡ ಮುಕ್ತ ಸಂವಾದದಲ್ಲಿ ಭಾಗವಹಿಸಿದ್ದ ಅನೇಕ ಮುಖಂಡರು ಮಾತನಾಡಿ, ಮೀಸಲಾತಿ ನೀಡಿದರೆ ಭಾರತೀಯ ಮೂಲ ನಿವಾಸಿಗಳಿಗೆ ಅನ್ಯಾಯವಾಗುತ್ತದೆ. ಸಂವಿಧಾನ ಆಶಯಕ್ಕೆ ವಿರುದ್ಧವಾಗುತ್ತದೆ. ಹೀಗಾಗಿ ವಿದೇಶಿ ಧರ್ಮಗಳಾದ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮಗಳಿಗೆ ಮತಾಂತರಗೊಂಡವರು ಆ ಧರ್ಮದಿಂದ ದೊರೆಯುವ ಸಲವತ್ತುಗಳನ್ನು ಪಡೆದುಕೊಂಡು ಆರ್ಥಿಕ, ಶೈಕ್ಷಣಿಕವಾಗಿ ಪ್ರಗತಿ ಹೊಂದಿದ್ದಾರೆ. ಇಂಥದವರಿಗೆ ಮತ್ತೇ ಮೀಸಲಾತಿ ಕಲ್ಪಿಸಿದರೆ ಮೂಲ ನಿವಾಸಿಗಳಾದ ನಿಜವಾದ ದಲಿತರಿಗೆ ಅನ್ಯಾಯವಾಗುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತಪಡಿಸಿದರು.

ಭಾರತೀಯ ಸಂಸ್ಕೃತಿ, ಪರಂಪರೆಗೆ ಪೆಟ್ಟು: ಜಿಪಂ ಮಾಜಿ ಸದಸ್ಯ ಎಸ್. ಮಹದೇವಯ್ಯ ಮುಕ್ತ ಸಂವಾದವನ್ನು ಉದ್ಘಾಟಿಸಿ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ಮೂಲಕ ಮೀಸಲಾತಿ ಕೊಟ್ಟಿದ್ದಾರೆ. ವಿದೇಶಿ ಧರ್ಮಗಳಾದ ಕ್ರಿಶ್ಚಿಯನ್, ಮುಸ್ಲಿಂ ಧರ್ಮಕ್ಕೆ ಹೋದವರಿಗೆ ಮೀಸಲಾತಿ ನೀಡಿದರೆ, ಮೀಸಲಾತಿ ಮೂಲ ಸ್ವರೂಪಕ್ಕೆ ಪೆಟ್ಟು ಬೀಳುತ್ತದೆ. ಅಂಬೇಡ್ಕರ್ ಅನುಯಾಯಿಗಳಾದ ನಾವೆಲ್ಲರೂ ಇದನ್ನು ವಿರೋಧಿಸಬೇಕಾಗಿದೆ. ಪ್ರತಿ ಗ್ರಾಮ, ಹೋಬಳಿ, ತಾಲೂಕು ಕೇಂದ್ರಗಳಲ್ಲಿ ಸಭೆಗಳನ್ನು ನಡೆಸಿ, ನಮ್ಮ ಸಮುದಾಯದಲ್ಲಿ ಜಾಗೃತಿ ಮೂಡಿಸಿ, ಆಯೋಗದ ಮುಂದೆ ಸ್ಪಷ್ಟವಾಗಿ ಹೇಳುವ ಮೂಲಕ ಸರ್ಕಾರದ ಮೇಲೆ ಒತ್ತಡ ಹಾಕೋಣ ಎಂದರು.

ಸಂಜಯಗಾಂಧಿ ವಿಶ್ವ ವಿದ್ಯಾಲಯದ ಡಾ. ಮೋಹನ್ ಮಾತನಾಡಿ, ಕೇಂದ್ರ ಸರ್ಕಾರ ರಚನೆ ಮಾಡಿರುವ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಕೆ.ಜಿ. ಬಾಲಕೃಷ್ಣನ್ ಅವರ ನೇತೃತ್ವದ ಆಯೋಗದ ಮೂವರ ತಂಡ ರಾಜ್ಯಕ್ಕೆ ಸೆಪ್ಟೆಂಬರ್‌ನಲ್ಲಿ ಭೇಟಿ ನೀಡಲಿದೆ. ಈ ಸಂದರ್ಭದಲ್ಲಿ ಸಂಘಟನೆಗಳು ಮುಖಂಡರು ಹಾಗೂ ಯಜಮಾನರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸುವ ಮೂಲಕ ಅಂಬೇಡ್ಕರ್ ಅವರ ಆಶಯಕ್ಕೆ ತಕ್ಕಂತೆ ನಡೆದುಕೊಳ್ಳೋಣ ಎಂದರು. ನಂತರ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಸಿ.ಎಂ. ಕೃಷ್ಣಮೂರ್ತಿ ಮಾತನಾಡಿ, ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮಕ್ಕೆ ಹೋದವರು ಅಂಬೇಡ್ಕರ್ ವಿರೋಧಿಗಳು. ಅವರ ಮನೆ, ಮನದಲ್ಲಿ ಅಂಬೇಡ್ಕರ್ ಇಲ್ಲ ನಮ್ಮ ಆಚಾರ, ಸಂಸ್ಕೃತಿ ಪರಂಪರೆ ಇಲ್ಲ. ಇವರಿಗೆ ಪರಿಶಿಷ್ಟ ಜಾತಿ ಮೀಸಲಾತಿ ಕೇಳುವ ಹಕ್ಕು ಇಲ್ಲ ಎಂದರು.

ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ವಾದಿರಾಜು, ದಲಿತ ಮುಖಂಡರಾದ ಮುಡ್ಲಾ ಕೂಡು ಪ್ರಕಾಶ್, ಯರಿಯೂರು ರಾಜಣ್ಣ, ಕೊಳ್ಳೇ ಗಾಲದ ನಾಗರಾಜು(ಕಮಾಲ್), ನಲ್ಲೂರು ಪರಮೇಶ್, ದೊಡ್ಡಿಂದುವಾಡಿ ಸಿದ್ದರಾಜು, ಮಾದೇಶ್, ಶ್ರೀನಿವಾಸ್, ಹೊಂಗನೂರು ರಾಜಣ್ಣ, ಅರಕವಾಡಿ ನಾಗೇಂದ್ರ, ಅಗತಗೌಡನಹಳ್ಳಿ ಬಸವ ರಾಜು, ಸಿ.ಕೆ ಮಂಜುನಾಥ್, ಛಲವಾದಿ ಮಹಾಸಭಾದ ಅಧ್ಯಕ್ಷ ರಮೇಶ್, ಕೊರಮ ಜನಾಂಗದ ಮಾದೇಶ್, ಬೋವಿ ಜನಾಂಗದ ಶ್ರೀನಿವಾಸ್ ಸೇರಿದಂತೆ ಜಿಲ್ಲೆಯ ವಿವಿಧ ದಲಿತ ಪರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಶ್ರೀರಾಮೇಶ್ವರ ದೇವಾಲಯದಲ್ಲಿ ಸೋಮ ಪ್ರದೋಷ ಪೂಜೆ



ಗುಂಡ್ಲುಪೇಟೆ, ಆ.30– ಪಟ್ಟಣದ ಶ್ರೀರಾಮೇಶ್ವರ ದೇವಾಲಯದಲ್ಲಿ ಸೋಮ ಪ್ರದೋಷದ ಅಂಗವಾಗಿ ದೇವಾಲಯದಲ್ಲಿರುವ ಶಿವಲಿಂಗಕ್ಕೆ ಅರಿಶಿನ ಮತ್ತು ಹೂಗಳಿಂದ ಅಲಂಕಾರ ಮಾಡಿ ಪ್ರಧಾನ ಅರ್ಚಕರಾದ ಶಂಕರನಾರಾಯಣ ಜೋಯಿಸ್ ಮತ್ತು ವೆಂಕಟಪತಿ ಜೋಯಿಸ್ ನೇತೃತ್ವದಲ್ಲಿ ವಿಶೇಷ ಪೂಜೆ ಹಾಗೂ ಮಂಗಳಾರತಿಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಪಟ್ಟಣದ ವಿವಿಧ ಬಡಾವಣೆಯ ನೂರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

ಕೆಎಸ್‌ಆರ್‌ಟಿಸಿ ಬಸ್‌ಗಳಿಲ್ಲದೇ ಪ್ರಯಾಣಿಕರ ಪರದಾಟ

- ಮೈಸೂರಿನಲ್ಲಿ ಗೃಹಲಕ್ಷ್ಮೀ ಚಾಲನೆ ಕಾರ್ಯಕ್ರಮಕ್ಕೆ ಬಸ್‌ಗಳ ನಿಗದಿ
- ಗಂಟೆಗಂಟಲ್ಲೇ ಕಾದು ನಿಂತ ವಿದ್ಯಾರ್ಥಿಗಳು, ನೌಕರರು, ಪ್ರವಾಸಿಗರು



ಚಾಮರಾಜನಗರ, ಆ.30– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯನ್ನು ಮೈಸೂರಿನಲ್ಲಿ ಅದ್ದೂರಿಯಾಗಿ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ ಬಸ್‌ಗಳನ್ನು ನಿಯೋಜನೆಗೊಳಿಸಿದ್ದರಿಂದ ಸೂಕ್ತ ಬಸ್ ವ್ಯವಸ್ಥೆ ಇಲ್ಲದೇ ಪ್ರಯಾಣಿಕರು ಪರದಾಡುವಂತಾಯಿತು.

ಬುಧವಾರ ಬೆಳಗ್ಗೆಯಿಂದಲೇ ಜಿಲ್ಲೆಯಾದ್ಯಂತ ಸಾರಿಗೆ ಬಸ್ ಸಂಚಾರದಲ್ಲಿ ಭಾರೀ ವ್ಯತ್ಯಯ ಉಂಟಾಯಿತು. ಇದರಿಂದ ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಕೊಳ್ಳೇಗಾಲ, ಹನೂರು, ಯಳಂದೂರು, ನಂಜನಗೂಡು, ಗುಂಡ್ಲುಪೇಟೆ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ಗಂಟೆಗಂಟಲೇ ಕಾದು ನಿಲ್ಲುವಂತಾಯಿತು.

310 ಬಸ್‌ಗಳ ಬಳಕೆ: ಮೈಸೂರಿನ ಕಾರ್ಯಕ್ರಮಕ್ಕೆ ಹಳ್ಳಿ ಹಳ್ಳಿಗಳಿಂದ ಮಹಿಳೆಯರನ್ನು ಕರೆದೊಯ್ಯಲು ಚಾಮರಾಜನಗರ ವಿಭಾಗವೊಂದರಿಂದಲೇ 310 ಸಾರಿಗೆ ಬಸ್‌ಗಳನ್ನು ಬಳಸಿಕೊಳ್ಳಲಾಗಿತ್ತು. ಇದರಿಂದ ಜಿಲ್ಲೆಯಲ್ಲಿ ಬಸ್ ಸಂಚಾರ ವಿರಳಾತಿ ವಿರಳವಾಗಿತ್ತು.

ವಿದ್ಯಾರ್ಥಿಗಳ ಪರದಾಟ: ಪ್ರತಿನಿತ್ಯ ಜಿಲ್ಲೆಯಿಂದ ಮೈಸೂರು, ತಿ. ನರಸೀಪುರ, ಕೊಳ್ಳೇಗಾಲಕ್ಕೆ ಹಾಗೂ ಗ್ರಾಮೀಣ ಪ್ರದೇಶಗಳಿಂದ ಜಿಲ್ಲಾ ಕೇಂದ್ರಕ್ಕೆ ಸಾವಿರಾರು ವಿದ್ಯಾರ್ಥಿಗಳು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಸಿ ತಮ್ಮ ಶಾಲಾ–ಕಾಲೇಜಿಗೆ ತೆರಳುತ್ತಿದ್ದರು. ಆದರೆ, ಬುಧವಾರ ಬೆಳಗ್ಗೆಯಿಂದಲೇ ಬಸ್‌ಗಳ ಸಂಚಾರ ವಿರಳವಾಗಿತ್ತು. ಗ್ರಾಮೀಣ ಭಾಗಗಳಲ್ಲಿ ಸಂಚರಿಸುವ ಬಹುತೇಕ ಬಸ್‌ಗಳು ಸ್ಥಗಿತಗೊಂಡಿದ್ದರಿಂದ ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ಶಾಲಾ–ಕಾಲೇಜಿಗೆ ತೆರಳು ಸಾಧ್ಯವಾಗಲಿಲ್ಲ.

ಬೇಸತ್ತ ಪ್ರಯಾಣಿಕರು: ಗಂಟೆ ಗಟ್ಟಲೆ ಕಾದರು ಬಾರದ ಬಸ್‌ಗಳಿಂದ ಪ್ರಯಾಣಿಕರ ಬೇಸತ್ತರು. ಆಗೊಮ್ಮೆ, ಹೀಗೊಮ್ಮೆ ಬರುತ್ತಿದ್ದ ಬಸ್‌ಗಳನ್ನು ಕಂಡು ಪ್ರಯಾಣಿಕರು ಬಸ್ ಹತ್ತಲು ಮುಗಿಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಗೃಹಲಕ್ಷ್ಮೀ ಚಾಲನೆ ಕಾರ್ಯಕ್ರಮದಿಂದ ವಿದ್ಯಾರ್ಥಿಗಳು ಸರ್ಕಾರಿ ನೌಕರು, ಕೋರ್ಟ್ ಕಚೇರಿಗೆ ಹೋಗುವ ಸಾರ್ವಜನಿಕರು ಪರದಾಡಿದರು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ಹೋಗಲಾಗದೆ ವಾಪಸ್ ತೆರಳುತ್ತಿದ್ದ ದೃಶ್ಯವೂ ಕಂಡು ಬಂತು.

ಮನೆ ಯಜಮಾನಿ ನೆಮ್ಮದಿ ಬದುಕಿಗೆ ಪೂರಕವಾಗಿ ಗೃಹಲಕ್ಷ್ಮಿ ಭಾಗ್ಯ



ಬೆಂಗಳೂರು,ಆ.30(ಕೆಎಂಶಿ)–ಬೆಲೆ ಏರಿಕೆಯ ಸಂಕಷ್ಟಗಳಿಗೆ ಸಿಲುಕಿ ನಲುಗಿರುವ ಮನೆಯೊಡತಿಯರು ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ರಾಜ್ಯ ಸರ್ಕಾರ 'ಗೃಹಲಕ್ಷ್ಮಿ' ಯೋಜನೆ ಜಾರಿಗೊಳಿಸಿದೆ. ಇಡೀ ವಿಶ್ವದಲ್ಲೇ ಇಷ್ಟು ದೊಡ್ಡ ಪ್ರಮಾಣದ ಯೋಜನೆ ಜಾರಿಗೊಳಿಸುತ್ತಿರುವುದು ಕರ್ನಾಟಕ ಸರ್ಕಾರವೇ ಪ್ರಥಮ.

ವಿಧಾನಸಭಾ ಚುನಾವಣೆಗೂ ಮುನ್ನ ಜನತೆಗೆ ನೀಡಿದ ಭರವಸೆಯಂತೆ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ 52 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದ್ದರೆ, ಮನೆಯೊಡತಿಗೆ ಮಾಸಿಕ 2 ಸಾವಿರ ರೂ. ನೀಡುವ ಈ ಯೋಜನೆಗೆ ಇಷ್ಟು ದೊಡ್ಡ ಪ್ರಮಾಣದ ಆರ್ಥಿಕ ಸೌಲಭ್ಯ ಕಲ್ಪಿಸಿದೆ. ಗೃಹಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ ಅತಿ ಹೆಚ್ಚಿನ ಮೊತ್ತದ ಹಣ ಬಳಕೆ ಮಾಡುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇವಲ 9 ತಿಂಗಳಿಗೆ 1.11 ಕೋಟಿ ಮಹಿಳೆಯರಿಗೆ 17,500 ಕೋಟಿ ರೂ. ಆರ್ಥಿಕ ನೆರವನ್ನು ಬಜೆಟ್‌ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಿರಿಸಿದ್ದಾರೆ. ಯೋಜನೆಗೆ ಇಂದು ಮೈಸೂರಿನಲ್ಲಿ ಚಾಲನೆ ನೀಡುವ ಮೂಲಕ ನೋಂದಾಯಿತ 1.11 ಕೋಟಿ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಆಗಸ್ಟ್ ತಿಂಗಳಿನಿಂದ ನೇರವಾಗಿ ಹಣ ವರ್ಗಾವಣೆ ಆಗಲಿದೆ. ಯೋಜನೆ ಸಮರ್ಪಕವಾಗಿ ಅರ್ಹ ಮಹಿಳೆಯರಿಗೆ ತಲುಪಬೇಕು ಎಂದು 12,600 ಸ್ಥಳಗಳಲ್ಲಿ ಸಭೆಗಳನ್ನು ನಡೆಸಿ ಹಣ ವರ್ಗಾವಣೆಗೆ ಹಸಿರು ನಿಶಾನೆ ತೋರಿದೆ. ವಿಶ್ವದಲ್ಲೇ ಅತ್ಯಂತ ದೊಡ್ಡ ಯೋಜನೆ ಇದಾಗಿದೆ.

ರಾಜ್ಯದ 1.11 ಕೋಟಿ ಮಹಿಳೆಯರಿಗೆ ತಲಾ 2 ಸಾವಿರ ರೂ. ನಗದು ನೆರವು; ವಾರ್ಷಿಕ 32 ಸಾವಿರ ಕೋಟಿ ಯೋಜನೆ ಜಾರಿ

ಶಕ್ತಿ, ಅನ್ನಭಾಗ್ಯ ಹಾಗೂ ಗೃಹಜ್ಯೋತಿ ಯೋಜನೆ ಈಗಾಗಲೇ ಅನುಷ್ಠಾನಗೊಂಡಿವೆ. ಇದೀಗ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಜಾರಿಗೊಂಡಿದ್ದರಿಂದ ಸೆಪ್ಟೆಂಬರ್ ತಿಂಗಳಲ್ಲಿ ಆ ಕುಟುಂಬಕ್ಕೆ 5 ಸಾವಿರ ರೂ. ದೊರೆಯಲಿದೆ. ಇನ್ನು ಕುಟುಂಬದಲ್ಲಿ ಡಿಪ್ಲೊಮಾ ಇಲ್ಲವೇ ಪದವಿ ಪಡೆದ ನಿರುದ್ಯೋಗಿಗಳಿದ್ದರೆ, ಅಂತಹ ಕುಟುಂಬಕ್ಕೆ ಮತ್ತೆ ಹೆಚ್ಚುವರಿಯಾಗಿ 3 ಸಾವಿರ ರೂ. ಬರುವ ಡಿಸೆಂಬರ್ ಇಲ್ಲವೇ ಜನವರಿಯಿಂದ ದೊರೆಯಲಿದೆ. ಈ ಎಲ್ಲಾ ಯೋಜನೆಗಳು ಅರ್ಹರಿಗೆ ತಲುಪಬೇಕು ಎಂಬ ಉದ್ದೇಶದಿಂದ ಪ್ರತಿ ಪಂಚಾಯ್ತಿಗೆ ಐವರು ನಿರುದ್ಯೋಗ ಯುವಕ–ಯುವತಿಯರನ್ನು ನೇಮಕ ಮಾಡಿ ಸೌಲಭ್ಯ ತಲುಪಿಸುವ ಹೊಣೆ ವಹಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ಪ್ರತಿ ಮನೆಗೂ ಈ ತಂಡ ತೆರಳಿ, ಸರ್ಕಾರದ ಐದು ಗ್ಯಾರಂಟಿ ಪ್ರಯೋಜನ ದೊರೆತಿದೆಯೇ ಎಂದು ಪರಿಶೀಲಿಸುತ್ತಾರೆ. ಅರ್ಹರಿದ್ದರೂ ಯೋಜನೆ ತಲುಪದಿದ್ದರೆ, ಸ್ಥಳದಲ್ಲೇ ಮಾಹಿತಿ ಪಡೆದು ಆ ಕುಟುಂಬಕ್ಕೆ ಗ್ಯಾರಂಟಿ ಲಾಭ ಪಡೆಯುವಂತೆ ಸರ್ಕಾರ ಮಾಡಿದೆ.

ಇಂತಹ ಉಚಿತ ಕೊಡುಗೆಯ ಯೋಜನೆ ಬೇರೆ ಎಲ್ಲೂ ಇಲ್ಲ. ಮಹಿಳೆಗೆ ಸಂರಕ್ಷಣೆ ನೀಡುವ ಅದನ್ನು ಉಳಿಸಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಸೌಲಭ್ಯ ನೀಡಲಾಗುತ್ತಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ. ಬೆಲೆ ಏರಿಕೆಯು ಮಹಿಳೆಯರ ಮೇಲೆ ಹೊರೆ ಹಾಕಿದೆ. ಇದರಿಂದ ಹೊರ ಬರಲು ಕರ್ನಾಟಕ ಸರ್ಕಾರ ಮೊದಲ ಹೆಜ್ಜೆಯ ಮೂಲಕ ಹೊಸ ಕೊಡುಗೆಗೆ ನಾಂದಿ ಹಾಡಿದೆ. ಮರದ ಬೇರು ಕಾಣದ ರೀತಿಯಲ್ಲಿ ಮನೆಯಲ್ಲೇ ಉಳಿದ ಮಹಿಳೆಯರು ಯಾವುದೇ ಊರಾಗಿರಲಿ. ಇಡೀ ರಾಜ್ಯದ ಭದ್ರ ಬುನಾದಿಗೆ ಕಾರಣೀಕರ್ತರಾಗಿರುವವರಿಗೆ ಇದೊಂದು ಉತ್ತಮ ಸವಲತ್ತು. ಸರ್ಕಾರ ಈ ಯೋಜನೆ ಅನುಷ್ಠಾನದಿಂದ ಬಿಪಿಎಲ್ ಮತ್ತು ಎಪಿಎಲ್‌ನ ಪ್ರತಿಕುಟುಂಬಕ್ಕೆ ಒಂದಲ್ಲ ಒಂದು ರೀತಿಯಲ್ಲಿ 4ರಿಂದ 5 ಸಾವಿರ ರೂ. ನೇರ ಮತ್ತು ಪರೋಕ್ಷವಾಗಿ ದೊರೆಯಲಿದೆ.

ನಾಳೆ 'ಹಣ್ಣು–ಹೊನ್ನು' ಕಾರ್ಯಕ್ರಮ

ಮೈಸೂರು,ಆ.30–ತೋಟಗಾರಿಕೆ ಇಲಾಖೆ ಮೈಸೂರು, ತೋಟಗಾರಿಕೆ ಮಹಾವಿದ್ಯಾಲಯ ಮೈಸೂರು ಮತ್ತು ಆಕಾಶವಾಣಿ ಮೈಸೂರು ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್ 1ರಂದು ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ "ಹಣ್ಣು–ಹೊನ್ನು" ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಬೇಸಾಯ ಕ್ರಮದ ಬಾನುಲಿ ಸರಣಿಯ ಉದ್ಘಾಟನೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್. ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ ವಿಷ್ಣುವರ್ಧನ್ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ತಾಳೆಬೆಳೆ ಹಾಗೂ ಕ್ಷೇತ್ರ ಮತ್ತು ನರ್ಸರಿಯ ಅಪರ ನಿರ್ದೇಶಕ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಅಧಿಕಾರಿಗಳಾದ ಡಾ.ಪಿ.ಎಂ. ಸೊಬರದ್ ಮತ್ತು ಆಕಾಶವಾಣಿ ಸಹಾಯಕ ನಿರ್ದೇಶಕರಾದ ಎಸ್.ಎಸ್. ಉಮೇಶ್ ಭಾಗವಹಿಸುವರು ಎಂದು ಜಿಲ್ಲಾ ಪಂಚಾಯತ್ ತೋಟಗಾರಿಕೆ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವೃಕ್ಷ ರಕ್ಷಾ ಬಂಧನ' ಆಚರಣೆ



ಮೈಸೂರು,ಆ.30–ಮೈಸೂರಿನ ಅನಂತ ಗೀತ ವಿದ್ಯಾಲಯದಲ್ಲಿ ರೋಟರಿ ಇಂಟರ್‍ಯಾಕ್ಟ್ ಕ್ಲಬ್ ಮತ್ತು ವಿಜ್ಞಾನ ಕ್ಲಬ್ ಸಹಯೋಗದೊಂದಿಗೆ "ವೃಕ್ಷ ರಕ್ಷಾ ಬಂಧನ " ಆಚರಿಸಲಾಯಿತು.

ಪ್ರಸ್ತುತ ಪರಿಸ್ಥಿತಿಯಲ್ಲಿ ಮನುಷ್ಯರಾದ ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ಪರಿಸರವನ್ನು ಬಳಸಿಕೊಂಡು ನಾಶ ಮಾಡುತ್ತಿದ್ದೇವೆ. ಹಾಗಾಗಿ ನಮಗೆ ಆಮ್ಲಜನಕ ನೀಡುವ ಮರಗಿಡಗಳ ಸಂರಕ್ಷಣೆ ಅತ್ಯವಶ್ಯಕ ಮತ್ತು ಆದ್ಯಕರ್ತವ್ಯ. ಆದ್ದರಿಂದ ಗಿಡಗಳಿಗೆ ರಾಕಿ ಕಟ್ಟುವ ಮೂಲಕ ಮರ ಗಿಡಗಳ ರಕ್ಷಣೆ ಮಾಡೋಣ ಎಂದು ಪ್ರಾಂಶುಪಾಲ ಶ್ರೀಕಾಂತ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕಿಯರು ಗಿಡಗಳಿಗೆ ರಾಕಿ ಕಟ್ಟಿ ಸಂಭ್ರಮಿಸಿದರು. ಈ ವೇಳೆ ಉಪ ಪ್ರಾಂಶುಪಾಲರಾದ ಹರದೂರು ಲೋಕೇಶ್, ವಿಜ್ಞಾನ ಕ್ಲಬ್‌ನ ಸಂಯೋಜಕಿ ಶ್ರೀಮತಿ ಉಷಾ, ರೋಟರಿ ಇಂಟರ್‍ಯಾಕ್ಟ್ ಕ್ಲಬ್‌ನ ನಾಯಕ ಪ್ರೇರಣ್, ಜನನಿ, ವಿಭ, ಚಿನ್ಮಯ್ ಗೌಡ ಮತ್ತು ಶಿಕ್ಷಕರು ಹಾಜರಿದ್ದರು.

ಸಿಲಿಂಡರ್ ದರ ಇಳಿಕೆ: ರಕ್ಷಾಬಂಧನ, ಓಣಂ ಕೊಡುಗೆ

ಮೈಸೂರು, ಆ.30–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಗೃಹೋಪಯೋಗಿ ಗ್ಯಾಸ್ ಸಿಲಿಂಡರ್ ದರವನ್ನು ಪ್ರತಿ ಸಿಲಿಂಡರ್‌ಗೆ 200 ರೂ. ಇಳಿಸಿ ದೇಶದ ಮಹಿಳೆಯರಿಗೆ ರಕ್ಷಾ ಬಂಧನದ ಉಡುಗೊರೆ ನೀಡಿದೆ ಎಂದು ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್ ಹರ್ಷ ವ್ಯಕ್ತಪಡಿಸಿದ್ದಾರೆ.



ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಉಜ್ವಲ ಯೋಜನೆಯಲ್ಲಿ ಸಂಪರ್ಕ ಪಡೆದವರಿಗೆ ಈಗಿರುವ ಸಬ್ಸಿಡಿ 200 ರೂ. ಸಬ್ಸಿಡಿ ಸೇರಿ ಒಟ್ಟು ಪ್ರತಿ ಸಿಲಿಂಡರ್‌ಗೆ 400 ರೂ. ಇಳಿಕೆಯಾಗಲಿದೆ ಲಕ್ಷಾಂತರ ಗೃಹೋಪಯೋಗಿ ಎಲ್‌ಪಿಜಿ ಸಂಪರ್ಕ ಪಡೆದ ಗ್ರಾಹಕರಿಗೆ ಇದರ ಲಾಭ ಸಿಗಲಿದೆ ಎಂದು ಮಾಹಿತಿ ನೀಡಿದ್ದಾರೆ.

2014ರಲ್ಲಿ 14.5 ಕೋಟಿ ಗೃಹೋಪಯೋಗಿ ಗ್ಯಾಸ್ ಸಂಪರ್ಕ ಪಡೆದ ಫಲಾನುಭವಿಗಳಿದ್ದರು. ಈಗ ಆ ಸಂಖ್ಯೆ 33 ಕೋಟಿಗೆ ತಲುಪಿದೆ. ಈ ಪೈಕಿ ಸುಮಾರು 9.60 ಕೋಟಿ ಉಜ್ವಲ ಫಲಾನುಭವಿಗಳಿದ್ದಾರೆ. ಕೇಂದ್ರ ಸರ್ಕಾರದ ಸಚಿವ ಸಂಪುಟದಲ್ಲಿ ಇನ್ನೂ ಹೆಚ್ಚುವರಿ 75 ಲಕ್ಷ ಉಜ್ವಲ ಸಂಪರ್ಕಗಳ ದೇಶಾದ್ಯಂತ ಕಲ್ಪಿಸಲು ಅನುಮೋದನೆ ನೀಡಲಾಗಿದೆ. ಒಟ್ಟಾರೆ, ಅಡುಗೆ ಅನಿಲ ಸಿಲಿಂಡರ್ ದರ ಇಳಿಕೆಯಿಂದ ದೇಶದ ಮಹಿಳೆಯರಿಗೆ ರಕ್ಷಾ ಬಂಧನ ಹಾಗೂ ಓಣಂ ಹಬ್ಬದ ಉಡುಗೊರೆ ನೀಡಿದಂತಾಗಿದೆ. ಇದಕ್ಕಾಗಿ ಪ್ರಧಾನಿ, ಇಂಧನ ಸಚಿವರ ಅಭಿನಂದಿಸುವೆ ಎಂದು ಹೇಳಿದ್ದಾರೆ.

ನಿಧನ

ಜಿ.ಲಿಂಗಯ್ಯ



ಕೊಳ್ಳೇಗಾಲ: ಕೊಳ್ಳೇಗಾಲ ತಾಲೂಕಿನ ಮುಳ್ಳೂರು ಗ್ರಾಮದ ನಿವಾಸಿ ದಿವಂಗತ ಗುರುಸಿದ್ದಯ್ಯ ಅವರ ಮಗ ಜಿ.ಲಿಂಗಯ್ಯ (76) ಮಂಗಳವಾರ ಸಂಜೆ ನಿಧನರಾದರು. ಮೃತರು ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಳಿಯ ಬೆಂಗಳೂರು ನಗರಾಭಿವೃದ್ಧಿ ನಿರ್ದೇಶಕರಾದ ಎಲ್. ಶಶಿಕುಮಾರ್ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು (ಬುಧವಾರ) ಮಧ್ಯಾಹ್ನ ಸ್ವಗ್ರಾಮ ಮುಳ್ಳೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಎನ್.ಪ್ರಭುಸ್ವಾಮಿ



ಮೈಸೂರು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಡಾಕ್ಟರ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಸಂಸ್ಥಾಪಕ ಸದಸ್ಯರು ಮತ್ತು ಸಿದ್ಧಾರ್ಥನಗರದ ಸನ್ಮಾರ್ಗ ರಸ್ತೆ ನಿವಾಸಿ ಡಾ. ಎನ್. ಪ್ರಭುಸ್ವಾಮಿ (76) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಗುರುವಾರ (ಆ.31) ಲಲಿತಾದ್ರಿಪುರ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ. ಲಕ್ಷ್ಮಿನಾರಾಯಣ



ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಜಿ. ಲಕ್ಷ್ಮಿನಾರಾಯಣ (92) ಮಂಗಳವಾರ ನಿಧನರಾದರು. ಶ್ರೀಯುತರು ಜಿಎಲ್‌ಎನ್ ಕನ್ವೆನ್ಷನ್ ಹಾಲ್, ಪ್ರಗತಿ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಮತ್ತು ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಎಜುಕೇಷನ್ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿಯಾಗಿದ್ದರು. ಮೃತರು ಪತ್ನಿ ಸುಶೀಲ ನಾರಾಯಣ್, ಪುತ್ರಿಯರಾದ ಡಾ.ಶಾರದಾ ಮತ್ತು ಡಾ.ಶೀಲಾ, ಅಳಿಯಂದಿರಾದ ಸೋಮಶೇಖರ್ ಮತ್ತು ಡಾ.ವೆಂಕಟೇಶ್, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಸಿಲಿಂಡರ್ ದರ ಏರಿಕೆಗೆ ಪರಿಹಾರವಾಗಿ 500 ರೂ. ಸೇರಿಸಿ ಮಹಿಳೆಯರಿಗೆ 2000 ರೂ. ನೀಡಿದ್ದೇವೆ

- ಗೃಹಲಕ್ಷ್ಮಿ ಯೋಜನೆ ಜಾರಿ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥನೆ
- ನಮ್ಮ ಒತ್ತಡಕ್ಕೆ ಮಣಿದೇ ಪ್ರಧಾನಿ ಈಗ ಸಿಲಿಂಡರ್ ಬೆಲೆ 200 ರೂ. ಕಡಿತಗೊಳಿಸಿದ್ದಾರೆ

ಬೆಂಗಳೂರು, ಆ.30(ಕೆಎಂಶಿ)–ನಾವು ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಗೆ ಪರಿಹಾರ ಎಂದು 500 ರೂ ಸೇರಿಸಿ ಮಹಿಳೆಯರಿಗೆ 2 ಸಾವಿರ ನೀಡುತ್ತಿದ್ದೇವೆ. ನಮ್ಮ ಒತ್ತಡಕ್ಕೆ ಮಣಿದು ಪ್ರಧಾನಿ ನರೇಂದ್ರ ಮೋದಿಯವರು ಗ್ಯಾಸ್ ಸಿಲಿಂಡರ್ ಬೆಲೆಯನ್ನು 200 ರೂಪಾಯಿ ಕಡಿಮೆ ಮಾಡಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಚಿತ ಕೊಡುಗೆಯಿಂದ ದಿವಾಳಿಯಾಗಲಿದ್ದೇವೆ ಎಂದವರು ಏಕೆ ಮಧ್ಯಪ್ರದೇಶದಲ್ಲಿ 1,500 ರೂ. ಕೊಡುತ್ತಿದ್ದಾರೆ. 200 ರೂಪಾಯಿ ಸಿಲಿಂಡರ್ ಬೆಲೆ ಏಕೆ ಇಳಿಸಿದ್ದಾರೆ. ಬಿಜೆಪಿ ಆಡಳಿತವಿರುವ ರಾಜ್ಯಗಳ ಮಹಿಳೆಯರು ಕಾಂಗ್ರೆಸ್‌ನವರು ಕೊಡುತ್ತಿದ್ದಾರೆ ನಿಮಗೆ ಏಕೆ ಆಗುತ್ತಿಲ್ಲ ಎಂದು ಬೈಯ್ಯುತ್ತಿದ್ದಾರೆ. ಅದಕ್ಕೆ ಬಿಜೆಪಿ ಸರ್ಕಾರ ಕರ್ನಾಟಕ ಮಾದರಿ ಅನುಸರಿಸುತ್ತಿದೆ.

ಬಿಜೆಪಿಗೆ ಭಯ ಬಂದಿದೆ: ಈ ದೇಶದ ಜನರಿಗೆ ಹಣ ಕೊಡಲು ನಮ್ಮದೇನು ತಕರಾರಿಲ್ಲ. ಆದರೆ 'ಕರ್ನಾಟಕ ಮಾದರಿ'ಯಿಂದ ಹೆದರಿಕೊಂಡಿದ್ದಾರೆ ಎಂಬುದು ಸತ್ಯ. ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ ಎಲ್ಲಾ ಗ್ಯಾರಂಟಿಗಳು ಯಶಸ್ವಿಯಾಗಿವೆ. ಇದರಿಂದ ಇಡೀ ದೇಶದ ಹೆಣ್ಣು ಮಕ್ಕಳು 'ಕರ್ನಾಟಕ ಮಾದರಿ'ಗೆ ಮನಸೋತಿದ್ದಾರೆ. ನಾವು 100 ದಿನಗಳನ್ನು ಯಶಸ್ವಿಯಾಗಿ ಪೂರೈಸಿದ್ದು, ಕಾಂಗ್ರೆಸ್ ಪಕ್ಷ ಇದನ್ನು ಹಬ್ಬದ ರೀತಿಯಲ್ಲಿ ಸಂಭ್ರಮಿಸುತ್ತಿದೆ, ಜನರೂ ಸಂಭ್ರಮಿಸುತ್ತಿದ್ದಾರೆ ಎಂದರು.



ನಾನು ಮತ್ತು ಸಿದ್ದರಾಮಯ್ಯ ಅವರು ಸೇರಿ ಗ್ಯಾರಂಟಿ ಕಾರ್ಡಿಗೆ ಸಹಿ ಮಾಡಿದ್ದೆವು. ಇದಕ್ಕೆ ಪ್ರಿಯಾಂಕ ಗಾಂಧಿ ಅವರು ಸಾಕ್ಷಿಯಾಗಿದ್ದರು. ನಾವು 1.30 ಕೋಟಿ ಫಲಾನುಭವಿಗಳನ್ನು ತಲುಪುವ ಬಗ್ಗೆ ಅಂದಾಜಿಸಿದ್ದೆವು. ತಾಂತ್ರಿಕ ಕಾರಣಗಳಿಂದ ಅನೇಕ ಮಹಿಳೆಯರಿಗೆ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ತಲುಪಿಸುವ ಗ್ಯಾರಂಟಿಯನ್ನು ನಾನು ನೀಡುತ್ತೇನೆ.

100 ದಿನಕ್ಕೆ ನಾಲ್ಕು ಗ್ಯಾರಂಟಿ ಜಾರಿ: ಕೇವಲ 100 ದಿನಗಳಲ್ಲಿ 4 ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. ಸಿದ್ದರಾಮಯ್ಯ ಅವರ ಮೊದಲನೇ ಸಚಿವಸಂಪುಟ ಸಭೆಯಲ್ಲಿ ಗ್ಯಾರಂಟಿ ಯೋಜನೆ ಜಾರಿಗೆ ತಾತ್ವಿಕ ಒಪ್ಪಿಗೆ ನೀಡಲಾಯಿತು. ಬಿಜೆಪಿ ಆಡಳಿತ ಇರುವ ಯಾವ ರಾಜ್ಯಗಳಲ್ಲೂ ಮಾಡದ ಕೆಲಸ ನಾವು ಮಾಡಿದ್ದೇವೆ. ಬಿಜೆಪಿಯವರ ಪ್ರಣಾಳಿಕೆ ತೆಗೆದು ನೋಡಲಿ, ಅವರದ್ದು ಕೇವಲ ಭರವಸೆ, ನಮ್ಮದು ಗ್ಯಾರಂಟಿ.

ಬಿಜೆಪಿಯವರು ಕಾಂಗ್ರೆಸ್ ಸರ್ಕಾರದ ವಿರುದ್ಧ ಚಾರ್ಜ್‌ಶೀಟ್ ಬಿಡುಗಡೆ ಮಾಡಿರುವ ಬಗ್ಗೆ ಕೇಳಿದಾಗ, ಅದರಲ್ಲಿ ಇರುವುದನ್ನು ಒಂದೇ ಒಂದು ಸಾಬೀತು ಮಾಡಲಿ. ಅವರ ಕರ್ಮಕಾಂಡಗಳನ್ನು ಬಿಚ್ಚುವ ಕಾಲ ಹತ್ತಿರದಲ್ಲಿದೆ. ಚಾರ್ಜ್‌ಶೀಟ್ ಎಂದರೆ ಏನು? ಅವರಿಗೆ ತಮ್ಮ ನಾಯಕನನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯವಿಲ್ಲ. ಡಿ.ಕೆ.ಶಿವಕುಮಾರ್ 10–15 ಪರ್ಸೆಂಟ್ ಕಮಿಷನ್ ಕೇಳಿದರು ಎಂದು ಗುತ್ತಿಗೆದಾರರಿಗೆ ಹೆದರಿಸಿ ಅವರ ಬಾಯಲ್ಲಿ ರಾಜ್ಯಪಾಲರ ಬಳಿ ಸುಳ್ಳು ಹೇಳಿಸಿದರು. ಆನಂತರ ಅದೇ ಗುತ್ತಿಗೆದಾರರು ಪೊಲೀಸರ ಬಳಿ, ರಾಜ್ಯಪಾಲರ ಬಳಿ ನಾವು ಆರೋಪ ಮಾಡಿಲ್ಲ ಎಂದು ಸತ್ಯ ಹೇಳಿದರು ಎಂದು ವಾಗ್ದಾಳಿ ನಡೆಸಿದರು.

ಕಾವೇರಿ ಸಂಬಂಧ ದೆಹಲಿ ಯಾತ್ರೆ ಕಾವೇರಿ ನೀರು ವಿಚಾರವಾಗಿ ಕೇಳಿದಾಗ, ನಾಳೆ ದೆಹಲಿಗೆ ಹೋಗುತ್ತಿದ್ದೇನೆ, ಅಲ್ಲಿ ನಮ್ಮ ವಕೀಲರನ್ನು ಭೇಟಿಯಾಗಿ ಕಾವೇರಿ ನೀರಿನ ವಿಚಾರವಾಗಿ ಚರ್ಚೆ ನಡೆಸುತ್ತೇನೆ. ಸೆ.1 ಶುಕ್ರವಾರ ಸುಪ್ರೀಂಕೋರ್ಟ್ ತೀರ್ಪು ನೀಡಲಿದೆ. ತಮಿಳುನಾಡಿನವರು 24 ಸಾವಿರ ಕ್ಯೂಸೆಕ್ ಬೇಡಿಕೆ ಇಟ್ಟಿದ್ದರು. ನಮ್ಮ ರಾಜ್ಯದ ಅಧಿಕಾರಿಗಳು ಸಮರ್ಥವಾಗಿ ವಾದ ಮಂಡಿಸಿ ನಾವು 3 ಸಾವಿರ ಕ್ಯೂಸೆಕ್ ಬಿಡುತ್ತೇವೆ ಎಂದು ಹೇಳಿದ್ದೆವು. ಕೊನೆಗೆ ವಾದ–ವಿವಾದಗಳು ನಡೆದು 5 ಸಾವಿರ ಕ್ಯೂಸೆಕ್‌ಗೆ ಇಳಿಸಿದ್ದಾರೆ. ಮುಂದಿನ ಸಭೆಯಲ್ಲಿ ಹೇಗೆ ನಮ್ಮ ವಾದ ಮಂಡಿಸಬೇಕು ಎಂದು ಚರ್ಚೆ ನಡೆಸಲಿದ್ದೇನೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ ಮೇಲ್ಮನವಿ ಸಲ್ಲಿಸಬಹುದಿತ್ತು. ಈ ಕೆಲಸ ಮಾಡಿಲ್ಲ ಎಂಬ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರೋಪದ ಬಗ್ಗೆ ಕೇಳಿದಾಗ, ಅವರು ಏನೇ ಸಲಹೆ ಕೊಟ್ಟರು ನಾವು ತೆಗೆದುಕೊಳ್ಳುತ್ತೇವೆ. ಈ ಡ್ಯಾಂಗಳ ಕೀಲಿ ಕೈ ನಮ್ಮ ಬಳಿ ಇದೆ, ಅದನ್ನು ಬೇರೆಯವರ ಕೈಗೆ ಬಿಟ್ಟುಕೊಡುವುದಿಲ್ಲ. ನಮ್ಮ ರೈತರ ಹಿತ ಮುಖ್ಯ. ಅದಕ್ಕೆ ಈಗಾಗಲೇ 2 ಬಾರಿ ನೀರು ಬಿಟ್ಟಿದ್ದೇವೆ. ಬೊಮ್ಮಾಯಿ ಅವರು ರಾಜಕಾರಣ ಮಾಡಬೇಕಲ್ಲ, ಅದಕ್ಕೆ ಮಾತನಾಡುತ್ತಾರೆ. ಬಿಜೆಪಿಯ ಮಾಜಿ ನೀರಾವರಿ ಸಚಿವರೊಬ್ಬರು ಯಾವುದೇ ಕಾರಣಕ್ಕೂ ನೀರು ಬಿಡಬಾರದು ಎಂದು ಹೇಳಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ಏನು ಮಾಡಿದರು. ನಾಗೇಗೌಡರು ನೀರಾವರಿ ಸಚಿವರಾಗಿದ್ದಾಗ ಏನಾಯಿತು, ದೇವೇಗೌಡರು ಪ್ರಧಾನಿಗಳಾಗಿದ್ದಾಗ ಏನಾಯಿತು, ಇದೆಲ್ಲಾ ಕಾಲ, ಕಾಲದಿಂದ ನಡೆದುಕೊಂಡು ಬಂದಿರುವುದೇ ಎಂದರು.

ಎನ್‌ಆರ್ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಯೋಜನೆ ರೂಪಿಸಿ

ಮುಖ್ಯಮಂತ್ರಿಗಳಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ

ಮೈಸೂರು,ಆ.30(ಪಿಎಂ)– ಮೈಸೂರಿನ ಎನ್‌ಆರ್ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಆಡಳಿತದಲ್ಲಿ ವಿವಿಧ ಯೋಜನೆಗಳನ್ನು ರೂಪಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ ಮಾಡಿದ್ದಾರೆ.

ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿರುವ ಅವರು, ತಾವು ಕನ್ನಡ ನಾಡಿನ ಜನಪ್ರಿಯ ಮುಖ್ಯಮಂತ್ರಿಯಾಗಿ ಎರಡನೇ ಬಾರಿಗೆ ಅಧಿಕಾರ ಹೊಂದಿರುವುದಕ್ಕೆ ತಮಗೆ ಅಭಿನಂದನೆಗಳು. ಡಿ.ದೇವರಾಜ ಅರಸರ ನಂತರ 5 ವರ್ಷ ಮುಖ್ಯಮಂತ್ರಿಗಳಾಗಿ ಅಧಿಕಾರ ಪೂರೈಸಿರುವ ಕೀರ್ತಿಗೂ ಭಾಜನರಾಗಿದ್ದೀರಿ. ಜೊತೆಗೆ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿರುವ ತಾವು ಬಡವರ ಉದ್ಧಾರಕ್ಕಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದು ಪ್ರಶಂಸನೀಯ. ರಾಜ್ಯದ 224 ಕ್ಷೇತ್ರಗಳ ಪೈಕಿ ಎನ್‌ಆರ್ ಕ್ಷೇತ್ರವು ಅತ್ಯಂತ ಹಿಂದುಳಿದಿದೆ. ಚಾಮರಾಜ ಮತ್ತು ಕೃಷ್ಣರಾಜ ಕ್ಷೇತ್ರದಂತೆ ಇಲ್ಲಿನ ಅಭಿವೃದ್ಧಿ ಸಾಧ್ಯವಾಗಿಲ್ಲ. ಎನ್‌ಆರ್ ಕ್ಷೇತ್ರದ ಜನತೆ ಉತ್ತಮ ರಸ್ತೆ, ಒಳಚರಂಡಿ, ನೀರು, ಸುಸಜ್ಜಿತ ಶಾಲಾ–ಕಾಲೇಜು ಹಾಗೂ ಸುಸಜ್ಜಿತ ಆಸ್ಪತ್ರೆ ಸೇರಿದಂತೆ ಮೂಲಸೌಕರ್ಯಗಳಿಲ್ಲದೇ ಬದುಕುವಂತಾಗಿದೆ. ಈ ಕ್ಷೇತ್ರದಲ್ಲಿ ಶೇ.70ರಷ್ಟು ಬಡವರು, ಕೂಲಿ ಕಾರ್ಮಿಕರು ಹಾಗೂ ಕುಶಲಕರ್ಮಿಗಳು ವಾಸಿಸುತ್ತಿದ್ದಾರೆ. ಅತೀ ಹೆಚ್ಚು ಅಲ್ಪಸಂಖ್ಯಾತರೇ ಇದ್ದಾರೆ. ಸ್ವಾತಂತ್ರ್ಯ ನಂತರ ಎನ್‌ಆರ್ ವಿಧಾನಸಭಾ ಕ್ಷೇತ್ರಕ್ಕೆ ನಡೆದಿರುವ 15–16 ಚುನಾವಣೆಗಳಲ್ಲಿ ಒಂದೇ ಕುಟುಂಬದ ತಂದೆ ಮತ್ತು ಮಗ 12 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರೂ ಕನಿಷ್ಠ ಮೂಲಸೌಲಭ್ಯವೂ ಇಲ್ಲದೇ ಇಲ್ಲಿನ ಜನತೆ ಪರಿತಪಿಸುವಂತಾಗಿದೆ.



ನಿಮ್ಮ ಆಡಳಿತದಲ್ಲಿ ಎನ್‌ಆರ್ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ರೂಪಿಸಬೇಕೆಂಬುದು ನನ್ನ ಮನವಿ. ಗುಡಿಸಲು ಹಾಗೂ ಬಾಡಿಗೆ ಮನೆಗಳಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ಜನರಿಗೆ ಸ್ವಂತ ಮನೆ ಮತ್ತು ನಿವೇಶನ ಕಲ್ಪಿಸಬೇಕು. ಕ್ಷೇತ್ರದ ಜನರ ಆರೋಗ್ಯ ರಕ್ಷಣೆಗೆ ಸುಸಜ್ಜಿತ ಆಸ್ಪತ್ರೆ ನಿರ್ಮಿಸಬೇಕು. ಮಕ್ಕಳ ಉತ್ತಮ ಶಿಕ್ಷಣಕ್ಕಾಗಿ ಸುಸಜ್ಜಿತ ಶಾಲಾ–ಕಾಲೇಜು ನಿರ್ಮಿಸಬೇಕು. ಯುವಕರ ಉತ್ತಮ ಭವಿಷ್ಯಕ್ಕಾಗಿ ಉದ್ಯೋಗ ತರಬೇತಿ ಕೇಂದ್ರ ಸ್ಥಾಪಿಸಬೇಕು. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಉದ್ಯಮಗಳನ್ನು ಆರಂಭಿಸಬೇಕು.

ಕ್ಷೇತ್ರದಲ್ಲಿರುವ ವಿಟಿಯು ಸಂಸ್ಥೆಯ ಸಮೀಪವಿರುವ 17 ಎಕರೆ ಜಾಗವನ್ನು ಕ್ರಿಕೆಟ್ ಕ್ರೀಡಾಂಗಣಕ್ಕೆ ನೀಡುವ ಪ್ರಸ್ತಾಪವಿದೆ. ವರ್ಷದಲ್ಲಿ ಕೆಲವು ದಿನ ಮಾತ್ರ ನಡೆಯುವ ಕ್ರೀಡೆಗೆ ಮೈಸೂರಿನ ರಿಂಗ್ ರಸ್ತೆಯಿಂದ ಹೊರಗೆ ಜಾಗವನ್ನು ನೀಡಬಹುದು. ಹಾಗಾಗಿ ಸದರಿ 17 ಎಕರೆ ಜಾಗದಲ್ಲಿ ಸುಸಜ್ಜಿತ ಆಸ್ಪತ್ರೆ, ಉದ್ಯೋಗ ತರಬೇತಿ ಕೇಂದ್ರ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ಯೋಜನೆ ರೂಪಿಸಲು ಕ್ರಮ ವಹಿಸುವಂತೆ ಮನವಿ ಮಾಡಿದ್ದಾರೆ.

ಗ್ರೇಟರ್ ಮೈಸೂರು ಪ್ರಸ್ತಾಪ; ಸಲಹಾ ಸಮಿತಿ ಸಭೆಯಿಂದ ಹೊರ ನಡೆದ ಕಾಂಗ್ರೆಸ್ ಸದಸ್ಯರು

ಮೈಸೂರು,ಆ.30(ಪಿಎಂ)–ನಗರದ ಸುತ್ತಮುತ್ತಲ ಗ್ರಾಪಂ, ಪಪಂ ಹಾಗೂ ನಗರಸಭೆಗಳನ್ನು ಸೇರಿಸಿ ಬೃಹತ್ ಮೈಸೂರು ಮಹಾನಗರ ಪಾಲಿಕೆಯಾಗಿ (ಗ್ರೇಟರ್ ಮೈಸೂರು) ಮೇಲ್ದರ್ಜೆಗೇರಿಸುವ ಪ್ರಸ್ತಾಪಕ್ಕೆ ಪಾಲಿಕೆ ಕಾಂಗ್ರೆಸ್ ಸದಸ್ಯರಿಂದ ವಿರೋಧ ವ್ಯಕ್ತವಾಗಿದೆ.

ಗ್ರೇಟರ್ ಮೈಸೂರು ರಚಿಸಲು ಸಾವಿರಾರು ಕೋಟಿ ರೂ. ಭರಿಸಬೇಕು. ಮೇಲ್ದರ್ಜೆಗೇರಿಸಲು ಕಾಲ ಪಕ್ವವಾಗಿಲ್ಲ ಎಂಬ ಕಾರಣ ನೀಡಿ ಮಂಗಳವಾರ ಪಾಲಿಕೆಯಲ್ಲಿ ನಡೆದ ಪಾಲಿಕೆಯ ಸಲಹಾ ಸಮಿತಿ ಸಭೆಯಿಂದ ಕಾಂಗ್ರೆಸ್ ಸದಸ್ಯರು ಹೊರ ನಡೆದರು. ಸೆ.31ರಂದು ನಡೆಯುವ ಮೈಸೂರು ಮಹಾನಗರ ಪಾಲಿಕೆ ಸಾಮಾನ್ಯ ಕೌನ್ಸಿಲ್ ಸಭೆಯಲ್ಲಿ ಗ್ರೇಟರ್ ಮೈಸೂರು ಪ್ರಸ್ತಾಪ ತರಲು ಬಿಜೆಪಿ ಜರೂರಲ್ಲಿದೆ ಎಂದು ಕಾಂಗ್ರೆಸ್ ಸದಸ್ಯರು ದೂರಿದ್ದಾರೆ.

ಬೃಹತ್ ಮೈಸೂರು ಮಹಾನಗರ ಪಾಲಿಕೆಯ ಎಲ್ಲೆಯನ್ನು ಗುರುತಿಸಿ 2018ರ ವಾರ್ಡ್ ಪುನರ್ ವಿಂಗಡಣೆಯನ್ನು ಪರಿಗಣನೆಗೆ ತೆಗೆದುಕೊಂಡು ಹಾಲಿ ಮೈಸೂರು ಪಾಲಿಕೆಯ ವ್ಯಾಪ್ತಿಗೆ ಮೈಸೂರು ನಗರಕ್ಕೆ ಹೊಂದಿಕೊಂಡಿರುವ ಗ್ರಾಪಂ, ಪಪಂ, ನಗರಸಭೆಯನ್ನು ಸೇರಿಸಿಕೊಳ್ಳಲು ಉದ್ದೇಶಿಸಲಾಗಿದೆ. ಹಾಲಿ ಪಾಲಿಕೆ ವ್ಯಾಪ್ತಿ 86.31 ಚ.ಕಿ.ಮೀ ಇದೆ. ಇದರೊಂದಿಗೆ ಇಲವಾಲ ಗ್ರಾಪಂ (20.76 ಚ.ಕಿ.ಮೀ.), ಶ್ರೀರಾಂಪುರ ಪಪಂ (17.84 ಚ.ಕಿ.ಮೀ.), ಸಿದ್ದಲಿಂಗಪುರ ಗ್ರಾಪಂ (14.70 ಚ.ಕಿ.ಮೀ.), ರಮ್ಮನಹಳ್ಳಿ ಪಪಂ (22.11 ಚ.ಕಿ.ಮೀ.), ಕಡಕೊಳ ಪಪಂ (34.71 ಚ.ಕಿ.ಮೀ.), ಹೂಟಗಳ್ಳಿ ನಗರಸಭೆ (29.70 ಚ.ಕಿ.ಮೀ.), ಚಾಮುಂಡಿ ಬೆಟ್ಟ ಗ್ರಾಪಂ (6.00 ಚ.ಕಿ.ಮೀ.), ಬೋಗಾದಿ ಪಪಂ (35.50 ಚ.ಕಿ.ಮೀ.) ಹಾಗೂ ಆಲನಹಳ್ಳಿ ಗ್ರಾಪಂಗಳನ್ನು (5.69 ಚ.ಕಿ.ಮೀ.) ಹೊಸದಾಗಿ ಸೇರ್ಪಡೆಗೊಳಿಸಲು ಪ್ರಸ್ತಾಪಿಸಲಾಗಿದೆ.

ಸಾಮಾನ್ಯ ಕೌನ್ಸಿಲ್ ಸಭೆ ಮುಂದೂಡಿಕೆ

ಮೈಸೂರು,ಆ.30– ಮೈಸೂರು ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಆಗಸ್ಟ್ 31ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಂಡಿದ್ದ 2023ನೇ ಆಗಸ್ಟ್ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಮುಂದೂಡಲಾಗಿದೆ

ಡಿಸೆಂಬರ್ ವೇಳೆಗೆ ರಾಮಮಂದಿರ ಸಾರ್ವಜನಿಕರಿಗೆ ಮುಕ್ತ

ಅಯೋಧ್ಯೆ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಚಂಪತ್ ರಾಯ್, ಗೋವಿಂದ ಗಿರಿ ಮಹಾರಾಜ್ ಹೇಳಿಕೆ

ಮೈಸೂರು,ಆ.30(ಎಸ್‌ಪಿಎನ್)–ಹಲವು ವರ್ಷಗಳ ಶ್ರೀರಾಮ ಜನ್ಮಭೂಮಿ ಹೋರಾಟಕ್ಕೆ ಪ್ರತಿಫಲ ಸಿಗುವ ಕಾಲ ಹತ್ತಿರ ಬಂದಿದೆ. ತಪಸ್ಸಿನಂತೆ ಶ್ರೀ ರಾಮಲಲ್ಲಾ ದರ್ಶನ ಪಡೆಯಲು ಭಕ್ತರಿಗೆ ಕಾಲ ಸನ್ನಿಹಿತವಾಗಿದೆ ಎಂದು ಅಯೋಧ್ಯೆ ರಾಮಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಕೋಶಾಧಿಕಾರಿ ಗೋವಿಂದಗಿರಿ ಮಹಾರಾಜ್ ಅಭಿಪ್ರಾಯಪಟ್ಟರು.



ಮೈಸೂರು ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿ ವತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ಸರಳ ಸಮಾರಂಭದಲ್ಲಿ ಚಂಪತ್ ರಾಯ್ ಮತ್ತು ಗೋವಿಂದ ಗಿರಿ ಮಹಾರಾಜ್ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಚಂಪತ್ ರಾಯ್, ಶ್ರೀರಾಮಚಂದ್ರ ಪ್ರಭುವಿನ ಭಕ್ತರಿಗೆ ಸದ್ಯದಲ್ಲೇ ಶುಭ ಸುದ್ದಿ ಸಿಗಲಿದೆ. ಮುಂದಿನ ಜನವರಿಯಲ್ಲಿ ವಿಗ್ರಹ ಪ್ರತಿಷ್ಠಾಪನೆ ಆಗಲಿದೆ. 3 ವಿಗ್ರಹಗಳ ಕೆತ್ತನೆ ಮಾಡಲಾಗುತ್ತಿದೆ. ಅದರಲ್ಲಿ ಎರಡು ಕರ್ನಾಟಕ ಶಿಲ್ಪಿಗಳೇ ಕೆತ್ತುತ್ತಿದ್ದಾರೆ. ಅದರಲ್ಲಿ ಮೈಸೂರಿನವರಾದ ಶಿಲ್ಪಿ ಅರುಣ್ ಯೋಗರಾಜ್ ಅವರು, ಸುಂದರ ಶ್ರೀರಾಮ ಚಂದ್ರಪ್ರಭುವಿನ ಮೂರ್ತಿ ಕೆತ್ತನೆ ಕೆಲಸ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಶತಮಾನಗಳಿಂದ ಅಯೋಧ್ಯೆ ರಾಮ ಮಂದಿರದಲ್ಲಿ ಪೂಜೆ ಸಲ್ಲಿಸಲು ಕಾಯುತ್ತಿರುವ ಭಕ್ತರಿಗೆ ಕಾಲ ಕೂಡಿ ಬರುತ್ತಿದೆ. ರಾಮ ಮಂದಿರ ಕಾಮಗಾರಿ ಭರದಿಂದ ಸಾಗುತ್ತಿದ್ದು, 2023ರ ಡಿಸೆಂಬರ್ ತಿಂಗಳಲ್ಲಿ ರಾಮಮಂದಿರ ಸಾರ್ವಜನಿಕರಿಗೆ ಮುಕ್ತವಾಗಲಿದೆ. ರಾಮಮಂದಿರ, ಕಾಂಪ್ಲೆಕ್ಸ್, ಮ್ಯೂಸಿಯಂ ಸೇರಿದಂತೆ ಎಲ್ಲಾ ಕಾಮಗಾರಿಗಳು 2025ಕ್ಕೆ ಪೂರ್ಣಗೊಳ್ಳುವ ಸಂಭವವಿದೆ. 2023ರಿಂದ ಸಾರ್ವಜನಿಕರ ಪ್ರವೇಶಕ್ಕೆ ಅನುಮತಿ ನೀಡುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದರು. 2020ರ ಆ.5ರಂದು ಪ್ರಧಾನಿ ನರೇಂದ್ರ ಮೋದಿ ರಾಮ ಮಂದಿರ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದರು ಎಂದರು.

ದೇಶವ್ಯಾಪಿ ದೇಣಿಗೆ ಮೂಲಕ 3 ಸಾವಿರ ಕೋಟಿ ರೂ. ಸಂಗ್ರಹಿಸಲಾಗಿದೆ. ಇನ್ನುಳಿದ ಹಣದಲ್ಲಿ ಅಯೋಧ್ಯೆಯನ್ನು ದಶರಥನ ಪಟ್ಟಣವನ್ನಾಗಿ ಪರಿವರ್ತಿಸಿ ಆಧುನೀಕರಣಗೊಳಿಸುವ ಕಾರ್ಯ ಮುಂದುವರೆದಿದೆ. ಮಂದಿರ ನಿರ್ಮಾಣದಲ್ಲಿ ಉಕ್ಕು ಅಥವಾ ಇಟ್ಟಿಗೆ ಬಳಸುತ್ತಿಲ್ಲ. ರಾಜಸ್ತಾನದಿಂದ ತಂದಿರುವ ಪಿಂಕ್ ಬಣ್ಣದ ಕಲ್ಲಿನ ಕೆತ್ತನೆಗಳಿಂದ ಮಂದಿರ ಆಧುನಿಕ ತಂತ್ರಜ್ಞಾನದ ಮೂಲಕ ನಿರ್ಮಾಣವಾಗುತ್ತಿದೆ. ಸುಮಾರು ಎರಡೂವರೆ ಎಕರೆ ಪ್ರದೇಶದಲ್ಲಿ ರಾಮ ಮಂದಿರ ನಿರ್ಮಾಣವಾಗುತ್ತಿರುವುದು ಐತಿಹಾಸಿಕ ಎಂದು ತಿಳಿಸಿದರು.

ಇನ್ನು ಪ್ರವಾಹ, ಭೂಕಂಪ ಸೇರಿ ಪ್ರಾಕೃತಿಕ ವಿಕೋಪಗಳನ್ನು ತಡೆಯಬಲ್ಲ ಶಕ್ತಿ ಈ ಮಂದಿರದ ಕಟ್ಟಡಕ್ಕಿದೆ. ಕರ್ನಾಟಕದವರೇ ಆದ ಗೋಪಾಲ್‌ಜೀ ಅವರು ಇದರ ಮಂದಿರ ನಿರ್ಮಾಣ ಉಸ್ತುವಾರಿಯಲ್ಲಿ ಒಬ್ಬರಾಗಿದ್ದು, ಶ್ರೀರಾಮಚಂದ್ರ ಸೇವೆಗೆ ದಿನದ 24 ಗಂಟೆಯೂ ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡಿದ್ದಾರೆ ಎಂದರು.

ಗೋವಿಂದ ಗಿರಿ ಮಹಾರಾಜ್ ಹೇಳಿಕೆ: ವಿದೇಶದಲ್ಲಿ ಒಂದು ಕಾಲದಲ್ಲಿ ಭಾರತವನ್ನು ದಾರಿದ್ರ್ಯ ನೆಲೆಸಿರುವ ದೇಶ. ಹಾವಾಡಿಗರ ದೇಶ. ಈ ದೇಶ ಉದ್ಧಾರವಾಗುವುದು ಬರೀ ಕನಸ್ಸಿನ ಮಾತು ಎಂದು ವಿದೇಶಿಗರು ಭಾವಿಸಿದ್ದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಧಿಕಾರ ವಹಿಸಿಕೊಂಡ ನಂತರ ಶ್ರೀರಾಮಮಂದಿರ ಕಟ್ಟಲು ಸಾಧ್ಯವೇ ಇಲ್ಲ ಎಂದವರಿಗೆ ಈಗ ಉತ್ತರ ಸಿಕ್ಕಿದೆ. ಕಾಶ್ಮೀರದಲ್ಲಿ ಉಗ್ರರ ಉಪಟಳ ಕಡಿಮೆಯಾಗುವುದಿಲ್ಲ ಎಂದವರಿಗೆ ಬದಲಾದ ಕಾಶ್ಮೀರ ಕುರಿತು ಉತ್ತರ ಸಿಕ್ಕಿದೆ. ಬಾಹ್ಯಾಕಾಶಕ್ಕೂ ನಮಗೂ ಸಂಬಂಧವೇ ಇಲ್ಲವೆಂಬಂತೆ ವರ್ತಿಸುತ್ತಿದ್ದ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು 'ಚಂದ್ರಯಾನ–3' ಯಶಸ್ಸಿನಿಂದ ಆ ದೇಶಗಳ ವರ್ತನೆಗಳೇ ಬದಲಾಗಿವೆ. ಸೂರ್ಯನ ಅಧ್ಯಯನಕ್ಕೂ ಉಪಗ್ರಹ ಉಡಾವಣೆಗೆ ಇಸ್ರೋ ವಿಜ್ಞಾನಿಗಳು ದಿನಾಂಕ ನಿಗದಿಗೊಳಿಸಿದ್ದಾರೆ. ಹಾಗಾಗಿ ಬದಲಾದ ಭಾರತವನ್ನು ಸ್ವಾಗತಿಸಲು ನಮ್ಮ ಯುವಕರು 2024ಕ್ಕೆ ತಯಾರಾಗಬೇಕಿದೆ ಎಂದು ಕರೆ ನೀಡಿದರು.

ನಮ್ಮದು ಸಂಘರ್ಷದಿಂದ ಕೂಡಿದ ಇತಿಹಾಸ. ಈ ನೆಲದ ಚರಿತ್ರೆಯನ್ನು ಆಕ್ರಮಣಕಾರರು ತಮಗೆ ಬೇಕಾದಂತೆ ಚಿತ್ರಿಸಿ, ಇಂದಿನ ಮಕ್ಕಳಲ್ಲಿ ಅದೇ ಇತಿಹಾಸ ಎಂದು ನಂಬಿಸುವ ಕಾರ್ಯ ನಡೆದಿರುವುದು ಬೇಸರ ಸಂಗತಿ ಎಂದರು.

ದೇಶಾದ್ಯಂತ ಹಿಂದುತ್ವ ಮತ್ತು ಹಿಂದು ಸಮಾಜದ ಯುವಕರನ್ನು ಬದಲಾದ ಭಾರತಕ್ಕೆ ಕೈ ಜೋಡಿಸುವ ಕಾರ್ಯಕ್ಕೆ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ಸಂಘಟನೆಯಾಗಬೇಕು. ಸಂಘಟನೆಯಲ್ಲಿ ಬಲವಿದೆ ಎಂಬುದಕ್ಕೆ ಶ್ರೀರಾಮಮಂದಿರ ನಿರ್ಮಾಣವೇ ಸಾಕ್ಷಿ ಎಂದರು.

ಈ ಸಂದರ್ಭದಲ್ಲಿ ವಿಹಿಂದ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಆರ್‌ಎಸ್‌ಎಸ್ ಮುಖಂಡ ಗೋಪಾಲ್ ಜೀ ಸೇರಿದಂತೆ ಅನೇಕರು ಇದ್ದರು.